
"VARTHA JANAPADA" Monthly - December 2020
"ವಾರ್ತಾ ಜನಪದ" ಮಾಸಿಕ – ಡಿಸೆಂಬರ್ 2020

Page No. -52
RNI No. KAR/KAN/2017/75029

Regd No.KA/BGGPO/2583/2018-20 Licensed to post without prepayment Licence No. PMG/BG/ WPP-365/2018-20
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26

ಧಾರ್ಮಿಕ ದತ್ತಿ ಇಲಾಖೆ




# ಶಬರಿಮಲೆ ಯಾತ್ರಾರ್ಥಿಗಳ ಗಮನಕ್ಕೆ



ಶಬರಿಮಲೆ ಯಾತ್ರೆಗೆ ಸಂಬಂಧಿಸಿದಂತೆ ಕೇರಳ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳನ್ನು ಶ್ರೀಕ್ಷೇತ್ರ ಶಬರಿಮಲೆಗೆ ತೆರಳುವ ಕರ್ನಾಟಕ ರಾಜ್ಯದ ಭಕ್ತಾದಿಗಳು, ಯಾತ್ರಾರ್ಥಿಗಳು ಹಾಗೂ ಸಾರ್ವಜನಿಕರ ಗಮನಕ್ಕೆ ತರಬಯಸಿದೆ.

ಶ್ರೀ ಬಿ.ಎಸ್.ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

1. ಎಲ್ಲಾ ಯಾತ್ರಾರ್ಥಿಗಳು ವೆಬ್‌ಸೈಟ್: **https://sabarimalaonline.org**ನಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು ಅನುಮತಿ ದೊರೆತ ನಂತರವೇ, ಶಬರಿಮಲೆ ಯಾತ್ರೆಗೆ ತೆರಳ ಶ್ರೀ ಅಯ್ಯಪ್ಪ ಸ್ವಾಮಿಯ ದರ್ಶನ ಪಡೆಯಲು ಅವಕಾಶ ದೊರೆಯುತ್ತದೆ.
2. ಪ್ರಥಮವಾಗಿ ಪ್ರತಿದಿನ ಒಂದು ಸಾವಿರ ಯಾತ್ರಾರ್ಥಿಗಳಿಗೆ ಮಾತ್ರ ದರ್ಶನ ಭಾಗ್ಯದ ಅವಕಾಶವಿರುತ್ತದೆ, ವಾರಾಂತ್ಯಗಳಲ್ಲಿ ಎರಡು ಸಾವಿರ ಯಾತ್ರಾರ್ಥಿಗಳಿಗೆ ದರ್ಶನದ ಅವಕಾಶವಿರುತ್ತದೆ. ನೋಂದಣಿಯ ಸಂದರ್ಭದಲ್ಲಿ ಮೊದಲು ನೋಂದಣಿ ಮಾಡಿಕೊಂಡವರಿಗೆ ಮೊದಲ ಆದ್ಯತೆ ವಿಧಾನ ಅನುಸರಿಸಲಾಗುತ್ತದೆ.
3. ಶ್ರೀ ಕ್ಷೇತ್ರಕ್ಕೆ ಭೇಟಿ ನೀಡುವ 48 ಗಂಟೆಗಳ ಮುನ್ನ ಕೋವಿಡ್-19 ಪರೀಕ್ಷೆ ಮಾಡಿಸಿಕೊಂಡು ಕೋವಿಡ್ ಇಲ್ಲದಿರುವ ಬಗ್ಗೆ ಪ್ರಮಾಣ ಪತ್ರ ಹೊಂದಿರುವುದು ಕಡ್ಡಾಯ. ಪ್ರವೇಶ ಸ್ಥಳದಲ್ಲಿ **Rapid Angtigen Test** ಅವಕಾಶ ಕಲ್ಪಿಸಲಾಗಿದೆ, ಅದರ ವೆಚ್ಚವನ್ನು ಯಾತ್ರಾರ್ಥಿಗಳೇ ಭರಿಸಬೇಕಾಗಿರುತ್ತದೆ.
4. ಹತ್ತು ವರ್ಷ ವಯೋಮಾನದೊಳಗೆ ಮತ್ತು 60 ವರ್ಷ ವಯೋಮಾನ ಮೇಲ್ಪಟ್ಟವರಿಗೆ ಹಾಗೂ **co-morbidities** (ಅನಾರೋಗ್ಯದ ಅಥವಾ ಕಾಯಿಲೆಯ ಲಕ್ಷಣಗಳು) ಇರುವಂತಹವರಿಗೆ ಯಾತ್ರಾ ಪ್ರವೇಶಕ್ಕೆ ಅನುಮತಿ ಇರುವುದಿಲ್ಲ.
5. ಬಿಪಿಎಲ್ ಕಾರ್ಡ್, ಆಯುಷ್ಮಾನ್ ಕಾರ್ಡ್ ಹೊಂದಿರುವವರು ಯಾತ್ರೆಗೆ ತೆರಳುವ ಸಮಯದಲ್ಲಿ ಅದನ್ನು ಜೊತೆಯಲ್ಲಿ ಕೊಂಡೊಯ್ಯಬೇಕು.
6. ತುಪ್ಪದ ಅಭಿಷೇಕ, ಪಂಪಾನದಿ ಸ್ನಾನ, ಸನ್ನಿಧಾನಂನಲ್ಲಿ ರಾತ್ರಿ ತಂಗುವುದು ಹಾಗೂ ಪಂಪಾ ಮತ್ತು ಗಣಪತಿ ದೇವಾಲಯಗಳಿಗೆ ಪ್ರವೇಶಾವಕಾಶವಿರುವುದಿಲ್ಲ.
7. ಯಾತ್ರಾರ್ಥಿಗಳ ಪ್ರಯಾಣಕ್ಕೆ ಎರುಮೆಲು ಮತ್ತು ವೇದಸಾರಿಕ್ಕರ ಮಾರ್ಗದಲ್ಲಿ ಮಾತ್ರ ಅವಕಾಶ ಇರುತ್ತದೆ.

Downloaded From: www.kpscvaani.com

# ವಾರ್ತಾ ಜನಪದ

ವಾರ್ಷಿಕ ಚಂದಾ ರೂ.25/-

ಡಿಸೆಂಬರ್ 2020





# ಕೋವಿಡ್-19 ಮನೆ ಆರೈಕೆ

ಪ್ರತ್ಯೇಕವಾಗಿರಿ.

ಮಾನಸಿಕವಾಗಿ ಸಮೀಪದಲ್ಲೇ ಇರಿ.
ಆದರೆ, ದೈಹಿಕವಾಗಿ ದೂರವಿರಿ!

## ನಿಮ್ಮ ಮನೆಯ ಸೌಕರ್ಯ ಬಳಸಿಕೊಂಡು ಕೋವಿಡ್ ವಿರುದ್ಧ ಹೋರಾಡಿ

| | |
|---|---|
| 1 | ರೋಗ ಲಕ್ಷಣ ರಹಿತ ಹಾಗೂ ಮೃದು ರೋಗ ಲಕ್ಷಣವಿರುವ ರೋಗಿಗಳಿಗೆ ಮನೆ ಮಟ್ಟದಲ್ಲಿ ಆರೈಕೆ ಪಡೆಯಲು ಅವಕಾಶ. |
| 2 | ಪ್ರತಿ ದಿನ ರೋಗಿಯ ಆರೋಗ್ಯ ಸ್ಥಿತಿಯ ಮೇಲ್ವಿಚಾರಣೆಗೆ ಟೆಲಿ ಮಾನಿಟರಿಂಗ್ ವ್ಯವಸ್ಥೆ. |
| 3 | ರೋಗಿಗಳಿಗೆ ಆಸ್ಪತ್ರೆಯಲ್ಲಿ ಹಾಸಿಗೆಗಳನ್ನು ಕಾಯ್ದಿರಿಸಲು ಹಾಗೂ ಇನ್ನಿತರ ವೈದ್ಯಕೀಯ ತುರ್ತು ಪರಿಸ್ಥಿತಿಯಲ್ಲಿ ರೋಗಿಗಳನ್ನು ಸ್ಥಳಾಂತರಿಸಲು ನಿರ್ದಿಷ್ಟವಾದ ಸ್ಥಳಾಂತರ ತಂಡಗಳ ನಿಯೋಜನೆ. |

## 10 ದಿನಗಳವರೆಗೆ ಮನೆಯಲ್ಲೇ ಪ್ರತ್ಯೇಕ ಆರೈಕೆಗೆ ಅವಕಾಶ. ಇನ್ನೂ 7 ದಿನಗಳವರೆಗೆ ಮನೆಯಿಂದ ಹೊರಬರಬೇಡಿ.



ರೋಗಿಗಳು ತಮ್ಮ ಆರೋಗ್ಯದ ಸ್ವಯಂ ಮೇಲ್ವಿಚಾರಣೆಗೆ ಪಲ್ಸ್ ಆಕ್ಸಿಮೀಟರ್, ಡಿಜಿಟಲ್ ಥರ್ಮಾಮೀಟರ್, ಮುಖಗವಸು, ಕೈಗವಸು, ಸ್ಯಾನಿಟೈಸರ್‌ನ್ನು ಹೊಂದಿರಬೇಕು.



ಮನೆಮಟ್ಟದ ಆರೋಗ್ಯ ಆರೈಕಾ ಸೇವಾ ಜಾಲದಲ್ಲಿ ಪರಿಣಿತ ವ್ಯಕ್ತಿಗಳಿಂದ 10 ದಿನಗಳ ಕಾಲ ರೋಗಿಗಳ ಆರೋಗ್ಯ ಸ್ಥಿತಿಯ ನಿಯಮಿತ ಮೇಲ್ವಿಚಾರಣೆ.



ರೋಗಿಗೆ ವೈದ್ಯರ ಸಮಾಲೋಚನೆ ಮತ್ತು ವೈದ್ಯಕೀಯ ಸೇವೆಗಳಿಗೆ ಕರೆ ಮಾಡಲು ಪ್ರತಿ ರೋಗಿಗೆ ನಿರ್ದಿಷ್ಟ ದೂರವಾಣಿ ಸಂಖ್ಯೆಯನ್ನು ನೀಡಲಾಗುವುದು.



ಟೆಲಿ-ಕರೆ ಮುಲಕ ವೃತ್ತಿಪರ ಆರೋಗ್ಯ ಸಿಬ್ಬಂದಿಯಿಂದ ದೈನಂದಿನ ಮೇಲ್ವಿಚಾರಣೆ.

ಆರೈಕೆ ನೀಡಿದ ವೈದ್ಯರಿಂದ / ಆರೋಗ್ಯ ಆರೈಕಾ ಸೇವಾ ಜಾಲದಲ್ಲಿ ಪರಿಣಿತರಿಂದ 17 ದಿನಗಳ ನಂತರ ಧೃಡೀಕರಣ ಪ್ರಮಾಣ ಪತ್ರವನ್ನು ನೀಡಲಾಗುವುದು. ತದನಂತರ ವ್ಯಕ್ತಿ ತನ್ನ ದೈನಂದಿನ ಕಾರ್ಯಚಟುವಟಿಕೆಗಳನ್ನು ಮುಂದುವರೆಸಬಹುದು.

**ಜ್ವರ, ನೆಗಡಿ, ಕೆಮ್ಮು ತರಹದ ಕೋವಿಡ್-19 ಲಕ್ಷಣಗಳಿದ್ದಲ್ಲಿ ಆಪ್ತಮಿತ್ರ ಸಹಾಯವಾಣಿ 14410 ಗೆ ಕರೆ ಮಾಡಿ**

**ಕೋವಿಡ್-19 ಬಗ್ಗೆ ಮಾಹಿತಿ ಮತ್ತು ಎಚ್ಚರಿಕೆಗಳಿಗಾಗಿ ಆರೋಗ್ಯ ಸೇತು ಆ್ಯಪ್ ಡೌನ್‌ಲೋಡ್ ಮಾಡಿ**

**ವೈದ್ಯಕೀಯ ತುರ್ತು ಪರಿಸ್ಥಿತಿಯಲ್ಲಿ ಆಂಬುಲೆನ್ಸ್ ಸೇವೆಯ ಅಗತ್ಯವಿದ್ದರೆ 108 ದೂರವಾಣಿ ಸಂಖ್ಯೆಗೆ ಕರೆ ಮಾಡಿ.**

Downloaded From: www.kpscvaani.com

# ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಹೊಸ ಆಯಾಮ



ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ಉಚಿತ!




**"ಸ್ಕಾಲರ್ಸ್ ವಿಂಗ್" (SCHOLAR'S WING) ಆ್ಯಪ್ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಲ್ಲಿ ಓದುತ್ತಿರುವ ದ್ವಿತೀಯ ಪಿಯು ವಿಜ್ಞಾನ (PCMB) ವಿದ್ಯಾರ್ಥಿಗಳಿಗೆ ಮಾತ್ರ**



ಮಾನ್ಯ ಸಮಾಜ ಕಲ್ಯಾಣ ಸಚಿವರಾದ ಶ್ರೀ ಬಿ. ಶ್ರೀರಾಮುಲುರವರು ವಿದ್ಯಾರ್ಥಿಗಳ ಜೊತೆ ಚರ್ಚಿಸುತ್ತಿರುವುದು.







Physics | Biology | Mathematics | Chemistry

- ಕೋವಿಡ್-19ರ ಸೋಂಕಿನ ವಿಷಮ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳ ಭವಿಷ್ಯ ಮೊಟಕಾಗದಂತೆ ನೋಡಿಕೊಳ್ಳಲು ಸರ್ಕಾರದಿಂದ ಈ ಕ್ರಮ
- "ಸ್ಕಾಲರ್ಸ್ ವಿಂಗ್" ಆ್ಯಪ್ – ಇದು ಒಂದು ಅತ್ಯಾಧುನಿಕ ಶೈಕ್ಷಣಿಕ ವೇದಿಕೆ
- ಸಮಾಜ ಕಲ್ಯಾಣ ಇಲಾಖೆಯಿಂದ ಈ ಆ್ಯಪ್ ಅಭಿವೃದ್ಧಿ ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬಿಡುಗಡೆ
- ದ್ವಿತೀಯ ಪಿಯು ವಿಜ್ಞಾನ ವಿಭಾಗದ (PCMB) Theory ಮತ್ತು CET, NEET, IIT-JEE ಹಾಗೂ Board Exam ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವುದು ಆ್ಯಪ್‌ನ ಉದ್ದೇಶ
- ಈ ಆ್ಯಪ್‌ನಲ್ಲಿ ಪಠ್ಯಕ್ರಮದ ವಿಷಯಗಳ ಬಗ್ಗೆ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಬೋಧನೆ ಮತ್ತು ತರಬೇತಿ ಉಪನ್ಯಾಸಗಳಿರುವವು.
- ವಿದ್ಯಾರ್ಥಿಗಳು ಈ ಆ್ಯಪ್ ಅನ್ನು ಪ್ಲೇಸ್ಟೋರ್‌ನಿಂದ ಉಚಿತವಾಗಿ ಡೌನ್‌ಲೋಡ್ ಮಾಡಿಕೊಳ್ಳಬಹುದು
- ಪ್ರಥಮ ಪಿಯು ರಿವಿಜನ್, ಸ್ವ-ಮೌಲ್ಯಮಾಪನ (Self-valuation), ಬಹು ಆಯ್ಕೆ ಪ್ರಶ್ನೆಗಳು (MCQ), ಮತ್ತು ವಿಡಿಯೋ ವಿವರಣೆ, Unlimited practice test & mock tests ಒಳಗೊಂಡಿರುವುದು.

"Scholar's wing" App ಅನ್ನು Play Store ನಿಂದ Download ಮಾಡಿಕೊಳ್ಳಿ.
App ಎಲ್ಲಾ ಮಾಹಿತಿಗಳನ್ನು ಒಳಗೊಂಡಿದ್ದು, ಇದರಿಂದ ವಾರ್ಷಿಕ ಪರೀಕ್ಷೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕಗಳನ್ನು ಪಡೆಯಬಹುದಾಗಿದೆ.





05 ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗಲಿರುವ ಕರ್ನಾಟಕ ಪ್ರವಾಸೋದ್ಯಮ ನೀತಿ 2020–25
• ಬಿ.ಜಿ.ಪೂರ್ಣಿಮ

14 ಸರ್ಕಾರಿ ಐಟಿಐಗಳನ್ನು ಮೇಲ್ದರ್ಜೆಗೇರಿಸಲು ಒಪ್ಪಂದ

17 ಭಾಷಾಂತರ ಇಲಾಖೆ: ಒಂದು ಪರಿಚಯ
• ಡಿ. ಪಿ. ಮುರಳೀಧರ್

20 ಕನ್ನಡ ಮಾಧ್ಯಮದಲ್ಲಿ ವಿಜ್ಞಾನ ಶಿಕ್ಷಣಕ್ಕೆ ಮುಂದಾದ ಸರ್ಕಾರ
• ಎನ್. ನಾಗರತ್ನಮ್ಮ

23 ಅನ್ನದಾತರಾದ ನಿರಾಶ್ರಿತರು
• ಧನಂಜಯಪ್ಪ ಬಿ

25 ರೇರಾ ಪ್ರಾಧಿಕಾರದ ಕ್ಷೇತ್ರದಲ್ಲಿ ಪಾರದರ್ಶಕತೆ
• ಪಿ.ಎಸ್. ಗುರುಮೂರ್ತಿ

30 ಎಚ್.ಐ.ವಿ–ಏಡ್ಸ್ ಭಯಬೇಡ:ಎಚ್ಚರಿಕೆ ಇರಲಿ
• ಡಾ. ಎಸ್. ಎಂ. ತಿಮ್ಮಾಪುರ

35 ವಿಶ್ವದ ಮೊಟ್ಟ ಮೊದಲ ಕರಡಿಧಾಮ
• ಡಾ.ಕರವೀರಪ್ರಭು ಕ್ಯಾಲಕೊಂಡ

38 ಅ 'ಗಣಿತ' ಮೇಧಾವಿ: ಶ್ರೀನಿವಾಸ್ ರಾಮಾನುಜನ್
• ಪ್ರಿಯಾಂಕ ವಿ. ಹೆಚ್

41 ಜಾನುವಾರುಗಳಿಗೂ ಬಂತು ವಿಶಿಷ್ಟ ಗುರುತಿನ ಸಂಖ್ಯೆ
• ಕಿಶನರಾವ್ ಕುಲಕರ್ಣಿ

43 ಕಲೆಯ ಬಲೆಯೊಳಡಗಿರುವ ಚರ್ಚ್
• ಸುಭಾಸ ಯಾದವಾಡ

45 ಕೃಷಿಯಲ್ಲಿ ಸಾಧನೆ ಮಾಡಿದ ಸ್ವಸಹಾಯ ಸಂಘದ ನಾರಿಯರು
• ಬಾಳೇಪುಣಿ

48 ಸಂಬಾರ ಬೆಳೆಗಳ ಉತ್ಪಾದನೆ ಹೆಚ್ಚಿಸಲು ಮಾರ್ಗೋಪಾಯಗಳು
• ಡಾ.ಹರ್ಷವರ್ಧನ್.ಎಂ

50 ಪದಬಂಧ–13
• ವಿದ್ಯಾ ವಿ. ಹಾಲಭಾವಿ



ಪ್ರಧಾನ ಸಂಪಾದಕರು
ಡಾ॥ ಪಿ. ಎಸ್. ಹರ್ಷ, ಐಪಿಎಸ್
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಡಿ.ಪಿ. ಮುರಳೀಧರ್
ಜಂಟಿ ನಿರ್ದೇಶಕರು

ಸಹನಾ ಎಂ.
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಪೂರ್ಣಿಮ

ಪ್ರಕಾಶಕರು
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ,
ಬೆಂಗಳೂರು – 560 001
Ph : 080-22028103 / 22028023
email : varthajanapada@yahoo.co.in
www.dipr.karnataka.gov.in

ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ಡಾ॥ ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು – 560 010




ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ



Downloaded From: www.kpscvaani.com

## ಓದುಗರಿಂದ...




ಡಾ.ಎಂ.ಎಸ್.ತಿಮ್ಮಾಪುರ ಅವರ 'ಕೊರೊನಾ ಭಯ ಬೇಡ ಎಚ್ಚರವಿರಲಿ' ಲೇಖನ ಸಮಯೋಚಿತ ಮತ್ತು ಸಮಂಜಸವಾಗಿತ್ತು. ಶ್ರೀಯುತರು ತಮ್ಮ ಲೇಖನದಲ್ಲಿ ಜನತೆ ಭಯ ಪಡದೆ ಸೂಕ್ತ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಿದರೆ ಹೆಚ್ಚಿನ ಹಾನಿಯಾಗುವುದನ್ನು ತಡೆಗಟ್ಟಬಹುದಾಗಿದೆ ಎಂಬ ಅಂಶವನ್ನು ಮನಮುಟ್ಟುವಂತೆ ತಿಳಿಸಿರುತ್ತಾರೆ. ಅವರಿಗೆ ಓದುಗರ ಪರವಾಗಿ ಧನ್ಯವಾದಗಳು.

**–ಹಿಮ ಕೆ.ಎಂ, ಕೃಷ್ಣರಾಜನಗರ**

---

ದೀಪಾವಳಿ ದೇಶದಾದ್ಯಂತ ಹೆಚ್ಚು ಸಡಗರದಿಂದ ಹಿರಿಯರು ಮತ್ತು ಕಿರಿಯರಾದಿಯಾಗಿ ಎಲ್ಲರೂ ಆಚರಿಸುವ ಹಬ್ಬವಾಗಿದೆ. ನಗರ ಪ್ರದೇಶಗಳಲ್ಲಿ ದೀಪಾವಳಿಯಂದು ಎಗ್ಗಿಲ್ಲದೆ ಮದ್ದು ಸುಡುವಿಕೆಯಿಂದ ಅಪಘಾತಗಳು ಸಂಭವಿಸುತ್ತದೆ. ಹಾಗೆಯೇ ಪ್ರತಿ ವರ್ಷ ಬಹಳಷ್ಟು ಮಕ್ಕಳು ಪಟಾಕಿ ಹಚ್ಚುವುದರಿಂದ ದೃಷ್ಟಿಯನ್ನು ಕಳೆದುಕೊಳ್ಳುತ್ತಾರೆ. ಈ ಹಿನ್ನೆಲೆಯಲ್ಲಿ ಲೇಖಕ ಮುನಿರಾಜು ಅವರು ಇಂತಹ ವಿಚಾರದ ಮೇಲೆ ಬೆಳಕು ಚೆಲ್ಲುವ ರೀತಿಯಲ್ಲಿ ದೀಪಾವಳಿ ಆಚರಣೆಯ ಕುರಿತು ಬರೆದಿರುವ ಲೇಖನ ಸಾರ್ವಜನಿಕರಿಗೆ ಅರಿವು ಮೂಡಿಸುವಂತಿತ್ತು.

**–ನರಸಿಂಹೇಗೌಡ, ಮಂಡ್ಯ**

---

ನವೆಂಬರ್ 2020 ಮಾಹೆಯ ವಾರ್ತಾ ಜನಪದದಲ್ಲಿ ವಿದ್ಯಾ ವಿ. ಹಾಲಭಾವಿ ಅವರು 'ಕನ್ನಡ ತಾಯಿ ಭುವನೇಶ್ವರಿಯ ಏಕೈಕ ದೇವಾಲಯ 'ಶೀರ್ಷಿಕೆಯಲ್ಲಿ ಬರೆದ ಲೇಖನದಲ್ಲಿ ಕನ್ನಡ ಸಾಮ್ರಾಜ್ಯವನ್ನು ಕಟ್ಟಿದ ಕದಂಬ ಅರಸರು ಕನ್ನಡ ಭುವನೇಶ್ವರಿಯನ್ನು ಕಲ್ಪಿಸಿಕೊಂಡರು ಎಂಬ ಮಾಹಿತಿಯೊಂದಿಗೆ ಸಮಗ್ರವಾಗಿ ದೇವಾಲಯದ ಇತಿಹಾಸವನ್ನು ಕನ್ನಡ ಅಭಿಮಾನಿಗಳಿಗೆ ಪರಿಚಯಿಸಿದ್ದಾರೆ. ಇದು ಬಹಳ ಉಪಯುಕ್ತ ಲೇಖನವಾಗಿದೆ. ಅವರಿಗೆ ನನ್ನ ಅನಂತ ಧನ್ಯವಾದಗಳು.

**–ಮಧುಸೂದನ ಬಾಗಲಕೋಟೆ**

---

ಮಾದಕ ವಸ್ತು ವ್ಯಸನರಿಗೆ ಅರಿವು ಮೂಡಿಸುವ ಬಗ್ಗೆ ನವೆಂಬರ್‌ನ ವಾರ್ತಾ ಜನಪದಲ್ಲಿ ಡಾ.ಎಸ್.ಬಿ.ಬಸೆಟ್ಟಿ ಅವರ ಲೇಖನ ಅತ್ಯಂತ ಪರಿಣಾಮಕಾರಿಯಾಗಿದೆ. ಲೇಖಕರು ಹೆಚ್ಚಿನ ಶ್ರಮವಹಿಸಿ ಲೇಖನವನ್ನು ಬರೆದಿದ್ದಾರೆ. ಲೇಖನ ಓದಿದ ಪ್ರತಿಯೊಬ್ಬರಿಗೂ ಮಾದಕವಸ್ತು ವ್ಯಸನದ ಕುರಿತು ಅರಿವು ಮೂಡಿರಲೇ ಬೇಕು.

ಅತಿ ಹೆಚ್ಚಿನ ಪ್ರಮಾಣದಲ್ಲಿ ಯುವ ಸಮುದಾಯದವರು ಮಾದಕವಸ್ತು ವ್ಯಸನಿಗಳಾಗುತ್ತಿರುವುದು ನಿಜಕ್ಕೂ ಆಘಾತಕಾರಿ ವಿಷಯವೇ ಸರಿ. ಸರ್ಕಾರವು ಮಾದಕವಸ್ತು ಕಳ್ಳಸಾಗಾಣಿಕೆ ಮಾಡುವವರಿಗೆ ಕಠಿಣ ಶಿಕ್ಷೆಯನ್ನು ನೀಡಿದಲ್ಲಿ, ಮಾದಕ ವಸ್ತುಗಳ ತಡೆಗೆ ಬ್ರೇಕ್ ಹಾಕಬಹುದು. ಹಾಗೆಯೇ ಮುಗ್ಧ ಮಕ್ಕಳು ಇದರ ವ್ಯಸನಕ್ಕೆ ಒಳಗಾಗುವುದನ್ನು ತಡೆಯಬಹುದು.

**–ರತ್ನ ಶ್ರೀನಿವಾಸ್, ಬಸವರಾಜಪುರ**

---

ವಾರ್ತಾ ಜನಪದದ ನವೆಂಬರ್ ಸಂಚಿಕೆಯಲ್ಲಿ ಡಿ.ಪಿ.ಮುರಳೀಧರ್ ಅವರು ಎಸ್‌ಪಿಬಿ ಕುರಿತು ಬರೆದಿರುವ ಲೇಖನದಲ್ಲಿ ಬಹಳಷ್ಟು ಅಪೂರ್ವ ಮಾಹಿತಿಯನ್ನು ಎಸ್‌ಪಿಬಿ ಅವರ ಅಭಿಮಾನಿಗಳ ಬಳಗಕ್ಕೆ ಒದಗಿಸಿದ್ದಾರೆ. ಡಾ.ಗುರಲಿಂಗಪ್ಪ ಅಂಕದ ಅವರು 'ಕನ್ನಡ ಭಾಷೆಯ ಉಳಿವು ಬೆಳವಣಿಗೆ ನಮ್ಮಿಂದಲೇ' ಎಂಬ ಶೀರ್ಷಿಕೆಯಡಿ ಬರೆದಿರುವ ಲೇಖನದಲ್ಲಿ ಹೇಳಿರುವಂತೆ ಕನ್ನಡ ಭಾಷೆಯ ಉಳಿವಿಗೆ, ಬೆಳವಿಗೆ ನಾವೇ ಕಾರಣ ಕರ್ತರಾಗುತ್ತೇವೆ. ಒಟ್ಟಿನಲ್ಲಿ ಡಿಸೆಂಬರ್ ಸಂಚಿಕೆಯು ಸಂಗ್ರಹ ಯೋಗ್ಯ ಸಂಚಿಕೆಯಾಗಿ ಮೂಡಿ ಬಂದಿದೆ.

**–ಶಾಂತಕುಮಾರ್, ಪಾಂಡವಪುರ**

---

'ಕನ್ನಡದ ದಾಸಯ್ಯ: ಶಾಂತಕವಿಗಳು' ಲೇಖನದಲ್ಲಿ ಶಾಂತಕವಿಗಳು ಅಖಿಲ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಆರ್ಥಿಕ ಮುಗ್ಗಟ್ಟು ಎದುರಾದಾಗ, ಜೋಳಿಗೆ ಹಿಡಿದು ಕನ್ನಡದ ಕೀರ್ತನೆಗಳನ್ನು ಹಾಡುತ್ತಾ ಭಿಕ್ಷಾಟನೆ ಮಾಡಿದ್ದರು ಎಂಬುದನ್ನು ಓದಿ ನನಗೆ ರೋಮಾಂಚನವಾಯಿತು.

ಕರ್ನಾಟಕ ರಾಜ್ಯೋತ್ಸವದ ನಿಮಿತ್ತ ನವೆಂಬರ್ ಮಾಹೆಯ ಸಂಚಿಕೆಯಲ್ಲಿ ಕನ್ನಡಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಿದ್ದ ಇಂತಹ ಮಹಾನ್ ವ್ಯಕ್ತಿ ಕುರಿತು ಲೇಖನ ಪ್ರಕಟಿಸಿದ್ದು, ಪತ್ರಿಕೆಯ ಶೋಭೆಯನ್ನು ಹೆಚ್ಚಿಸಿದೆ ಎಂದರೆ ತಪ್ಪಾಗಲಾರದು.

**– ಸುಜಾತಾ ಕೃಷ್ಣಮೂರ್ತಿ, ಹಂಪಿ**

---

ನವೆಂಬರ್ ವಾರ್ತಾ ಜನಪದ ಸಂಚಿಕೆಯಲ್ಲಿ ಪ್ರಕಟವಾಗಿರುವ ಕೊರೊನಾ ಸಾಂಕ್ರಾಮಿಕ ರೋಗದ ಕುರಿತು ಸಾರ್ವಜನಿಕರಿಗೆ ಜಾಗೃತಿ ಮೂಡಿಸುವಂತಹ ಲೇಖನ ತುಂಬಾ ಉಪಯುಕ್ತವಾಗಿದೆ. ಲೇಖಕರು ಕೂಡ ಕೊರೊನಾ ವಿಚಾರವಾಗಿ ಸಾರ್ವಜನಿಕರಿಗೆ ಬೇಕಾಗಿರುವಂತಹ ಮಾಹಿತಿಯನ್ನೇ ನೀಡಿದ್ದಾರೆ. ಲೇಖನದಲ್ಲಿ ಕೊರೊನಾಗೆ ಹೆದರಿ ಕೂರುವ ಬದಲು, ರೋಗ ಹರಡದಂತೆ ಎಚ್ಚರ ವಹಿಸುವುದು ಹೇಗೆ ಎಂಬುದರ ಮೇಲೆ ಬೆಳಕು ಚೆಲ್ಲಿದ್ದಾರೆ.

**–ಮುನಿರತ್ನ, ಐಬಾಸಪೂರ**

'ವಾರ್ತಾ ಜನಪದ' ಮಾಸಿಕ ಈಗ
www.kanaja.inನಲ್ಲಿ ಲಭ್ಯ

ವಾರ್ಷಿಕ ಚಂದಾ ರೂ.25/–


**ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಕಡ್ಡಾಯವಾಗಿ ಸೇವಾಸಿಂಧುವಿನ ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.**

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Downloaded From: www.kpscvaani.com

ರಾಜ್ಯದ ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕವಾಗಲಿರುವ

# ಕರ್ನಾಟಕ ಪ್ರವಾಸೋದ್ಯಮ ನೀತಿ 2020-25




ಬಿ.ಜಿ.ಪೂರ್ಣಿಮ

**ರಾಜ್ಯ ಸರ್ಕಾರವು ಪ್ರವಾಸೋದ್ಯಮ ಹೊಸ ಕರಡು ನೀತಿ 2020–25 ಅನ್ನು ಲೋಕಾರ್ಪಣೆ ಮಾಡುವ ಮೂಲಕ ರಾಜ್ಯದ ಪ್ರವಾಸೋದ್ಯಮವನ್ನು ದೇಶದಲ್ಲೇ ಮೊದಲ ಸ್ಥಾನಕ್ಕೆ ತರುವ ನಿಟ್ಟಿನಲ್ಲಿ ಹೆಜ್ಜೆ ಇರಿಸಿದೆ ಎಂದರೆ ತಪ್ಪಾಗಲಾರದು.**







ಪ್ರವಾಸೋದ್ಯಮದಲ್ಲಿ ಮೂರನೇ ಸ್ಥಾನದಲ್ಲಿರುವ ರಾಜ್ಯಕ್ಕೆ ದೇಶ–ವಿದೇಶಗಳ ಪ್ರವಾಸಿಗರನ್ನು ಆಕರ್ಷಿಸಿ, ರಾಜ್ಯವನ್ನು ಪ್ರವಾಸೋದ್ಯಮದಲ್ಲಿ ಪ್ರಥಮ ಸ್ಥಾನಕ್ಕೆ ತರಲು ಈ ಹೊಸ ಕರಡು ನೀತಿ ಸಹಕಾರಿಯಾಗಲಿದೆ.

ವಿಶ್ವ ಸಂಸ್ಥೆಯ ವಿಶ್ವ ಪ್ರವಾಸೋದ್ಯಮ ಸಂಸ್ಥೆಯು 2020ರ ವರ್ಷವನ್ನು **'ಪ್ರವಾಸೋದ್ಯಮ ಮತ್ತು ಗ್ರಾಮಿಣಾಭಿವೃದ್ಧಿ ವರ್ಷ'** ಎಂಬುದಾಗಿ ಘೋಷಿಸಿದೆ.

ಈ ಹಿನ್ನೆಲೆಯಲ್ಲಿ **'ಕರ್ನಾಟಕ ಪ್ರವಾಸೋದ್ಯಮ ನೀತಿ – 2020–25'** ರಲ್ಲಿ ಕೃಷಿ ಹಾಗೂ ಗ್ರಾಮೀಣ ಪ್ರವಾಸೋದ್ಯಮಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡುವ ಮೂಲಕ ಗ್ರಾಮೀಣ ಕರ್ನಾಟಕದ ಅದ್ಭುತ ಆಯಾಮಗಳನ್ನು ಅನಾವರಣಗೊಳಿಸುವುದರೊಂದಿಗೆ ಸ್ಥಳೀಯ ಸಮುದಾಯದ ಭಾಗವಹಿಸುವಿಕೆ ಮೂಲಕ ಅವರ ವೈಶಿಷ್ಟ್ಯಪೂರ್ಣ ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಲಿದೆ. ಜೊತೆಗೆ ಲಂಬಾಣಿ ಮತ್ತು ಆದಿವಾಸಿ ಜನಾಂಗದ ಸಂಸ್ಕೃತಿ ಮತ್ತು ಪರಂಪರೆಯ ಪ್ರದರ್ಶನ ಮತ್ತು ಅಭಿವೃದ್ಧಿಗೆ ಪ್ರೋತ್ಸಾಹ ನೀಡುತ್ತದೆ.

"ಕರ್ನಾಟಕ ಪ್ರವಾಸೋದ್ಯಮ ನೀತಿ – 2020–25 ಅನ್ನು ಸೆಪ್ಟೆಂಬರ್ 27 ರಂದು ವಿಶ್ವ ಪ್ರವಾಸೋದ್ಯಮ ದಿನಾಚರಣೆಯಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಬಿಡುಗಡೆ ಮಾಡಿದರು. ಈ ನೂತನ 2020–25 ಪ್ರವಾಸೋದ್ಯಮ ನೀತಿಯು ಅಂದಿನಿಂದ ಮುಂದಿನ 5 ವರ್ಷಗಳ ಅವಧಿಯವರೆಗೆ ಜಾರಿಯಲ್ಲಿರುತ್ತದೆ.

ಈ ನೀತಿಯ ಅವಧಿಯಲ್ಲಿ ರೂ. 500.00 ಕೋಟಿಗಳ ಸಹಾಯಧನ, ಪ್ರೋತ್ಸಾಹಧನ ಹಾಗೂ ರಿಯಾಯಿತಿಗಳನ್ನು ನೀಡುವ ಮೂಲಕ ರೂ. 5000.00 ಕೋಟಿಗಳ ನೇರ ಬಂಡವಾಳ ಆಕರ್ಷಣೆಗೆ ಒತ್ತು ನೀಡಲಾಗಿದೆ. ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹತ್ತು ಲಕ್ಷಕ್ಕೂ ಹೆಚ್ಚು ಉದ್ಯೋಗವಕಾಶಗಳು ಸೃಷ್ಟಿಯಾಗಲಿದೆ.

ಕರ್ನಾಟಕದಲ್ಲಿ ಪ್ರವಾಸೋದ್ಯಮದ ಬೆಳವಣಿಗೆಗಾಗಿ ಪೂರಕವಾದ ವಾತಾವರಣವನ್ನು ಕಲ್ಪಿಸಲು, ಪ್ರವಾಸೋದ್ಯಮ ವಲಯದಲ್ಲಿ ಹೂಡಿಕೆಗೆ ಅನುಕೂಲ ಕಲ್ಪಿಸಲು, ಪ್ರೋತ್ಸಾಹಕಗಳನ್ನು ಹಾಗೂ ಸಹಾಯಧನವನ್ನು ಒದಗಿಸುವ ಮೂಲಕ ಹೂಡಿಕೆದಾರರಿಗೆ ಪ್ರೋತ್ಸಾಹಿಸಲು ಕರ್ನಾಟಕ ಪ್ರವಾಸದೋದ್ಯಮ ನೀತಿ – 2020–25 ಅತ್ಯಂತ ಸಹಾಯಕಾರಿಯಾಗಲಿದೆ.

ಒಟ್ಟಿನಲ್ಲಿ ರಾಜ್ಯದ ಪ್ರವಾಸೋದ್ಯಮ ವಲಯವನ್ನು ಉತ್ತಮಪಡಿಸಲು, ಕರ್ನಾಟಕವನ್ನು ಚಲನಶೀಲ, ಸುಸ್ಥಿರ ಮತ್ತು ಅತ್ಯಂತ ನೆಚ್ಚಿನ ಪ್ರವಾಸೋದ್ಯಮ ತಾಣವನ್ನಾಗಿ ಅಭಿವೃದ್ಧಿಪಡಿಸುವುದು ಈ ಹೊಸ ನೀತಿಯ ಉದ್ದೇಶವಾಗಿದೆ.



**ಕರ್ನಾಟಕದಲ್ಲಿ ಪ್ರವಾಸೋದ್ಯಮದ ಬೆಳವಣಿಗೆಗಾಗಿ ಪೂರಕವಾದ ವಾತಾವರಣವನ್ನು ಕಲ್ಪಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ಕರ್ನಾಟಕ ಪ್ರವಾಸೋದ್ಯಮ ನೀತಿ 2020–25 ರ ಮೂಲಕ ಪ್ರವಾಸೋದ್ಯಮ ವಲಯದಲ್ಲಿ ಹೂಡಿಕೆಗೆ ಅನುಕೂಲ ಕಲ್ಪಿಸಲು ಪ್ರೋತ್ಸಾಹಕಗಳನ್ನು ಹಾಗೂ ಸಹಾಯಧನವನ್ನು ಒದಗಿಸುವ ಮೂಲಕ ಹೂಡಿಕೆದಾರರಿಗೆ ಪ್ರೋತ್ಸಾಹಿಸಲು ಬಯಸುತ್ತೇವೆ. ಪ್ರವಾಸೋದ್ಯಮ ವಲಯನ್ನು ಉತ್ತಮಪಡಿಸಲು ಈ ಪ್ರವಾಸೋದ್ಯಮ ನೀತಿಯು ಅತ್ಯಂತ ಸಹಾಯಕಾರಿಯಾಗುತ್ತದೆ ಎಂಬ ಆಶಾಭಾವನೆ ನನ್ನದಾಗಿದೆ.**

**–ಬಿ.ಎಸ್.ಯಡಿಯೂರಪ್ಪ,** ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಹಿಂದಿನ ಕರ್ನಾಟಕ ಪ್ರವಾಸೋದ್ಯಮ ನೀತಿ 2015–20ರ ಯಶಸ್ಸು, ವೈಫಲ್ಯತೆ ಮತ್ತು ಅನುಭವಗಳ ಮಾರ್ಗದರ್ಶನದೊಂದಿಗೆ ಕರ್ನಾಟಕ ಸರ್ಕಾರದ ಮುನ್ನೋಟವನ್ನು ಸಾಧಿಸುವ ಉದ್ದೇಶದಿಂದ "ಕರ್ನಾಟಕ ಪ್ರವಾಸೋದ್ಯಮ ನೀತಿ – 2020–25" ಅನ್ನು ರೂಪಿಸಲಾಗಿದೆ.

ಕರ್ನಾಟಕ ಪ್ರವಾಸೋದ್ಯಮ ನೀತಿ, 2020–25 ಅನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ಜಾಗತಿಕ ಪ್ರಯಾಣ ಮತ್ತು ಪ್ರವಾಸೋದ್ಯಮವನ್ನು ವಾಸ್ತವವಾಗಿ ಸ್ತಬ್ಧವಾಗಿಸಿದ್ದರಿಂದ ಪ್ರವಾಸೋದ್ಯಮವು ನಷ್ಟವನ್ನು ಅನುಭವಿಸಿತ್ತು. ಆದ್ದರಿಂದ ನೀತಿಯಲ್ಲಿ 'ನಿಮ್ಮ ಸುರಕ್ಷೆ ನಮ್ಮ ಜವಾಬ್ದಾರಿ' ಎಂಬ ಘೋಷ ವಾಕ್ಯದೊಂದಿಗೆ ರಾಜ್ಯದಲ್ಲಿನ ಪ್ರವಾಸೋದ್ಯಮದಲ್ಲಿ ಸುರಕ್ಷತೆಗೆ ಹೆಚ್ಚಿನ ಒತ್ತು ನೀಡಲಾಗಿದೆ.

ನಮ್ಮ ರಾಜ್ಯದ ಆಹ್ಲಾದಕರವಾದ ಹವಾಮಾನ, ಕಾಸ್ಮೋಪಾಲಿಟನ್ ಬಹು ಸಂಸ್ಕೃತಿ ಮತ್ತು ಅತ್ಯುತ್ತಮವಾಗಿ ಸ್ಪಂದಿಸುವ ಆಡಳಿತ, ಮುಂತಾದ ಅಂಶಗಳು ವ್ಯವಹಾರಗಳ ಸ್ಥಾಪನೆ ಮತ್ತು ಏಳಿಗೆಗೆ ಅತ್ಯುತ್ತಮವಾದ ತಾಣವನ್ನಾಗಿಸಿದೆ. ರಾಜ್ಯದ ಪ್ರವಾಸೋದ್ಯಮ ತಾಣಗಳು ಪರಂಪರೆ, ಪರಿಸರ, ಆಧ್ಯಾತ್ಮಿಕತೆ, ಸಂಸ್ಕೃತಿ, ಸಾಹಸ ಕಾರ್ಯ, ಕರಾವಳಿ, ಸ್ವಾಸ್ಥ್ಯ, ಗ್ರಾಮೀಣ ಹಾಗೂ ನಗರವನ್ನೂ ಒಳಗೊಂಡಂತೆ ಹಲವಾರು ವಿಷಯ ವ್ಯಾಪ್ತಿಯ ಪ್ರವಾಸೋದ್ಯಮ ವೈವಿಧ್ಯಮಯ



ಸಂಪನ್ಮೂಲವನ್ನು ಒಳಗೊಂಡಿದೆ. ಹಾಗಾಗಿ ಕರ್ನಾಟಕ 'ಒಂದು ರಾಜ್ಯ, ಹಲವು ಜಗತ್ತು' ಎಂಬ ಘೋಷ ವಾಕ್ಯದಲ್ಲಿ 2020–25 ನೀತಿಯನ್ನು ಅನುಷ್ಠಾನಗೊಳಿಸಲಾಗಿದೆ.

2019 ರಲ್ಲಿ ಕರ್ನಾಟಕ ಪ್ರವಾಸೋದ್ಯಮ ವಲಯವು ರಾಜ್ಯದ GSDP ಗೆ 14.8% ರಷ್ಟು ಇದ್ದು, ಅದನ್ನು ಕನಿಷ್ಠ ಮುಂದಿನ ಐದು ವರ್ಷಗಳಲ್ಲಿ 20% ರಷ್ಟಿಗೆ ಏರಿಸಲು ಈ ನೀತಿಯಲ್ಲಿ ಯೋಜನೆಯನ್ನು ರೂಪಿಸಲಾಗಿದೆ. ನೀತಿಯು 26 ವಿವಿಧ ಪ್ರವಾಸೋದ್ಯಮ ವೈವಿಧ್ಯಗಳನ್ನು ಗುರುತಿಸಿದ್ದು, ಇವುಗಳ ಪೈಕಿ 3 C's (Culture –ಸಂಸ್ಕೃತಿ ವೈಭವ Craft–ಕರಕುಶಲತೆ, Cuisine - ಆಹಾರ ವೈವಿಧ್ಯತೆಗಳಿಗೆ ಒತ್ತು ನೀಡಲಿದೆ. ಹಾಗೆಯೇ ಪ್ರವಾಸೋದ್ಯಮ ಅಭಿವೃದ್ಧಿಯನ್ನು ಐದು AS-(5As) ಗಳಾದ (Attraction : ಆಕರ್ಷಣೆ, Accommodation : ವಸತಿ, Accessibility - ಸಂಪರ್ಕ, Amenities : ಪ್ರವೇಶ ಸೌಲಭ್ಯಗಳು ಮತ್ತು Activities : ಚಟುವಟಿಕೆಗಳು) ಆಯಾಮಗಳ ಪೂರಕ ಅಭಿವೃದ್ಧಿಗೆ ಒತ್ತು ನೀಡಿ, ಈ ನೀತಿಯನ್ನು ರೂಪಿಸಲಾಗಿದೆ.

ಒಟ್ಟಿನಲ್ಲಿ ದೇಶೀಯ ಹಾಗೂ ಅಂತರರಾಷ್ಟ್ರೀಯ ಪ್ರವಾಸೋದ್ಯಮ ನಕ್ಷೆಯಲ್ಲಿ ಕರ್ನಾಟಕ ರಾಜ್ಯವನ್ನು ಅತ್ಯಾಕರ್ಷಕ ಪ್ರವಾಸಿ ತಾಣವನ್ನಾಗಿ ನೆಲೆಗೊಳಿಸುವುದು ಈ ನೀತಿಯ ಉದ್ದೇಶವಾಗಿದೆ.

ಪ್ರವಾಸೋದ್ಯಮ ಇಲಾಖೆಯು ರೂಪಿಸಿರುವ ಕಾರ್ಯತಂತ್ರ ಮಾರ್ಗಸೂಚಿಯು ಖಾಸಗಿ ಮತ್ತು ಸಾರ್ವಜನಿಕ ಹಿತಾಸಕ್ತಿದಾರರು ಒಗ್ಗೂಡಿ ಎಲ್ಲರನ್ನು ಒಳಗೊಳ್ಳುವ ಸುಸ್ಥಿರವಾದ ಪ್ರವಾಸೋದ್ಯಮ ಅಭಿವೃದ್ಧಿಗೆ ಪೂರಕ ವಾತಾವರಣವನ್ನು ಸಲ್ಲಿಸುತ್ತದೆ. ಕಾರ್ಯತಂತ್ರ ಮಾರ್ಗಸೂಚಿಯಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕರ್ನಾಟಕವನ್ನು ಉತ್ತೇಜಿಸಿಕೊಳ್ಳಲು ಮಾರುಕಟ್ಟೆ ಕಾರ್ಯತಂತ್ರವನ್ನು, ಮೂಲ ಸೌಕರ್ಯದ ಅಭಿವೃದ್ಧಿಗೆ ಹೆಚ್ಚಿನ ಒತ್ತು, ವೈವಿಧ್ಯಮಯ ಪ್ರವಾಸೋದ್ಯಮ ಚಟುವಟಿಕೆಗಳನ್ನು ಉತ್ತೇಜಿಸುವುದು, ಸುರಕ್ಷತಾ ಹಾಗೂ ನೈರ್ಮಲ್ಯ ಕ್ರಮಗಳನ್ನು ಅಳವಡಿಸಿಕೊಳ್ಳುವ ಮೂಲಕ ಕರ್ನಾಟಕವನ್ನು ಸುರಕ್ಷಿತ ತಾಣವನ್ನಾಗಿ ಮಾಡುವುದು. ಪ್ರವಾಸೋದ್ಯಮ ಚಟುವಟಿಕೆಗಳಲ್ಲಿ ಸ್ಥಳೀಯ ಸಮುದಾಯ ಹೆಚ್ಚು, ಹೆಚ್ಚು ಪಾಲ್ಗೊಳ್ಳುವಂತೆ ಪ್ರೋತ್ಸಾಹಿಸುವುದು, ಸುಸ್ಥಿರ





Downloaded From: www.kpscvaani.com

## ಕರ್ನಾಟಕ ಪ್ರವಾಸೋದ್ಯಮ ನೀತಿ 2020–25
## ಗುರಿ ಮತ್ತು ಧ್ಯೇಯೋದ್ದೇಶಗಳು :

**ಕರ್ನಾಟಕ ಪ್ರವಾಸೋದ್ಯಮದ ಎಲ್ಲಾ ಹಿತಾಸಕ್ತಿದಾರರಿಗೂ ಪ್ರಯೋಜನಕಾರಿ ಫಲಿತಾಂಶಗಳನ್ನು ಖಾತರಿಪಡಿಸಲು, ಕರ್ನಾಟಕ ಸರ್ಕಾರವು, ಈ ಹೊಸ ನೀತಿಯಲ್ಲಿ ಕೆಳಕಂಡ ಗುರಿ ಮತ್ತು ಧ್ಯೇಯೋದ್ದೇಶಗಳನ್ನು ಹಾಕಿಕೊಂಡಿದೆ.**

### ಗುರಿ :

- ಕರ್ನಾಟಕವನ್ನು ಆಕರ್ಷಕ ಪ್ರವಾಸೋದ್ಯಮ ತಾಣವನ್ನಾಗಿ ಉತ್ತೇಜಿಸಿ, ಅದನ್ನು ದೇಶೀಯ ಮತ್ತು ಜಾಗತಿಕ ಪ್ರವಾಸೋದ್ಯಮ ನಕ್ಷೆಯಲ್ಲಿ ಅಗ್ರ ಸ್ಥಾನ ದೊರಕಿಸುವುದು.
- ಕರ್ನಾಟಕದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯನ್ನು ಒಳಗೊಳ್ಳುವ ಮಹತ್ವದ ಚಾಲಕಶಕ್ತಿಯನ್ನಾಗಿ ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವುದು.
- ಕರ್ನಾಟಕಕ್ಕೆ ಭೇಟಿ ನೀಡುವ ಎಲ್ಲಾ ಪ್ರವಾಸಿಗರಿಗೆ ಸುರಕ್ಷಿತ ಮತ್ತು ಅವಿಸ್ಮರಣೀಯ ಭೇಟಿಯಾಗಿ ಖಾತರಿಪಡಿಸುವ ಪ್ರವಾಸಿ ಕೇಂದ್ರಿತ ಪರಿಸರ ವ್ಯವಸ್ಥೆಯನ್ನು ಸೃಜಿಸುವುದು.
- ಕರ್ನಾಟಕದಾದ್ಯಂತ ಬಲಿಷ್ಠ ಪ್ರವಾಸೋದ್ಯಮ ಮೂಲ ಸೌಕರ್ಯದ ಅಭಿವೃದ್ಧಿಯನ್ನು ವೃದ್ಧಿಗೊಳಿಸುವುದು.
- ಹಲವು ವೈವಿಧ್ಯಮಯ ಉನ್ನತ–ಗುಣಮಟ್ಟದ ಉತ್ಪನ್ನಗಳು ಮತ್ತು ಸೇವೆಗಳ ಮೂಲಕ ಪ್ರವಾಸಿಗರಿಗೆ ವಿಶ್ವ–ದರ್ಜೆಯ ಅನುಭವವನ್ನು ನೀಡಲು ಕರ್ನಾಟಕ ಪ್ರವಾಸೋದ್ಯಮದ ಸಾಮರ್ಥ್ಯವನ್ನು ಹೆಚ್ಚಿಸುವುದು.
- ಪ್ರವಾಸಿ ತಾಣಗಳು, ಪ್ರವಾಸಿ ಸೇವೆಗಳು, ಪ್ರಕ್ರಿಯೆ ಸಾಮರ್ಥ್ಯಗಳು ಮತ್ತು ಒಟ್ಟಾರೆ ವೀಕ್ಷಕರ ಅನುಭವಗಳನ್ನು ಸುಧಾರಿಸುವುದಕ್ಕಾಗಿ ಡಿಜಿಟಲ್ ಉಪಕ್ರಮಗಳನ್ನು ಬೆಂಬಲಿಸುವುದು.
- ಕರ್ನಾಟಕದಲ್ಲಿ ಪ್ರವಾಸೋದ್ಯಮದ ಸುಧಾರಣೆಗಾಗಿ ಎಲ್ಲಾ ಹಿತಾಸಕ್ತಿದಾರರ ಸಮನ್ವಯತೆ ಮತ್ತು ಸಕ್ರಿಯ ಭಾಗವಹಿಸುವಿಕೆಯನ್ನು ಖಚಿತಪಡಿಸುವುದು.
- ಪ್ರವಾಸೋದ್ಯಮ ವಲಯದಲ್ಲಿ ಲಾಭದಾಯಕ ಉದ್ಯೋಗಕ್ಕಾಗಿ ಕೌಶಲ್ಯಾಭಿವೃದ್ಧಿಯನ್ನು ಒದಗಿಸುವುದು ಮತ್ತು ಉದ್ಯಮಶೀಲತೆಯನ್ನು ಪ್ರೋತ್ಸಾಹಿಸುವುದು.
- ಸುಸ್ಥಿರ ಮತ್ತು ಜವಾಬ್ದಾರಿಯುತ ಪ್ರವಾಸೋದ್ಯಮ ಪದ್ಧತಿಗಳನ್ನು ಅಳವಡಿಸಿಕೊಳ್ಳಲು ಅನುಕೂಲವನ್ನು ಒದಗಿಸುವುದು.
- ಪ್ರವಾಸೋದ್ಯಮ ವಲಯದಲ್ಲಿ ಖಾಸಗಿ ವಲಯದ ಸಹಭಾಗಿತ್ವವನ್ನು ಪ್ರೋತ್ಸಾಹಿಸಲು ಹೂಡಿಕೆ–ಸ್ನೇಹಿ ನೀತಿಗಳೊಂದಿಗೆ ಪೂರಕ ವ್ಯವಹಾರ ಪರಿಸರವನ್ನು ಒದಗಿಸುವುದು.

### ಧ್ಯೇಯೋದ್ದೇಶಗಳು :

- ದೇಶೀಯ ಮತ್ತು ಅಂತರರಾಷ್ಟ್ರೀಯ ಪ್ರವಾಸಿ ಭೇಟಿಯ ದೃಷ್ಟಿಯಿಂದ ಕರ್ನಾಟಕವನ್ನು ಭಾರತದ ಮೊದಲ ಆದ್ಯತೆಯ ರಾಜ್ಯಗಳಲ್ಲಿ ಒಂದಾಗಿಸುವುದು.
- ಉದ್ಯೋಗ ಸೃಷ್ಟಿ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಕರ್ನಾಟಕ ಪ್ರವಾಸೋದ್ಯಮದ ಸಾಮರ್ಥ್ಯವನ್ನು ಸಜ್ಜುಗೊಳಿಸುವುದು.
- ಕರ್ನಾಟಕಕ್ಕೆ ಭೇಟಿ ನೀಡುವ ಪ್ರವಾಸಿಗರಲ್ಲಿ ವಿಶ್ವಾಸವನ್ನು ತುಂಬುವುದು ಮತ್ತು ಕರ್ನಾಟಕದಲ್ಲಿನ ಅವರ ಪ್ರಯಾಣದುದ್ದಕ್ಕೂ ಅವರಿಗೆ ಆರಾಮ ಅನುಕೂಲತೆ ಮತ್ತು ಸುರಕ್ಷತೆಯನ್ನು ಖಾತರಿಗೊಳಿಸುವುದು.
- ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕರ್ನಾಟಕವನ್ನು ಬಹುಸಂಖ್ಯಾ ಮಾರುಕಟ್ಟೆ ವಾಹಿನಿಗಳ ಮುಖಾಂತರ ಉತ್ತೇಜಿಸುವುದು.
- ಕರ್ನಾಟಕದಾದ್ಯಂತ ಪ್ರಮುಖ ಪ್ರವಾಸಿ ತಾಣಗಳ ಮಾರ್ಗಗಳಲ್ಲಿ ಪ್ರವಾಸಿಗರಿಗಾಗಿ ಗುಣಾತ್ಮಕವಾದ ಪ್ರವಾಸೋದ್ಯಮ ಮೂಲಸೌಕರ್ಯ ಮತ್ತು ಮೂಲಭೂತ ಅವಶ್ಯಕತೆಗಳನ್ನು ಖಾತರಿಪಡಿಸುವುದು.
- ವಿವಿಧ ಬಗೆಯ ಪ್ರವಾಸಿಗರ ಆಗಮನಕ್ಕಾಗಿ ಉನ್ನತ ಗುಣಮಟ್ಟದ ಪ್ರವಾಸೋದ್ಯಮ ಪ್ಯಾಕೇಜ್‌ಗಳು ಮತ್ತು ಉತ್ಪನ್ನಗಳ ಮುಖಾಂತರ ಅಪೇಕ್ಷಣೀಯ ಅನುಭವಗಳನ್ನು ಮೂಡಿಸುವುದು ಮತ್ತು ಮರು ಭೇಟಿಗಾಗಿ ಅವರನ್ನು ಪ್ರೋತ್ಸಾಹಿಸುವುದು.
- ಪ್ರವಾಸೋದ್ಯಮದಲ್ಲಿ ಉದ್ಯಮ–ಚಾಲಿತ ಉಪಕ್ರಮಗಳನ್ನು ಪ್ರೋತ್ಸಾಹಿಸಲು ಖಾಸಗಿ ವಲಯ ಹೂಡಿಕೆಗಳು ಮತ್ತು ಯಾಂತ್ರಿಕತೆಯನ್ನು ಸ್ಥಾಪಿಸಲು ಸಾಧ್ಯವಾಗಿಸುವಂತಹ ಕಾರ್ಯಚೌಕಟ್ಟನ್ನು ಸೃಷ್ಟಿಸುವುದು.
- ಕರ್ನಾಟಕಕ್ಕಾಗಿ ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಪ್ರವಾಸೋದ್ಯಮದ ಮೂಲಕ ಸುಸ್ಥಿರ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವುದು.



**ಒಂದು ಪ್ರವಾಸಿ ಸ್ಥಳವು ಅಭಿವೃದ್ಧಿಯಾಗಬೇಕಿದ್ದರೆ ಅಭಿವೃದ್ಧಿಯ ಕಾರ್ಯದಲ್ಲಿ ಸ್ಥಳೀಯ ಸಮುದಾಯಗಳ ಪಾಲ್ಗೊಳ್ಳುವಿಕೆ ಮತ್ತು ಅಂಗೀಕಾರವು ಬೇಕಾಗುತ್ತದೆ. ಹಾಗಾಗಿ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವ ಸಲುವಾಗಿ, ಸ್ಥಳೀಯ ಸಮುದಾಯಗಳೊಂದಿಗೆ ತೊಡಗಿಸಿಕೊಳ್ಳಲು ಮತ್ತು ಅವರನ್ನು ತಮ್ಮ ತಮ್ಮ ಪ್ರವಾಸಿ ವಲಯಗಳಲ್ಲಿ ಜರುಗುವ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಲು ನೆರವಾಗುವಂತೆ ಜಿಲ್ಲಾ ಮಟ್ಟದಲ್ಲಿ ಒಂದು ಪ್ರತಿನಿಧಿ ಸಂಸ್ಥೆಯನ್ನು ಸ್ಥಾಪಿಸಲು ಹೊಸ ನೀತಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ ಪ್ರವಾಸೋದ್ಯಮದಿಂದ ಸೃಜನೆಯಾಗುವ ಆದಾಯ ಮತ್ತು ಉದ್ಯೋಗವಕಾಶಗಳ ಬಗ್ಗೆ ಸ್ಥಳೀಯ ಸಮುದಾಯಗಳಿಗೆ ಅರಿವು ಮೂಡಿಸಲು ಹಾಗೂ ಪ್ರವಾಸೋದ್ಯಮ ವಲಯದಲ್ಲಿ ಸ್ಥಳೀಯ ಸಮುದಾಯಗಳು ಪಾಲ್ಗೊಳ್ಳುವಂತೆ ಸಮರ್ಥಗೊಳಿಸಲು ಅವರ ಕೌಶಲ್ಯಾಭಿವೃದ್ಧಿಗಾಗಿ ಸೂಕ್ತ ಕಾರ್ಯವ್ಯವಸ್ಥೆಯನ್ನು ರೂಪಿಸಲು ಉದ್ದೇಶಿಸಲಾಗಿದೆ.**



ಪ್ರವಾಸೋದ್ಯಮ ಸಾಧಿಸುವುದು ಹಾಗೂ ಹೂಡಿಕೆಗೆ ಸೌಲಭ್ಯವನ್ನು ಒದಗಿಸಿಕೊಡಲು ಉದ್ದೇಶಿಸಲಾಗಿದೆ.

ಕರ್ನಾಟಕವು "ಒಂದು ರಾಜ್ಯ, ಹಲವು ಜಗತ್ತು" ಎನ್ನುವ ಶೀರ್ಷಿಕೆಯೊಂದಿಗೆ ಪ್ರವಾಸಿಗರಿಗೆ ಅವಿಸ್ಮರಣೀಯ ಅನುಭವಗಳನ್ನು ನೀಡುವ ಸಾಮರ್ಥ್ಯವನ್ನು ಹೊಂದಿರುವ ವೈವಿಧ್ಯಮಯ ಪ್ರವಾಸೋದ್ಯಮ ಅನುಭವಗಳನ್ನು ನೀಡುತ್ತದೆ. ಈ ನಿಟ್ಟಿನಲ್ಲಿ, ಸಾಹಸ, ಕೃಷಿ, ವನ್ಯಜೀವಿ, ಶಿಕ್ಷಣ, ಚಲನಚಿತ್ರ, ವಾಕ್‌ಶಾಸ್ತ್ರ, ಒಳನಾಡು ಜಲ, ನೌಕಯಾನ ವಿಹಾರ, ಮೈಸ್ ಮತ್ತು ವ್ಯಾವಹಾರಿಕ, ಗಣಿಗಾರಿಕೆ, ಆಧ್ಯಾತ್ಮಿಕ, ಕ್ರೀಡಾ, ಸ್ವಾಸ್ಥ್ಯ ಇವೇ ಮುಂತಾದ ಪ್ರವಾಸೋದ್ಯಮ ಪರಿಕಲ್ಪನೆಗಳ ಅಭಿವೃದ್ಧಿಗೆ ಆದ್ಯತೆ ನೀಡಲು ಉದ್ದೇಶಿಸಲಾಗಿದೆ.

ಯಾವುದೇ ಕ್ಷೇತ್ರದಲ್ಲಿ ಅಭಿವೃದ್ಧಿಯಾಗಬೇಕಾದರೆ ಕೌಶಲ್ಯಾಭಿವೃದ್ಧಿಗೆ ಒತ್ತು ನೀಡಲೇ ಬೇಕಾಗುತ್ತದೆ. ಹಾಗೆಯೇ ಕರ್ನಾಟಕ ಪ್ರವಾಸೋದ್ಯಮ ನೀತಿ 2020–25 ರಲ್ಲಿ ಕರ್ನಾಟಕ ಪ್ರವಾಸೋದ್ಯಮದ ಅಗತ್ಯತೆಯನ್ನು ಪೂರೈಸಲು ಪ್ರತಿಭಾವಂತ ಮತ್ತು ಪರಿಣಿತ ಕಾರ್ಯಪಡೆಯನ್ನು ಒದಗಿಸುವ ಸಾಮರ್ಥ್ಯವಿರುವ ಒಂದು ಪೂರಕ ವ್ಯವಸ್ಥೆಯನ್ನು ಸೃಷ್ಟಿಸುವ ಉದ್ದೇಶವನ್ನು ಈ ನೀತಿಯು ಹೊಂದಿದೆ.

ಕರ್ನಾಟಕವನ್ನು ಆದ್ಯತಾ ತಾಣವನ್ನಾಗಿ ಮಾಡುವ ಪ್ರಯತ್ನದಲ್ಲಿ ಕರ್ನಾಟಕ ಪ್ರವಾಸೋದ್ಯಮವು, ಪ್ರವಾಸಿಗರು ಮತ್ತು ಪ್ರವಾಸೋದ್ಯಮ ಉದ್ಯೋಗಿಗಳ ಆರೋಗ್ಯ ಮತ್ತು ಪ್ರವಾಸೋದ್ಯಮ ಉದ್ಯೋಗಿಗಳ ಆರೋಗ್ಯ ಮತ್ತು ಸುರಕ್ಷತೆಯನ್ನು ಖಚಿತಪಡಿಸಲು ನೈರ್ಮಲ್ಯ ಮತ್ತು ಸುರಕ್ಷತಾ ಕ್ರಮಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡುವ ಉದ್ದೇಶದಿಂದ ನೀತಿಯಲ್ಲಿ ಸುರಕ್ಷತೆ ಹಾಗೂ ನೈರ್ಮಲ್ಯಕ್ಕಾಗಿ ಮಾರ್ಗಸೂಚಿಗಳನ್ನು ರೂಪಿಸಲಾಗಿದೆ. ಈ ಹಿನ್ನೆಲೆಯಲ್ಲಿ 'ಪ್ರವಾಸಿ ಮಿತ್ರ' ಎಂಬ ಯೋಜನೆಯಡಿ ಪ್ರವಾಸಿಗರ ಸುರಕ್ಷತೆ ಮತ್ತು ಭದ್ರತೆಗಾಗಿ ಪ್ರಮುಖ ಪ್ರವಾಸಿ ತಾಣಗಳಲ್ಲಿ ಪೊಲೀಸ್ ಪಡೆಯನ್ನು ನಿಯೋಜಿಸಲು ಉದ್ದೇಶಿಸಲಾಗಿದೆ. ಹಾಗೆಯೇ ಪ್ರವಾಸಿಗರು ಎದುರಿಸುವ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಕುಂದುಕೊರತೆ ನಿವಾರಣಾ ವ್ಯವಸ್ಥೆಯನ್ನು ಬಲಪಡಿಸಲು ಆನ್‌ಲೈನ್ ಕುಂದುಕೊರತೆ ನಿವಾರಣಾ ವ್ಯವಸ್ಥೆಯನ್ನು ಸ್ಥಾಪಿಸಲಾಗುವುದು.

ಸ್ಥಳೀಯ ಸಮುದಾಯಗಳ ಪಾಲ್ಗೊಳ್ಳುವಿಕೆ ಮತ್ತು ಅಂಗೀಕಾರವು ಒಂದು ಸ್ಥಳದ ಪ್ರವಾಸೋದ್ಯಮ ಅಭಿವೃದ್ಧಿಗೆ

**ಪ್ರವಾಸೋದ್ಯಮ ಡ್ಯಾಷ್‌ಬೋರ್ಡ್**

ಪ್ರಮುಖ ಪ್ರವಾಸೋದ್ಯಮ ಮಾಪಕಗಳನ್ನು ವರದಿ ಮಾಡುವುದು. ತಳಮಟ್ಟದ ಯೋಜನೆಯ ಅನುಷ್ಠಾನವನ್ನು ಮೇಲ್ವಿಚಾರಣೆ ಮಾಡುವುದು. ನಿಧಿ ಬಳಕೆಯನ್ನು ಟ್ರ್ಯಾಕ್ ಮಾಡುವುದು, ಆಗಮಿಸಿದ ಪ್ರವಾಸಿಗರ ಮತ್ತು ಬಂದುಹೋದ ಪ್ರವಾಸಿಗರ ಜಿಲ್ಲಾವಾರು ವಿಶ್ಲೇಷಣೆ ಹಾಗೂ ಕರ್ನಾಟಕದ ಪ್ರವಾಸೋದ್ಯಮ ಕ್ಷೇತ್ರದ ಪರಿಣಾಮಕಾರಿ ವರದಿ ಮತ್ತು ವಿಶ್ಲೇಷಣೆಗಾಗಿ ಪ್ರವಾಸೋದ್ಯಮ ಇಲಾಖೆಯು, ಪ್ರವಾಸೋದ್ಯಮ ಡ್ಯಾಷ್‌ಬೋರ್ಡ್‌ವೊಂದನ್ನು ಸೃಜಿಸುವಂತೆ ನೀತಿಯಲ್ಲಿ ತಿಳಿಸಲಾಗಿದೆ.



Downloaded From: www.kpscvaani.com

**ಆದ್ಯತೆಯ ಮೇರೆಗೆ ಅಭಿವೃದ್ಧಿಪಡಿಸುವುದಕ್ಕಾಗಿ ಪ್ರವಾಸೋದ್ಯಮ ಇಲಾಖೆಯು ಕರ್ನಾಟಕ ಪ್ರವಾಸೋದ್ಯಮ ನೀತಿ 2020–25ರ ಆರಂಭದಲ್ಲಿ ಈ ಕೆಳಕಂಡ ತಾಣಗಳನ್ನು ಆದ್ಯತಾ ಪ್ರವಾಸಿ ತಾಣವೆಂದು ಗುರುತಿಸಿದೆ.**

| ಕ್ರಸಂ. | ಜಿಲ್ಲೆ | ಆದ್ಯತಾ ಪ್ರವಾಸಿ ತಾಣಗಳು |
|---|---|---|
| 1 | ಬಾಗಲಕೋಟೆ | ಐಹೊಳೆ, ಬಾದಾಮಿ, ಪಟ್ಟದಕಲ್ಲು, ಕೂಡಲಸಂಗಮ |
| 2 | ಬಳ್ಳಾರಿ | ಬಳ್ಳಾರಿ, ಹಂಪಿ, ಹೊಸಪೇಟೆ, ಸಂಡೂರು |
| 3 | ಬೆಳಗಾವಿ | ಬಳಗಾವಿ, ಗೋಕಾಕ್, ಕಿತ್ತೂರು, ಸವದತ್ತಿ |
| 4 | ಬೆಂಗಳೂರು ಗ್ರಾಮಾಂತರ | ದಾಬಸ್ ಪೇಟೆ, ದೊಡ್ಡಬಳ್ಳಾಪುರ |
| 5 | ಬೆಂಗಳೂರು ನಗರ | ಅನ್ವಯಿಸುವುದಿಲ್ಲ |
| 6 | ಬೀದರ್ | ಬೀದರ್, ಬಸವಕಲ್ಯಾಣ |
| 7 | ಚಾಮರಾಜನಗರ | ಜಿಲ್ಲೆಯ ಎಲ್ಲಾ ಪ್ರವಾಸಿತಾಣಗಳು |
| 8 | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ, ಗೌರಿಬಿದನೂರು, ಮುದ್ದೇನಹಳ್ಳಿ, ನಂದಿ ಬೆಟ್ಟ |
| 9 | ಚಿಕ್ಕಮಂಗಳೂರು | ಜಿಲ್ಲೆಯ ಎಲ್ಲಾ ಪ್ರವಾಸಿತಾಣಗಳು |
| 10 | ಚಿತ್ರದುರ್ಗ | ಚಿತ್ರದುರ್ಗ, ಹಿರಿಯೂರು |
| 11 | ದಕ್ಷಿಣ ಕನ್ನಡ | ಜಿಲ್ಲೆಯ ಎಲ್ಲಾ ಪ್ರವಾಸಿತಾಣಗಳು |
| 12 | ದಾವಣಗೆರೆ | ಬಾಗಾಳಿ, ದಾವಣಗೆರೆ, ಶಾಂತಿಸಾಗರ, ಸಂತೇಬೆನ್ನೂರು |
| 13 | ಧಾರವಾಡ | ಧಾರವಡ, ಹುಬ್ಬಳ್ಳಿ, ಮುಂಡಗೋಡು |
| 14 | ಗದಗ | ಡಂಬಳ, ಗದಗ, ಲಕ್ಕುಂಡಿ |
| 15 | ಹಾಸನ | ಜಿಲ್ಲೆಯ ಎಲ್ಲಾ ಪ್ರವಾಸಿತಾಣಗಳು |
| 16 | ಹಾವೇರಿ | ಚೌಡದಾನಪುರ, ಹಾವೇರಿ, ರಾಣೆಬೆನ್ನೂರು |
| 17 | ಕಲಬುರಗಿ | ಚಿಂಚೋಲಿ, ಗಂಗಾಪುರ, ಕಲಬುರಗಿ, ಮಾಳಖೇಡ ಸನ್ನತಿ |
| 18 | ಕೊಡಗು | ಜಿಲ್ಲೆಯ ಎಲ್ಲಾ ಪ್ರವಾಸಿತಾಣಗಳು |
| 19 | ಕೋಲಾರ | ಅವನಿ, ಕೋಲಾರ, ಕೋಲಾರ ಗೋಲ್ಡ್ ಫೀಲ್ಡ್ |
| 20 | ಕೊಪ್ಪಳ | ಆನೆಗೊಂದಿ, ಇಟಗಿ, ಕೊಪ್ಪಳ, ಮುನೀರಬಾದ್ |
| 21 | ಮಂಡ್ಯ | ಆದಿಚುಂಚನಗಿರಿ, ಕೊಕ್ಕರೆಬೆಳ್ಳೂರು, ಮೇಲುಕೋಟೆ, ಶ್ರೀರಂಗಪಟ್ಟಣ, ಶಿವನಸಮುದ್ರ |
| 22 | ಮೈಸೂರು | ಮೈಸೂರು, ಬೈಲಕುಪ್ಪೆ, ನಂಜನಗೂಡು, ಸೋಮನಾಥಪುರ |
| 23 | ರಾಯಚೂರು | ಹಟ್ಟಿ, ಮಸ್ಕಿ, ರಾಯಚೂರು |
| 24 | ರಾಮನಗರ | ಕನಕಪುರ, ಮಾಗಡಿ, ರಾಮನಗರ |
| 25 | ಶಿವಮೊಗ್ಗ | ಜಿಲ್ಲೆಯ ಎಲ್ಲಾ ಪ್ರವಾಸಿತಾಣಗಳು |
| 26 | ತುಮಕೂರು | ತುಮಕೂರು, ದೇವರಾಯನದುರ್ಗ, ಮಧುಗಿರಿ |
| 27 | ಉಡುಪಿ | ಜಿಲ್ಲೆಯ ಎಲ್ಲಾ ಪ್ರವಾಸಿತಾಣಗಳು |
| 28 | ಉತ್ತರ ಕನ್ನಡ | ಜಿಲ್ಲೆಯ ಎಲ್ಲಾ ಪ್ರವಾಸಿತಾಣಗಳು |
| 29 | ವಿಜಯಪುರ | ವಿಜಯಪುರ, ಆಲಮಟ್ಟಿ, ಬಸವನಬಾಗೇವಾಡಿ |
| 30 | ಯಾದಗಿರಿ | ಸುರಪುರ, ಯಾದಗಿರಿ |



Downloaded From: www.kpscvaani.com



**ಪ್ರವಾಸೋದ್ಯಮ ಖಾತೆಯ ಜವಾಬ್ದಾರಿ ಹೊತ್ತ ದಿನದಿಂದ ನಾನು ಇಡೀ ಕರ್ನಾಟಕ ರಾಜ್ಯವನ್ನು ಸುತ್ತಿ ತಿಳಿದ ಸಂಗತಿಯೆಂದರೆ ನಮ್ಮ ನಾಡಿನ ಕಲ್ಲು ಕಲ್ಲಿನಲ್ಲಿ ಇತಿಹಾಸದ ರೋಚಕ ಕಥೆಗಳು ಅಡಗಿವೆ. ಈ ಕಥೆಗಳು ಜನರಿಗೆ ಹೊಸ ಅನುಭವ ನೀಡಿ ಅವರ ಜೀವನದ ರಂಗು ಹೆಚ್ಚಿಸಬೇಕು. ವಿಶ್ವದ ಯಾವುದೇ ಸ್ಥಳಗಳಿಗೆ ಹೋಲಿಸಿದಾಗ ನಮ್ಮಲ್ಲಿ ಎಲ್ಲವೂ ಇದೆ. ಆದರೆ, ಎಲ್ಲವೂ ಜನಮನದಲ್ಲಿ ನೆಲೆಸಿಲ್ಲ. ಹೊಸ ಹೊಸ ಪರಿಕಲ್ಪನೆಯನ್ನು ಹುಟ್ಟುಹಾಕುವುದು ಮತ್ತು ಹೆಚ್ಚು ಆಕರ್ಷಣೀಯ ಸ್ಥಳಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವುದು ನಮ್ಮ ಹೊಸ ನೀತಿಯ ಉದ್ದೇಶವಾಗಿದೆ. ಈ ನೀತಿಯಿಂದಾಗುವ ಪ್ರವಾಸೋದ್ಯಮದ ಮುಂದಿನ ಬೆಳವಣಿಗೆ ಕರ್ನಾಟಕವನ್ನು ಜಾಗತಿಕವಾಗಿ ಮುಂಚೂಣಿಯ ಪ್ರವಾಸೋದ್ಯಮ ತಾಣವನ್ನಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂಬ ಭರವಸೆ ನನಗಿದೆ.**

**–ಸಿ.ಟಿ.ರವಿ, ಸಚಿವರು, ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ಮತ್ತು ಕ್ರೀಡೆ ಮತ್ತು ಯುವ ಸಬಲೀಕರಣ**

ಅಗತ್ಯವಾದ ಪೂರ್ವ ಅವಶ್ಯಕತೆಯಾಗಿದೆ. ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸುವ ಸಲುವಾಗಿ, ಸ್ಥಳೀಯ ಸಮುದಾಯಗಳೊಂದಿಗೆ ತೊಡಗಿಸಿಕೊಳ್ಳಲು ಮತ್ತು ಅವರನ್ನು ತಮ್ಮ ತಮ್ಮ ಪ್ರವಾಸಿ ವಲಯಗಳಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ಪಾಲ್ಗೊಳ್ಳಲು ನೆರವು ನೀಡಲು ಜಿಲ್ಲಾಮಟ್ಟದದಲ್ಲಿ ಒಂದು ಪ್ರತಿನಿಧಿ ಸಂಸ್ಥೆಯನ್ನು ಸ್ಥಾಪಿಸಲಾಗುವುದು.

ಪ್ರವಾಸೋದ್ಯಮ ಕ್ಷೇತ್ರದಲ್ಲಿನ ಹೂಡಿಕೆದಾರರಿಗೆ ಪ್ರೋತ್ಸಾಹಧನ ಮತ್ತು ರಿಯಾಯಿತಿಗಳನ್ನು ನೀಡುವ ಸಲುವಾಗಿ ಜಿಲ್ಲಾ ಹಾಗೂ ರಾಜ್ಯಮಟ್ಟದಲ್ಲಿ ಪ್ರತ್ಯೇಕ ಸಮಿತಿಗಳನ್ನು ಅಸ್ತಿತ್ವಕ್ಕೆ ತರಲಾಗುವುದು. ಪ್ರೋತ್ಸಾಹಧನ ನೀಡುವ ಯೋಜನೆಯಲ್ಲಿ ಮಹಿಳೆಯರಿಗೆ ಶೇ 5 ರಷ್ಟು ಹೆಚ್ಚುವರಿ ಪ್ರೋತ್ಸಾಹಧನವು ದೊರಕಲಿದೆ.

ಪ್ರವಾಸೋದ್ಯಮ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟಿರುವಂತಹ ನೂತನ ಪ್ರವಾಸೋದ್ಯಮ ಯೋಜನೆಗಳಿಗೆ ಬಂಡವಾಳ ಹೂಡಿಕೆ ಮಾಡಲು, ಹೆಚ್ಚುವರಿ ಬಂಡವಾಳ ಹೂಡಿಕೆ ಮಾಡಲು ಹಾಗೂ ಸಾಲದ ಮೇಲಿನ ಬಡ್ಡಿಗೆ ಸಹಾಯಧನವನ್ನು ನೀಡಲಾಗುವುದು.

ಅದೇ ರೀತಿಯಲ್ಲಿ ವಿಸ್ತರಿತ ಪ್ರವಾಸೋದ್ಯಮದ ಯೋಜನೆಯನ್ನು ಅಭಿವೃದ್ಧಿಪಡಿಸುವುದಕ್ಕಾಗಿ, ಮುದ್ರಾಂಕ ಶುಲ್ಕದ ಮೇಲೆ ನೋಂದಣಿ ಶುಲ್ಕ, ಭೂಪರಿವರ್ತನೆ ಶುಲ್ಕ, ಮೋಟಾರು ವಾಹನ ತೆರಿಗೆ ಇವುಗಳಿಗೆ 2020–25 ನೀತಿಯ ಅವಧಿಯಲ್ಲಿ ಮಾತ್ರ ಅನ್ವಯವಾಗುವಂತೆ ರಿಯಾಯಿತಿಗಳನ್ನು ನೀಡಲಾಗುವುದು.





**ಜಿಲ್ಲಾ ಪ್ರವಾಸೋದ್ಯಮ ಸಮಿತಿ:–**

ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುವ ಈ ಸಮಿತಿಯು ನೀತಿಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಈ ಕೆಳಕಂಡ ಕಾರ್ಯಗಳನ್ನು ನಿರ್ವಹಿಸುತ್ತದೆ.

- ರೂ. 5.00 ಕೋಟಿಗಳ ಅರ್ಹ ಯೋಜನಾ ವೆಚ್ಚ (ಇಪಿಸಿ) ವಿರುವಂತಹ ಪ್ರವಾಸೋದ್ಯಮ ಯೋಜನೆಗೆ ಸಂಬಂಧಿಸಿದ ಎಲ್ಲಾ ಪ್ರಸ್ತಾವನೆಗಳನ್ನು ಸ್ವೀಕರಿಸುವುದು.
- ಪ್ರವಾಸೋದ್ಯಮ ಯೋಜನೆಗಾಗಿ ಸ್ವೀಕರಿಸಲಾದ ಪ್ರಸ್ತಾವನೆಗಳನ್ನು ಯೋಜನಾ ಮೌಲ್ಯ ನಿರ್ಣಯಕ್ಕಾಗಿ ಪ್ರವಾಸೋದ್ಯಮ ಇಲಾಖೆಯು ಕಾರ್ಯಕ್ರಮ ನಿರ್ವಹಣಾಘಟಕ (ಪಿಎಂಯು) ವಿಭಾಗಕ್ಕೆ ಕಳುಹಿಸುವುದು. ಪಿಎಂಯು ವಿಭಾಗವು ತನ್ನ ಮೌಲ್ಯ ನಿರ್ಣಯ ವರದಿಯನ್ನು ಜಿಲ್ಲಾ ಪ್ರವಾಸೋದ್ಯಮ ಸಮಿತಿಗೆ

## ಕೃಷಿ ಮತ್ತು ಗ್ರಾಮೀಣ ಪ್ರವಾಸೋದ್ಯಮ

ಕರ್ನಾಟಕ ಪ್ರವಾಸೋದ್ಯಮವು ರಾಜ್ಯದ ಸಮರ್ಥ ಪ್ರವಾಸಿ ಪರಿಕಲ್ಪನೆಗಳಲ್ಲಿ ಕೃಷಿ ಪ್ರವಾಸೋದ್ಯಮವು ಒಂದೆಂದು ಪರಿಗಣಿಸಿ ಹೊಸ ನೀತಿಯಲ್ಲಿ ಅದನ್ನು ಅಭಿವೃದ್ಧಿಪಡಿಸಿ ಉತ್ತೇಜಿಸಲು ಉದ್ದೇಶಿಸಿಲಾಗಿದೆ. ಕರ್ನಾಟಕದಲ್ಲಿ ಕೃಷಿ ಮತ್ತು ಗ್ರಾಮೀಣ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಿ, ಉತ್ತೇಜಿಸುವುದರಿಂದ ಪ್ರವಾಸಿಗರು ಕೃಷಿ ಮತ್ತು ಬೇಸಾಯದ ಕಾರ್ಯಚಟುವಟಿಕೆಗಳನ್ನು ಪರಿಚಯಿಸಿಕೊಳ್ಳಲು ಪ್ರೋತ್ಸಾಹ ನೀಡಿದಂತಾಗುವುದಲ್ಲದೆ, ಸ್ಥಳೀಯ ತಿಂಡಿ-ತಿನಿಸುಗಳು, ಸಂಸ್ಕೃತಿ, ಆಚಾರ-ವಿಚಾರ, ಕಲೆ ಮತ್ತು ಕ್ರೀಡೆ ಮುಂತಾದ ಕರ್ನಾಟಕದ ಗ್ರಾಮೀಣ ಜೀವನದ ವಿವಿಧ ಆಯಾಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಲು ಸಾಧ್ಯವಾಗುತ್ತದೆ.

ಕರ್ನಾಟಕ ಪ್ರವಾಸೋದ್ಯಮವು ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಹಂತಹಂತವಾಗಿ ಕೃಷಿ ಪ್ರವಾಸೋದ್ಯಮ ಮತ್ತು ಗ್ರಾಮೀಣ ಪ್ರವಾಸೋದ್ಯಮವನ್ನು ಯಶಸ್ವಿಯಾಗಿ ಕೈಗೆತ್ತಿಕೊಳ್ಳಬಹುದೆಂಬುದನ್ನು ಖಚಿತಪಡಿಸಲು ಪ್ರಯತ್ನಿಸತಕ್ಕದ್ದು. ಆ ಮೂಲಕ ಗ್ರಾಮೀಣ ಸಮುದಾಯಗಳು ಪ್ರವಾಸೋದ್ಯಮದಲ್ಲಿ ಪರಿಣಾಮಕಾರಿಯಾಗಿ ಪಾಲ್ಗೊಳ್ಳುವ ಪ್ರಮಾಣವನ್ನು ಹೆಚ್ಚಿಸಲು ಮತ್ತು ಪ್ರವಾಸೋದ್ಯಮದಿಂದ ಆಗಬಹುದಾದ ಸಾಮಾಜಿಕ-ಆರ್ಥಿಕ ಲಾಭಗಳನ್ನು ಅವರು ಪಡೆಯಲು ಅನುಕೂಲವಾಗುತ್ತದೆ.

ಕಳುಹಿಸತಕ್ಕದ್ದು. ಮೌಲ್ಯ ನಿರ್ಣಯ ವರದಿಯು, ಈ ನೀತಿಯ ಅಡಿಯಲ್ಲಿ ಯೋಜನೆಯ ಪ್ರೋತ್ಸಾಹಧನ, ಸಹಾಯಧನ ಅಥವಾ ರಿಯಾಯಿತಿಗಳನ್ನು ಪಡೆಯಲು ಅರ್ಹವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ತಿಳಿಸತಕ್ಕದ್ದು.

- ಪ್ರವಾಸೋದ್ಯಮ ಇಲಾಖೆಯ ಕಾರ್ಯಕ್ರಮ ನಿರ್ವಹಣಾ ಘಟಕ (ಪಿಎಂಯು) ವಿಭಾಗವು ಸಿದ್ಧಪಡಿಸಿದ ಮೌಲ್ಯ ನಿರ್ಣಯ ವರದಿಯ ಆಧಾರದ ಮೇಲೆ, ಜಿಲ್ಲಾ ಪ್ರವಾಸೋದ್ಯಮ ಸಮಿತಿಯು ಅರ್ಹ ಯೋಜನಾ ವೆಚ್ಚ (ಇಪಿಸಿ) ರೂ. 5.00 ಕೋಟಿ ರೂಪಾಯಿಗಳವರೆಗೆ ಇರುವಂಥ ಅರ್ಹ ಪ್ರವಾಸೋದ್ಯಮ ಯೋಜನೆಗೆ ಅನುಮೋದನೆ ನೀಡತಕ್ಕದ್ದು.
- ಪ್ರವಾಸೋದ್ಯಮ ಯೋಜನೆಯ ಅನುಷ್ಠಾನಕ್ಕಾಗಿ ಅಗತ್ಯವಾಗಬಹುದಾದಂತೆ ಇತರೆ ಸರ್ಕಾರಿ ಏಜೆನ್ಸಿಗಳಿಂದ ಅನುಮೋದನೆ ಮತ್ತು ಮಂಜೂರಾತಿಗಾಗಿ ಸಮನ್ವಯ ಸಾಧಿಸತಕ್ಕದ್ದು.
- ಅನುಮೋದಿತ ಪ್ರವಾಸೋದ್ಯಮ ಯೋಜನೆಗಳ ಅನುಷ್ಠಾನದ ಪ್ರಗತಿಯ ಮೇಲ್ವಿಚಾರಣೆ.
- ರೂ. 5.00 ಕೋಟಿ ರೂಪಾಯಿಗಳವರೆಗಿನ ಅರ್ಹ ಯೋಜನಾ ವೆಚ್ಚ (ಇಪಿಸಿ)ಕ್ಕೆ ಪ್ರವಾಸೋದ್ಯಮ ಯೋಜನೆಗಳ ಅನುಷ್ಠಾನದಲ್ಲಿ ಆಗುವ ವಿಳಂಬವನ್ನು ತಪ್ಪಿಸಲು ಯೋಜನಾ ಅನುಷ್ಠಾನಕ್ಕೆ ಸಂಬಂಧಪಟ್ಟ ಸಮಸ್ಯೆಗಳ ಪರಿಹಾರ.





ಕರ್ನಾಟಕ ಪ್ರವಾಸೋದ್ಯಮ ನೀತಿ 2020-25 ಪ್ರಸ್ತುತ ಸಂದರ್ಭದಲ್ಲಿ ಸುಸ್ಥಿರ, ಸುರಕ್ಷಿತ ಮತ್ತು ನೈರ್ಮಲ್ಯ ಪದ್ಧತಿಗಳ ಅಳವಡಿಕೆಗೆ ಹೆಚ್ಚಿನ ಆದ್ಯತೆ ನೀಡುವ ಜೊತೆಗೆ ಸಾಮುದಾಯಿಕ ಸಹಭಾಗಿತ್ವದೊಂದಿಗೆ ಮುನ್ನಡೆಯುವ ಅಗತ್ಯವನ್ನು ಪ್ರತಿಪಾದಿಸುತ್ತದೆ. ಕರ್ನಾಟಕ ಪ್ರವಾಸೋದ್ಯಮ ಕಾರ್ಯಪಡೆಯು ನೂತನ ಪ್ರವಾಸೋದ್ಯಮ ನೀತಿಯ ಯಶಸ್ವಿ ಅನುಷ್ಠಾನಕ್ಕಾಗಿ ಅಗತ್ಯ ಬೆಂಬಲ ಮತ್ತು ಮಾರ್ಗದರ್ಶನವನ್ನು ಒದಗಿಸುತ್ತದೆ.

–ಸುಧಾ ಮೂರ್ತಿ, ಅಧ್ಯಕ್ಷರು, ಕರ್ನಾಟಕ ಪ್ರವಾಸೋದ್ಯಮ ಕಾರ್ಯಪಡೆ





ಈ ನೀತಿಯಲ್ಲಿ 26 ವಿಧಗಳಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ಹಾಗೂ ರಾಜ್ಯದ ಎಂಟು ಜಿಲ್ಲೆಗಳಲ್ಲಿ 70 ಸಾವಿರ ತಾಣಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಲಾಗಿದೆ. ಹಾಗೆಯೇ ಪ್ರವಾಸೋದ್ಯಮ ಅಭಿವೃದ್ಧಿಗೆ ಜಮೀನು ಒದಗಿಸುವುದು, ಬಂಡವಾಳ ಪ್ರೋತ್ಸಾಹ ಧನ, ವಿವಿಧ ಶುಲ್ಕಗಳ ರಿಯಾಯ್ತಿಗಳನ್ನು ನೀಡುವ ಘೋಷಣೆಗಳಿವೆ.

**ಪ್ರವಾಸೋದ್ಯಮ ಅಧಿಕಾರಯುಕ್ತ ಸಮಿತಿ**

ಕರ್ನಾಟಕ ಸರ್ಕಾರವು ಸನ್ಮಾನ್ಯ ಪ್ರವಾಸೋದ್ಯಮ ಸಚಿವರು ಅಧ್ಯಕ್ಷರಾಗಿರುವ ಪ್ರವಾಸೋದ್ಯಮ ಅಧಿಕಾರಯುಕ್ತ ಸಮಿತಿಯು, ಈ ನೀತಿಯ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಈ ಕೆಳಕಂಡ ಕಾರ್ಯವನ್ನು ನಿರ್ವಹಿಸುತ್ತದೆ.

- ಪ್ರವಾಸೋದ್ಯಮ ಇಲಾಖೆಯ ಕಾರ್ಯಕ್ರಮ ನಿರ್ವಹಣಾ ಘಟಕ (ಪಿಎಂಯು) ವಿಭಾಗವು ಸಿದ್ಧಪಡಿಸಿದ ಮೌಲ್ಯ ನಿರ್ಣಯ ವರದಿಯ ಆಧಾರದ ಮೇಲೆ ಅಧಿಕಾರಯುಕ್ತ ಸಮಿತಿಯು ಅರ್ಹ ಯೋಜನಾ ವೆಚ್ಚವು (ಇಪಿಸಿ) ರೂ. 5 ಕೋಟಿಗಳಿಗಿಂತ ಹೆಚ್ಚಿರುವ ಮತ್ತು ರೂ. 100 ಕೋಟಿಗಳಿಗಿಂತ ಅರ್ಹ ಪ್ರವಾಸೋದ್ಯಮ ಯೋಜನೆಗಳಿಗಾಗಿ ಪ್ರೋತ್ಸಾಹಧನಗಳು, ಸಹಾಯಧನಗಳು ಅಥವಾ ರಿಯಾಯಿತಿಗಳಿಗಾಗಿ ಅನುಮೋದನೆಯನ್ನು ನೀಡುವುದು.
- ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸುವುದು ಮತ್ತು ಸರ್ಕಾರಿ ಆದೇಶಗಳನ್ನು ಸಕಾಲದಲ್ಲಿ ಹೊರಡಿಸಿರುವುದನ್ನು ಖಚಿತಪಡಿಸುವುದು.
- ಒಂದು ಪ್ರಾಧಿಕಾರವಾಗಿ, ನೀತಿ ಮತ್ತು ಅದರ ಅಡಿಯಲ್ಲಿ ನೀಡಲಾಗುವ ಪ್ರೋತ್ಸಾಹಧನಗಳು, ಸಹಾಯಧನಗಳು ಮತ್ತು ರಿಯಾಯಿತಿಗಳ ಬಗ್ಗೆ ವ್ಯಾಖ್ಯಾನಿಸುವುದು.
- ನೀತಿಯ ಸುಗಮ ಅನುಷ್ಠಾನಕ್ಕಾಗಿ ಕಾಲಕಾಲಕ್ಕೆ ಅಳವಡಿಸಿಕೊಳ್ಳಬೇಕಾದ ಯುಕ್ತ ಕಾರ್ಯವಿಧಾನಗಳನ್ನು ಶಿಫಾರಸ್ಸು ಮಾಡುವುದು.
- ಅರ್ಹ ಯೋಜನಾ ವೆಚ್ಚವು (ಇಪಿಸಿ) ರೂ 5.00 ಕೋಟಿಗಳಿಗಿಂತ ಹೆಚ್ಚಾಗಿರುವ ಪ್ರವಾಸೋದ್ಯಮ ಯೋಜನೆಗಳ ಅನುಷ್ಠಾನದಲ್ಲಿ ಆಗುವ ವಿಳಂಬವನ್ನು ತಪ್ಪಿಸಲು ಯೋಜನಾ ಅನುಷ್ಠಾನಕ್ಕೆ ಸಂಬಂಧಿಸಿದ ಯಾವುದೇ ವಿವಾದಗಳನ್ನು ಪರಿಹರಿಸುವುದು.
- ಅಂತರ್-ಇಲಾಖಾ ಸಮಸ್ಯೆಗಳನ್ನು ಪರಿಹರಿಸದಿದ್ದುದರಿಂದಾಗಿ ಬಾಕಿ ಇರುವ ಪ್ರಕರಣಗಳಲ್ಲಿ ಅನುಮತಿಗೆ ಸಂಬಂಧಿಸಿದ ಯಾವುದೇ ವಿವಾದಗಳನ್ನು ಪರಿಹರಿಸುವುದು.
- ಈ ಯೋಜನೆಗಳ ಅನುಮೋದನೆಗಾಗಿ ಒಪ್ಪಿಗೆ ಮತ್ತು ಪರಿಣತಿ ಅಗತ್ಯವಿರುವ ಸದಸ್ಯರ ಮತ್ತು ಹಿತಾಸಕ್ತಿದಾರರನ್ನು ಆಯ್ಕೆ ಮಾಡಿಕೊಳ್ಳುವುದು.
- ಪ್ರವಾಸೋದ್ಯಮದ ಮಾರುಕಟ್ಟೆ, ಬೇಡಿಕೆ ಮತ್ತು ಸಲಹೆಗನುಸಾರವಾಗಿ ನಿಯತಕಾಲಿಕವಾಗಿ ಅರ್ಹ ಪ್ರವಾಸೋದ್ಯಮ ಯೋಜನೆಗಳ ಪಟ್ಟಿಯನ್ನು ಪರಿಶೀಲಿಸುವುದು ಮತ್ತು ಸೂಕ್ತ ಸೇರ್ಪಡೆಗಳು/ಮಾರ್ಪಾಡು ಹಾಗೂ ತೆಗೆದುಹಾಕುವುದನ್ನು ಮಾಡಬಹುದು.
- ಪ್ರವಾಸೋದ್ಯಮ ವಲಯದಲ್ಲಿ ಹೆಚ್ಚಿನ ಸಾಮರ್ಥ್ಯ ಹೊಂದಿರುವ ನವೋದ್ಯಮಗಳಿಗಾಗಿ ಅನುದಾನ ಮತ್ತು ಇತರೆ ವಿತ್ತೀಯ ನೆರವು ನೀಡುವುದು ಮತ್ತು ಸದರಿ ಸರ್ವೋದ್ಯಮಗಳೊಂದಿಗೆ ಸಹಕರಿಸಲು ಪ್ರವಾಸೋದ್ಯಮ ಇಲಾಖೆಗೆ ಅನುಮತಿ ನೀಡುವುದು.

ಪ್ರವಾಸೋದ್ಯಮ ಕ್ಷೇತ್ರದ ಮಹತ್ವವನ್ನು ಮನಗಂಡಿರುವ ರಾಜ್ಯ ಸರ್ಕಾರವು ಅದನ್ನು ಆದ್ಯತೆಯ ವಲಯವೆಂದು ಗುರುತಿಸಿದೆ. ಆದ್ದರಿಂದಲೇ ಪ್ರವಾಸೋದ್ಯಮ ಉದ್ದಿಮೆಯ ಬಹುಸಂಖ್ಯಾತ ಹಿತಾಸಕ್ತಿದಾರರನ್ನು, ಕಾರ್ಯಗಾರಗಳು, ಸಂವಾದಗಳು, ಮನವಿಗಳು ಮತ್ತು ಇತರ ವೇದಿಕೆಗಳ ಮೂಲಕ ಒಳಗೊಂಡು, ನಿಖರವಾಗಿ, ಸಮಾಲೋಚಿಸಿ ಕರ್ನಾಟಕ ಪ್ರವಾಸೋದ್ಯಮ ನೀತಿ 2020-25 ಅನ್ನು ರೂಪಿಸಲಾಗಿದೆ. ಹಾಗಾಗಿ ಈ ನೀತಿಯ ಮೂಲಕ ಗುಣಮಟ್ಟ ಹಾಗೂ ಕನಿಷ್ಠ ಪ್ರಮಾಣಿತ ಅಭಿವೃದ್ಧಿಯನ್ನು ಖಾತರಿಪಡಿಸುತ್ತಲೇ ಪ್ರವಾಸೋದ್ಯಮದ ಉತ್ಪನ್ನಗಳು ಮತ್ತು ಸೇವೆಗಳ ಅಭಿವೃದ್ಧಿಗಾಗಿ ವಿವರಣಾತ್ಮಕವಾದ ಮಾರ್ಗಸೂಚಿಯನ್ನು ಒದಗಿಸಲಾಗಿದೆ.

ಒಟ್ಟಿನಲ್ಲಿ ಕರ್ನಾಟಕವನ್ನು ಚಲನಶೀಲ, ಸುಸ್ಥಿರ ಮತ್ತು ಅತ್ಯಂತ ನೆಚ್ಚಿನ ಪ್ರವಾಸೋದ್ಯಮ ತಾಣವನ್ನಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಹೂಡಿಕೆಗೆ ಅನುಕೂಲ ಕಲ್ಪಿಸಲು ಪ್ರೋತ್ಸಾಹಗಳನ್ನು, ಸಹಾಯಧನವನ್ನು ಹಾಗೂ ರಿಯಾಯಿತಿಗಳನ್ನು ಒದಗಿಸುವ ಮೂಲಕ ಪ್ರವಾಸೋದ್ಯಮದ ವಲಯವನ್ನು ಉತ್ತಮಪಡಿಸಲು ಕರ್ನಾಟಕ ಪ್ರವಾಸೋದ್ಯಮ ನೀತಿ 2020-25 ಅತ್ಯಂತ ಸಹಾಯಕಾರಿಯಾಗಲಿದೆ.

ಈಗಾಗಲೇ ಹಂಪಿ, ಪಟ್ಟದಕಲ್ಲು ಮತ್ತು ಪಶ್ಚಿಮ ಘಟ್ಟಗಳನ್ನು ಸೇರಿದಂತೆ ಮೂರು ವಿಶ್ವ ಪಾರಂಪರಿಕ ತಾಣಗಳನ್ನು ಹೊಂದಿರುವ ಕರ್ನಾಟಕವು ಈ ನೀತಿಯ ಅನುಷ್ಠಾನದಿಂದ ಜಾಗತಿಕವಾಗಿ ರಾಜ್ಯದ ಮತ್ತಷ್ಟು ಪ್ರವಾಸಿ ತಾಣಗಳು ಗುರುತಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ.



Downloaded From: www.kpscvaani.com




# 150 ಐಟಿಐಗಳನ್ನು ಮೇಲ್ದರ್ಜೆಗೇರಿಸುವ ಒಪ್ಪಂದಕ್ಕೆ ಸಹಿ

**ದೇಶದಲ್ಲಿಯೇ ಮೊದಲ ಬಾರಿಗೆ ಕರ್ನಾಟಕ ಸರ್ಕಾರವು ಉದ್ಯಮಗಳ ಸಹಭಾಗಿತ್ವದಲ್ಲಿ 4636.50 ಕೋಟಿ ರೂ. ವೆಚ್ಚದಲ್ಲಿ ಸರ್ಕಾರಿ ಐಟಿಐಗಳ ಗುಣಮಟ್ಟವನ್ನು ಹೆಚ್ಚಿಸುವ ವಿನೂತನ ಪ್ರಯತ್ನಕ್ಕೆ ಮುಂದಾಗಿದೆ.**

ರಾಜ್ಯದ ಯುವಕ/ಯುವತಿಯರಿಗೆ ಉದ್ಯೋಗಾವಕಾಶವನ್ನು ಹೆಚ್ಚಿಸುವ ನಿಟ್ಟಿನಲ್ಲಿ ನವೆಂಬರ್ 6 ರಂದು ರಾಜ್ಯದ 150 ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪುಣೆಯ ಟಾಟಾ ಟೆಕ್ನಾಲಜೀಸ್ ಸಂಸ್ಥೆಯ ಸಹಭಾಗಿತ್ವದಲ್ಲಿ ಮೇಲ್ದರ್ಜೆಗೇರಿಸಲು ರಾಜ್ಯ ಸರ್ಕಾರವು ಮಹತ್ವದ ಒಂಪ್ಪದಕ್ಕೆ ಸಹಿ ಮಾಡಿದೆ.

ಅಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ಸಮ್ಮುಖದಲ್ಲಿ ಟಾಟಾ ಟೆಕ್ನಾಲಜೀಸ್‌ನ ಅಧ್ಯಕ್ಷರಾದ ಭಡೆ ಹಾಗೂ ಕೌಶಲ್ಯ ಅಭಿವೃದ್ಧಿ ಮತ್ತು ಜೀವನೋಪಾಯ ಇಲಾಖೆಯ ಕಾರ್ಯದರ್ಶಿ ಡಾ. ಎಸ್. ಸೆಲ್ವಕುಮಾರ್ ಅವರು ಈ ಪ್ರಮುಖ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

ಈ ಒಪ್ಪಂದದ ಅನ್ವಯ ಟಾಟಾ ಟೆಕ್ನಾಲಜೀಸ್ ಸಹಭಾಗಿತ್ವದಲ್ಲಿ ಕೈಗಾರಿಕೆಗಳ ಬೇಡಿಕೆಗೆ ತಕ್ಕ ತರಬೇತಿ ನೀಡಲು ಅಗತ್ಯ ಸೌಲಭ್ಯ ಒದಗಿಸುವ ಮೂಲಕ ರಾಜ್ಯದ 150 ಸರ್ಕಾರಿ ಐಟಿಐಗಳನ್ನು ಒಟ್ಟು 4636.50 ಕೋಟಿ ರೂ





Downloaded From: www.kpscvaani.com



**ಈ ಒಪ್ಪಂದದಿಂದ ಸರ್ಕಾರ ಮತ್ತು ಕೈಗಾರಿಕೆಗಳಿಗೆ ಲಾಭದಾಯಕವಾಗಲಿದೆ. ಅಲ್ಲದೆ ಈ ಉಪಕ್ರಮದಿಂದ ರಾಜ್ಯದಲ್ಲಿ ಹೂಡಿಕೆಗೆ ಪೂರಕ ವಾತಾವರಣ ಸೃಷ್ಟಿಯಾಗಲಿದೆ. ಸರ್ಕಾರ ಮತ್ತು ಕೈಗಾರಿಕೋದ್ಯಮದ ಸಹಭಾಗಿತ್ವದಲ್ಲಿ ಕೈಗೊಂಡಿರುವ ಬಹುದೊಡ್ಡ ಯೋಜನೆ ಇದಾಗಿದೆ. ಇದರಿಂದ ರಾಜ್ಯದ ಯುವ ಜನತೆಗೆ ಉತ್ಕೃಷ್ಟ ಹಾಗೂ ಇಂದಿನ ಬೇಡಿಕೆಗೆ ತಕ್ಕಂತೆ ಕೌಶಲ್ಯ ಅಭಿವೃದ್ಧಿ ತರಬೇತಿ ದೊರೆಯುವುದಲ್ಲದೆ, ಕೈಗಾರಿಕೆಗಳಿಗೆ ಕೌಶಲ್ಯ ಹೊಂದಿದ ಮಾನವ ಸಂಪನ್ಮೂಲ ದೊರೆಯಲಿದೆ. ಆ ಮೂಲಕ ರಾಜ್ಯಕ್ಕೆ ಹಾಗೂ ಕೈಗಾರಿಕೆಗಳಿಗೆ ಪರಸ್ಪರ ಅನುಕೂಲವಾಗಲಿದೆ.**

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ವೆಚ್ಚದಲ್ಲಿ ಉನ್ನತೀಕರಿಸಲಾಗುವುದು. ಹಾಗೂ ಈ ಐಟಿಐಗಳಲ್ಲಿ ಕೈಗಾರಿಕೆಗಳಿಗೆ ವಾಸ್ತವವಾಗಿ ಅಗತ್ಯವಿರುವ ಕೌಶಲ್ಯ ತರಬೇತಿ ನೀಡಲಾಗುವುದು.

ಈ ಯೋಜನೆಗೆ ಟಾಟಾ ಟೆಕ್ನಾಲಜೀಸ್ ಜೊತೆಗೆ ಸುಮಾರು 20 ಕಂಪನಿಗಳು ತಮ್ಮ ಸಿ.ಎಸ್.ಆರ್ ನಿಧಿಯಿಂದ 4080 ಕೋಟಿ ರೂ ಗಳನ್ನು  ಭರಿಸಲಿವೆ. ಉಳಿದ 657 ಕೋಟಿ ರೂ ಗಳನ್ನು ರಾಜ್ಯ ಸಕಾರದ ವತಿಯಿಂದ ಭರಿಸಲಾಗುವುದು. ಈ 150 ಐಟಿಐಗಳನ್ನು ತಲಾ 30 ಕೋಟಿ ರೂ ವೆಚ್ಚದಲ್ಲಿ ಉನ್ನತೀಕರಿಸಲಾಗುತ್ತಿದೆ.

ಈ ಯೋಜನೆಯಡಿ ನಾಲ್ಕನೇ ಕೈಗಾರಿಕಾ ಕ್ರಾಂತಿಯ ಮೂಲಕ ಕೈಗಾರಿಕಾ ವಲಯದಲ್ಲಿ ಆಗುತ್ತಿರುವ ಬದಲಾವಣೆಗಳು, ಅಗತ್ಯವಿರುವ ಕೌಶಲ್ಯಗಳನ್ನು ಗಮನದಲ್ಲಿಟ್ಟುಕೊಂಡು ಐಟಿಐ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಉದ್ಯೋಗವಕಾಶ ಸೃಷ್ಟಿಸುವ ಗುರಿ ಹೊಂದಲಾಗಿದೆ. ವಿವಿಧ ವಲಯಗಳಲ್ಲಿ ಕೌಶಲ್ಯ ಹೊಂದಿರುವ ಮಾನವ ಸಂಪನ್ಮೂಲದೊಂದಿಗೆ ರಾಜ್ಯಕ್ಕೆ ಹೆಚ್ಚಿನ ಬಂಡವಾಳ ಆಕರ್ಷಿಸುವ ದೂರದೃಷ್ಟಿಯನ್ನು ಈ ಯೋಜನೆ ಹೊಂದಿದೆ.

ರಾಜ್ಯದಲ್ಲಿ 270 ಸರ್ಕಾರಿ, 196 ಅನುದಾನಿತ ಹಾಗೂ 1247 ಖಾಸಗಿ ಐಟಿಐ ಸೇರಿ ಒಟ್ಟು 1713 ಐಟಿಐಗಳಲ್ಲಿ ಪ್ರತಿ ವರ್ಷ 1.8 ಲಕ್ಷ ಅಭ್ಯರ್ಥಿಗಳು ತರಬೇತಿ ಪಡೆಯುತ್ತಾರೆ. ರಾಜ್ಯದ 150 ಐಟಿಐಗಳನ್ನು ಉನ್ನತೀಕರಿಸುವ ಮೂಲಕ ಈ ಸಂಸ್ಥೆಗಳನ್ನು ಪ್ರಮುಖ ತರಬೇತಿ ಕೇಂದ್ರಗಳನ್ನಾಗಿ ರೂಪಿಸಲಾಗುವುದು. ಇಲ್ಲಿ ನೀಡಲಾಗುವ ವಿಶೇಷ ತರಬೇತಿಗಳ ಅನುಕೂಲವನ್ನು ಇತರ ಐಟಿಐ ಪಾಲಿಟೆಕ್ನಿಕ್ ಮತ್ತು ಇಂಜಿನಿಯರಿಂಗ್ ವಿದ್ಯಾರ್ಥಿಗಳೂ ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಗುತ್ತಿದೆ.

ಒಪ್ಪಂದದ ಅವಧಿಯು 10 ವರ್ಷ 9 ತಿಂಗಳಾಗಿದ್ದು, ಈ ಒಪ್ಪಂದದ ಅವಧಿಯಲ್ಲಿ ಟಾಟಾ ಟೆಕ್ನಾಲಜೀಸ್ ಸಂಸ್ಥೆಯು ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ಒದಗಿಸುವ ನಿಟ್ಟಿನಲ್ಲಿ, ಪ್ರಸ್ತುತ ಕೈಗಾರಿಕೆಯಲ್ಲಿ ಬೇಡಿಕೆಯಲ್ಲಿರುವ ಕೌಶಲ್ಯಗಳ ತರಬೇತಿ ನೀಡಲಿದೆ.

> **ಕೈಗಾರಿಕಾ ವಲಯದಲ್ಲಿ ಆಗುತ್ತಿರುವ ಕ್ಷಿಪ್ರ ಬದಲಾವಣೆಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಅತ್ಯಾಧುನಿಕ ತರಬೇತಿ ಪಡೆಯಲು ಉಪಕ್ರಮ ನೆರವಾಗಲಿದೆ. ಹಾಗಾಗಿ ಈ ಐಟಿಐಗಳಲ್ಲಿ ಕೈಗಾರಿಕೆಗಳಿಗೆ ವಾಸ್ತವವಾಗಿ ಅಗತ್ಯವಿರುವ ಕೌಶಲ್ಯ ತರಬೇತಿಯನ್ನು ನೀಡಲಾಗುವುದು.**




**ಈ ಕಾರ್ಯಕ್ರಮದಿಂದ ಪ್ರತಿ ವರ್ಷ ಕನಿಷ್ಟ 1 ಲಕ್ಷಕ್ಕೂ ಹೆಚ್ಚು ಯುವಕರಿಗೆ ಉತ್ತಮ ಉದ್ಯೋಗಾವಕಾಶ ದೊರೆಯುವ ನಿರೀಕ್ಷೆ ಇದೆ. ಅಲ್ಲದೆ, ಕೈಗಾರಿಕೆಗಳ ಬೇಡಿಕೆಗಳನ್ನು ಆಧರಿಸಿ 10 ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಈ ಐಟಿಐಗಳಲ್ಲಿ ಕೈಗಾರಿಕೆಗಳಿಗೆ ಅಗತ್ಯವಿರುವ ಕೌಶಲ್ಯಗಳ ತರಬೇತಿ ನೀಡಲಾಗುವುದು.**

**ಡಾ. ಸಿ.ಎನ್. ಅಶ್ವಥ್ ನಾರಾಯಣ್**
ಉಪಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ



ಟಾಟಾ ಟೆಕ್ನಾಲಜೀಸ್ ಸಂಸ್ಥೆಯು ತರಬೇತಿ, ಮಾರ್ಗದರ್ಶನ ಹಾಗೂ ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಸಲು ಟಿಸಿಪಿಸಿ(ಟ್ರೇನಿಂಗ್, ಕೌನ್ಸೆಲಿಂಗ್ ಅಂಡ್ ಪ್ಲೇಸ್‌ಮೆಂಟ್ ಸೆಲ್)ಗಳನ್ನು ಬಲಪಡಿಸುವುದು, ಐಟಿಐಗಳಲ್ಲಿ ಹೊಸ ಯಂತ್ರೋಪಕರಣಗಳು ಮತ್ತು ತಂತ್ರಜ್ಞಾನಗಳ ಅಳವಡಿಕೆಯ ಮೂಲಕ ಪ್ರಯೋಗಾಲಯಗಳನ್ನು ಉನ್ನತೀಕರಿಸುವುದು ಹಾಗೂ ಕೈಗಾರಿಕೆಯ ಸ್ಥಿತ್ಯಂತರಗಳಿಗೆ ತಕ್ಕಂತೆ ಅಧ್ಯಯನ ವಿಷಯಗಳನ್ನು ರೂಪಿಸಲಾಗುತ್ತಿದೆ.

ಟಾಟಾ ಸಂಸ್ಥೆ ಹಾಗೂ ಇತರ ಸಹಭಾಗೀತ್ವ ಕೈಗಾರಿಕೆಗಳಲ್ಲಿ ನಿರ್ವಹಿಸುತ್ತಿರುವ 300 ತರಬೇತಿದಾರರು ಈ 150 ಐಟಿಐಗಳಲ್ಲಿ ತರಬೇತಿ ನೀಡಲಿದ್ದಾರೆ. ಅಲ್ಲದೆ ರಾಜ್ಯದ ಎಲ್ಲ ಸರ್ಕಾರಿ ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ಐಟಿಐಗಳಲ್ಲಿ ಆನ್ ಲೈನ್ ತರಬೇತಿ ನೀಡಲಾಗುವುದು.

ಈ ಯೋಜನೆಯಡಿ ವಿದ್ಯುತ್ ಚಾಲಿತ ವಾಹನಗಳು, ಕೃಷಿ ಯಂತ್ರೋಪಕರಣಗಳು, ಏರೋಸ್ಪೇಸ್ ಮತ್ತು ರಕ್ಷಣಾ ಉಪಕರಣಗಳು, ತೋಟಗಾರಿಕೆ ಮತ್ತು ಸ್ಮಾರ್ಟ್ ಸಿಟಿ ಹಾಗೂ ಇತರ ವಲಯಗಳಲ್ಲಿ ತರಬೇತಿಗೆ ಆದ್ಯತೆ ನೀಡಲು ಉದ್ದೇಶಿಸಲಾಗಿದೆ. ಮೊದಲ ಹಂತದಲ್ಲಿ ಪೀಣ್ಯ, ಹೊಸೂರು ರಸ್ತೆ, ಬಳ್ಳಾರಿ, ಮೈಸೂರು, ದಾಸ್ತಿಕೊಪ್ಪ ಹಾಗೂ ಶಿಕಾರಿಪುರದ ಸರ್ಕಾರಿ ಐಟಿಐಗಳನ್ನು ಉನ್ನತೀಕರಣ ಮಾಡಲಾಗುವುದು.

ಕೈಗಾರಿಕಾ ವಲಯದಲ್ಲಿ ಆಗುತ್ತಿರುವ ಕ್ಷಿಪ್ರ ಬದಲಾವಣೆಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳು ಅತ್ಯಾಧುನಿಕ ತರಬೇತಿ ಪಡೆಯಲು ಈ ಉಪಕ್ರಮ ನೆರವಾಗಲಿದೆ. ಅತ್ಯಾಧುನಿಕ ಯಂತ್ರೋಪಕರಣ, ತಂತ್ರಾಂಶ, ಹಾರ್ಡ್‌ವೇರ್, ಸಾಫ್ಟ್‌ವೇರ್ ತರಬೇತಿಗಳಿಗೆ ಆದ್ಯತೆ ನೀಡಲಾಗುವುದು. ಇದರಿಂದ ಕೈಗಾರಿಕೆಗಳ ಬೆಳವಣಿಗೆ ವೃದ್ಧಿಸುವುದಲ್ಲದೆ, ಯುವ ಜನರು ಸ್ವಯಂ ಉದ್ಯೋಗವನ್ನು ಹೊಂದಲು ಮತ್ತು ರಾಜ್ಯ, ದೇಶ, ಹಾಗೂ ವಿದೇಶಗಳಲ್ಲಿ  ಉದ್ಯೋಗ ಪಡೆಯಲು ಸಹಕಾರಿ ಆಗಲಿದೆ.

ಒಟ್ಟಿನಲ್ಲಿ ಸರ್ಕಾರ ಹಾಗೂ ಕೈಗಾರಿಕೆಗಳ ಸಹಭಾಗಿತ್ವದಲ್ಲಿ ಹಮ್ಮಿಕೊಂಡಿರುವ ಮಹತ್ವಾಕಾಂಕ್ಷೆಯ ಕಾರ್ಯಕ್ರಮ ಇದಾಗಿದ್ದು, ಕರ್ನಾಟಕದ ಐಟಿಐಗಳು ಜಾಗತಿಕ ಮಟ್ಟದ ಕೌಶಲ್ಯ ತರಬೇತಿ ಕೇಂದ್ರಗಳಾಗಿ ಅಭಿವೃದ್ಧಿ ಹೊಂದಲು ಈ ಯೋಜನೆ ಸಹಕಾರಿಯಾಗಲಿದೆ. ■



Downloaded From: www.kpscvaani.com




# ಭಾಷಾಂತರ ಇಲಾಖೆ
## ಒಂದು ಪರಿಚಯ

**ಡಿ. ಪಿ. ಮುರಳೀಧರ್**

**ಭಾ**ಷೆ ಎಂಬುದು ಅಭಿವ್ಯಕ್ತಿಯ ಜೀವ ಮಾತ್ರವಲ್ಲ, ಸಂವಹನದ ಜೀವಾಳವೂ ಕೂಡಾ ! ಭಾಷೆಯಲ್ಲಿ ಭಾವ ಅಡಗಿದೆ. ಭಾಷೆಯಲ್ಲಿ ಚಲನಶೀಲತೆ ಇದೆ. ಭಾಷೆಯಲ್ಲಿ ಸೃಜನಶೀಲತೆಗೆ ಅವಕಾಶವಿದೆ. ಭಾಷೆಯಲ್ಲಿ ವೈವಿಧ್ಯತೆಯೂ ಮನೆ ಮಾಡಿದೆ.

ಮೊದಲು ಕೇವಲ ಸಂಕೇತಗಳ ಮೂಲಕ ತನ್ನ ಭಾವನೆಗಳನ್ನು ಹಂಚಿಕೊಳ್ಳುತ್ತಿದ್ದ ಮಾನವ, ಕಾಲ ಉರುಳಿದಂತೆ ಭಾಷೆಯನ್ನು ಅಭಿವೃದ್ಧಿಪಡಿಸಿಕೊಂಡಿದ್ದು ರೋಚಕ ಇತಿಹಾಸವೇ ಹೌದು !!

ವಿಶ್ವದಲ್ಲಿ ಸರಿ ಸುಮಾರು 6500 ಮಾತನಾಡುವ ಭಾಷೆಗಳಿವೆ. ಆದರೆ, ಇವುಗಳಲ್ಲಿ ಅತೀ ಹೆಚ್ಚು ಮಾತನಾಡುವ ಭಾಷೆಗಳು ಹನ್ನೆರಡು ಮಾತ್ರ. ಭಾಷಾ ಲೋಕವನ್ನು ಒಮ್ಮೆ ಅವಲೋಕಿಸಿದಾಗ ವಿಶ್ವದಲ್ಲೇ ಅತೀ ಹೆಚ್ಚು ಜನರು ಅಂದರೆ 113.2 ಕೋಟಿ ಜನರು ಮಾತನಾಡುವ ಭಾಷೆ ಇಂಗ್ಲೀಷ್ ! ಭಾರತವೂ ಸೇರಿದಂತೆ ಹಲವು ದೇಶಗಳಲ್ಲಿ ಈ ಭಾಷೆಯನ್ನು ಮಾತನಾಡುವ ಜನರಿದ್ದಾರೆ. ನಂತರದ ಸ್ಥಾನ ಚೀನಾದ ಮ್ಯಾಂಡರಿನ್ ಭಾಷೆಯದ್ದಾಗಿದೆ. ಈ ಭಾಷೆಯನ್ನು 111.7 ಕೋಟಿ ಜನರು ಮಾತನಾಡುತ್ತಾರೆ.

ಇಂಗ್ಲೀಷ್ ಅಕ್ಷರ ಮಾಲೆಯಲ್ಲಿ 26 ಅಕ್ಷರಗಳಿದ್ದರೆ, ಮ್ಯಾಂಡರಿನ್ ಭಾಷೆಯಲ್ಲಿ ಐವತ್ತು ಸಾವಿರ ಅಕ್ಷರಗಳಿವೆ ! ಮ್ಯಾಂಡರಿನ್ ಭಾಷೆಯ ವಿಶೇಷ ಏನೆಂದರೆ ಧ್ವನಿಯ ಏರಿಳಿತ ಹಾಗೂ ಉಚ್ಚಾರಣೆಗೆ ಅನುಗುಣವಾಗಿ ಅಕ್ಷರಗಳ ರೂಪ ಮತ್ತು ಸ್ವರೂಪ ಬದಲಾಗುತ್ತವೆ. ಈ ಭಾಷೆಯಲ್ಲಿ ನಾಮ ಪದ ಮತ್ತು ಕ್ರಿಯಾ ಪದಗಳೇ ಇಲ್ಲ ! ಕನಿಷ್ಠ 2500 ಅಕ್ಷರಗಳನ್ನು ಕಲಿತಾಗ ಮಾತ್ರ ಮ್ಯಾಂಡರಿನ್ ಭಾಷಾ ಲಿಪಿಯನ್ನು ಓದಲು ಸಾಧ್ಯ. !! ಮ್ಯಾಂಡರಿನ್ ಭಾಷೆ ಕಲಿಯಲು ಅತ್ಯಂತ ಕಷ್ಟಕರ ಮತ್ತು ಕ್ಲಿಷ್ಟಕರ !! ಆದರೆ, ಒಮ್ಮೆ ಕಲಿತರೆ ಈ ಭಾಷೆಯನ್ನು ಕಲಿತವರಿಗೆ ವಿಶ್ವದೆಲ್ಲೆಡೆ ಎಲ್ಲಿಲ್ಲದ ಬೇಡಿಕೆ ಇದೆ ಎಂಬುದಂತೂ ಸತ್ಯ.

ತದ ನಂತರದ ಸ್ಥಾನದಲ್ಲಿ ನಮ್ಮ ಭಾರತದ ಹಿಂದಿ ಭಾಷೆ ಇದೆ. ಹಿಂದಿ ಭಾಷೆಯನ್ನು ಬರೋಬ್ಬರಿ 62 ಕೋಟಿ ಜನರು ಮಾತನಾಡುತ್ತಾರೆ. ಭಾರತದಲ್ಲಿ ಮಾತ್ರವಲ್ಲ ನೆರೆಯ ನೇಪಾಳ, ಫಿಜಿ, ಮಾರಿಷಸ್ ಮತ್ತು ಗಯಾನಾದಲ್ಲೂ ಮಾತನಾಡುವ ಹಿಂದಿ ಭಾಷೆಯು ಸಂಸ್ಕೃತ ಭಾಷೆಯಿಂದ ಪ್ರಭಾವಿತಗೊಂಡಿದೆ. ಅಂತೆಯೇ, ಕೇವಲ ಎಂಟು ಮಂದಿ ಮಾತನಾಡುವ ಬುಸ್ಸೊ ಭಾಷೆಯೂ ಕೂಡಾ ಭಾಷಾ ಜಗತ್ತಿನಲ್ಲಿ ವಿಶೇಷ ಸ್ಥಾನ ಪಡೆದಿದೆ!

ಭಾರತ ಸಂವಿಧಾನದ ಎಂಟನೇ ಪರಿಶಿಷ್ಟದಲ್ಲಿ ಇಂಗ್ಲೀಷ್ ಭಾಷೆಯನ್ನು ಹೊರತುಪಡಿಸಿ 22 ಭಾಷೆಗಳನ್ನು ಅಂಗೀಕರಿಸಿ ಮಾನ್ಯತೆ ನೀಡಲಾಗಿದೆ. ಅಸ್ಸಾಂ, ಬಂಗಾಲಿ (ಬೆಂಗಾಲಿ), ಬೋಡೋ, ಡೋಗ್ರಿ, ಇಂಗ್ಲೀಷ್, ಗುಜರಾತಿ, ಹಿಂದಿ, ಕನ್ನಡ, ಕಾಶ್ಮೀರಿ, ಕೊಂಕಣಿ, ಮೈಥಿಲಿ, ಮಲೆಯಾಳಂ, ಮರಾಠಿ, ಮೀಠೀ, ನೇಪಾಳಿ, ಒಡಿಯಾ, ಪಂಜಾಬಿ, ಸಂಸ್ಕೃತ, ಸಂತಾಳಿ, ಸಿಂಧಿ, ತಮಿಳು, ತೆಲುಗು ಮತ್ತು ಉರ್ದು ಭಾಷೆಗಳು ನಮ್ಮ ದೇಶದಲ್ಲಿನ ವ್ಯವಹಾರಿಕ ಮತ್ತು ಸಂವಿಧಾನ ಬದ್ಧ ಭಾಷೆಗಳಾಗಿವೆ.

ಒಂದು ಕಾಲದಲ್ಲಿ ನಮ್ಮ ಭಾರತದಲ್ಲಿ 2500 ಭಾಷೆಗಳು ಅಸ್ತಿತ್ವದಲ್ಲಿದ್ದವು. ಆದರೆ, ಇದೀಗ ಅದರಲ್ಲಿ 700 ಕ್ಕೂ ಹೆಚ್ಚು ಭಾಷೆಗಳು ಅಳಿವಿನ ಅಂಚಿಗೆ ಸರಿದು, ಪ್ರಸ್ತುತ ಭಾರತದಲ್ಲಿ 122 ಪ್ರಮುಖ ಭಾಷೆಗಳು ಹಾಗೂ 1599 ಉಪ ಭಾಷೆಗಳು ಮಾತ್ರ ಉಳಿದಿವೆ.ಎಂದು ಭಾಷಾ ತಜ್ಞರು ಹೇಳುತ್ತಾರೆ. ಆಹಾರ, ಸಂಸ್ಕೃತಿ ಮತ್ತು ವೇಷ–ಭೂಷಣದಂತೆಯೇ, ಪ್ರತಿ 30 ಕಿ.ಮೀ ಗೆ ಭಾಷೆಯಲ್ಲಿನ ಭಾವ ಮತ್ತು ಸ್ವರೂಪ ಬದಲಾಗುತ್ತಾ ಹೋಗುತ್ತದೆ. ಈ ವಿಶ್ಲೇಷಣೆಯಂತೆ ಭಾರತ ದೇಶದಲ್ಲಿ ಇಂದಿಗೂ 19,500 ಉಪ ಭಾಷೆಗಳು ಜೀವಂತವಾಗಿವೆ.

ಕರ್ನಾಟಕದ ಆಡಳಿತ ಭಾಷೆಯಾಗಿರುವ ನಮ್ಮ ಕನ್ನಡ ಭಾಷೆಯಲ್ಲಿ ರಾಜ್ಯದ ಉದ್ದಗಲಕ್ಕೂ 300 ಕ್ಕೂ ಹೆಚ್ಚು ಉಪ ಭಾಷೆಗಳಿವೆ.

**ಅಭಿಜಾತ ಭಾಷೆ !**

ಒಂದೂವರೆ ಸಾವಿರ ವರ್ಷಗಳಿಂದ ಎರಡು ಸಾವಿರ ವರ್ಷಗಳ ಇತಿಹಾಸವಿರುವ ತಮಿಳು, ಸಂಸ್ಕೃತ, ಕನ್ನಡ, ತೆಲುಗು, ಮಲೆಯಾಳಂ ಮತ್ತು ಒಡಿಯಾ ಭಾಷೆಗಳನ್ನು ಅಭಿಜಾತ ಭಾಷೆಗಳೆಂದು ಪರಿಗಣಿಸಿರುವ ಭಾರತ ಸರ್ಕಾರ ಈ ಭಾಷೆಗಳಿಗೆ ಶಾಸ್ತ್ರೀಯ ಸ್ಥಾನಮಾನ ನೀಡಿದೆ.

ಶಾಸ್ತ್ರೀಯ ಸ್ಥಾನಮಾನ ಪಡೆದ ಭಾಷೆಗಳ ಪಟ್ಟಿಯಲ್ಲಿ ನಮ್ಮ ಕನ್ನಡ ಭಾಷೆಯೂ ಕೂಡಾ ಅಗ್ರ ಸ್ಥಾನದಲ್ಲಿರುವುದು ನಮ್ಮೆಲ್ಲರಲ್ಲೂ ಹಿರಿಮೆ ಮತ್ತು ಗರಿಮೆ ಮೂಡಿಸುವ

### ಕರ್ನಾಟಕ ರಾಜಭಾಷಾ (ವಿಧಾಯೀ) ಆಯೋಗ

**ಕೇಂದ್ರ ಹಾಗೂ ರಾಜ್ಯ ಶಾಸನಗಳು ಸಿದ್ದಪಡಿಸುವ ಅಧಿನಿಯಮಗಳ ಭಾಷಾಂತರವನ್ನು ಕಾಲಕಾಲಕ್ಕೆ ಪರಿಶೀಲಿಸಿ, ಪರಿಷ್ಕರಿಸಲು ಭಾಷಾಂತರ ಇಲಾಖೆಯ ವ್ಯಾಪ್ತಿಯಲ್ಲಿ ಕರ್ನಾಟಕ ರಾಜಭಾಷಾ ( ವಿಧಾಯೀ ) ಆಯೋಗವನ್ನು ರಾಜ್ಯ ಸರ್ಕಾರ ರಚಿಸಿದೆ.**

**ಎಲ್ಲಾ ಹಂತಗಳಲ್ಲೂ ಕನ್ನಡ ಭಾಷೆಯನ್ನು ಅಡಳಿತ ಭಾಷೆಯಾಗಿ ಜಾರಿಗೆ ತರುವಲ್ಲಿ ಆಯೋಗವು ಭಾಷಾಂತರ ಕಾರ್ಯ ನಿರ್ವಹಿಸುತ್ತಿದೆ. ಅಮೂರ್ತ ಸ್ವರೂಪದ ಭಾಷೆಯಲ್ಲಿ ವ್ಯಕಕ್ತಪಡಿಸಲಾದ ಸೂಕ್ಷ್ಮಾತಿ ಸೂಕ್ಷ್ಮವಾಗಿ ಹೆಣೆದುಕೊಂಡ ಗಹನ ವಿಚಾರಧಾರೆಗಳ ಕಾನೂನು ಮತ್ತು ಆಡಳಿತ ಚಿಂತನವನ್ನು ಸೂಕ್ತವಾಗಿ ಅಬಿವ್ಯಕ್ತಿಸಬಲ್ಲ ಸಾಮರ್ಥ್ಯ ಗಳಿಸುವಂತೆ ಕನ್ನಡ ಭಾಷೆಯನ್ನು ಅಭಿವೃದ್ಧಿಪಡಿಸುವಲ್ಲಿ ಆಯೋಗವು ಕಾರ್ಯ ನಿರ್ವಹಿಸುತ್ತಿದೆ.**

ವಿಚಾರವಾಗಿದೆ. ಸಾವಿರಾರು ಭಾಷೆಗಳಿದ್ದರೂ ಎಲ್ಲಾ ಭಾಷೆಗಳಿಗೂ ಲಿಪಿ ಇಲ್ಲ.

ನಮ್ಮ ಕನ್ನಡ ಭಾಷೆಗೆ ಲಿಪಿಯೂ ಇದೆ. ಸುಲಲಿತವಾಗಿ ಬರೆಯಬಹುದಾದ, ಸುಂದರವಾಗಿ ಕಾಣುವ ಲಿಪಿ ಹೊಂದಿರುವ ಭಾಷೆ ನಮ್ಮ ಕನ್ನಡ ಭಾಷೆಯಾಗಿದೆ.

ಹೌದು ! ಕನ್ನಡ ಭಾಷೆ ನೋಡಲು ಅಂದ. ಅಷ್ಟೇ ಅಲ್ಲ !! ಮಾತನಾಡಲು ಚೆಂದ !!! ಮನಕ್ಕೆ ತಂಪೆರೆಯುವ ಕನ್ನಡ ಭಾಷೆ ಆಲಿಸಲು ಇಂಪು.

**ಸಂವಹನ ನಡೆಸುವುದು ಹೇಗೆ ?**

ಸಾಮಾನ್ಯವಾಗಿ ಒಂದು ಭಾಷೆಯಲ್ಲಿ ಪಾಂಡಿತ್ಯ ಹೊಂದಿರುವವರು ಮತ್ತೊಂದು ಭಾಷೆಯಲ್ಲಿ ಪ್ರಾವಿಣ್ಯತೆ ಹೊಂದಿರುವುದಿಲ್ಲ ! ಉದಾಹರಣೆಗೆ, ಒಂದು ಭಾಷೆಯನ್ನು ಮಾತ್ರ ಅರಿತವರು ಮತ್ತೊಂದು ಭಾಷೆಯ ವ್ಯಕ್ತಿಯೊಂದಿಗೆ ಸಂವಹನ ನಡೆಸುವುದು ಹೇಗೆ ? ಎಂಬ ಪ್ರಶ್ನೆ ಉದ್ಭವಿಸಿದಾಗ ಕೆಲಕಾಲ ನಮ್ಮಲ್ಲಿ ಮೌನ ಆವರಸುವುದು ಸಹಜ. ಅಂತಹ ಸಂದರ್ಭದಲ್ಲಿ ನಮ್ಮ ನೆರವಿಗೆ ಬರುವವರೇ ಭಾಷಾಂತರಕಾರರು ! ಅಲ್ಲವೇ ? ರಾಜತಾಂತ್ರಿಕ ಕ್ಷೇತ್ರದಲ್ಲಿ ಭಾಷಾಂತರಕಾರರ ಪಾತ್ರ ಹಿರಿದು.

**ಅನುವಾದ, ತರ್ಜುಮೆ ಹಾಗೂ ಭಾಷಾಂತರ !**

ಹೌದು ! ಅನುವಾದ, ತರ್ಜುಮೆ ಹಾಗೂ ಭಾಷಾಂತರ ಈ ಮೂರೂ ಪದಗಳು ಒಂದೇ ಅರ್ಥವನ್ನು ಕೊಡುತ್ತದೆ ಎಂಬುದು ಬಹುಜನರ ನಂಬಿಕೆ. ಆದರೆ, ಈ ಮೂರೂ ಪದಗಳಲ್ಲಿ ತೆಳುವಾದ ಅಂತರವಿದೆ. ಅರ್ಥ–ವ್ಯತ್ಯಾಸಗಳಿವೆ ಎಂಬುದು ಕೆಲವರ ಅಂಬೋಣ.

ಸಾಮಾನ್ಯವಾಗಿ ಸಾಹಿತ್ಯಿಕ ಚಟುವಟಿಕೆಗಳಾದ ಕಥೆ, ಕವನ, ಕಾದಂಬರಿ, ಕಾವ್ಯ, ನಾಟಕ, ವಿಮರ್ಶೆಯಂತಹ ಸೃಜನಾತ್ಮಕ ಕೃತಿಗಳನ್ನು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಭಾವದ ಜೀವದೊಂದಿಗೆ, ಕಲ್ಪನೆಯ ಪರಿಕಲ್ಪನೆಯೊಂದಿಗೆ ಹಾಗೂ ರೂಪದ ಸ್ವರೂಪದೊಂದಿಗೆ ಚಿತ್ರಿಸಲು ಸಾಧ್ಯವಾದಲ್ಲಿ ಅದನ್ನು ಅನುವಾದ ಎಂದು ಕರೆಯುತ್ತಾರೆ.

ವಿಜ್ಞಾನ – ತಂತ್ರಜ್ಞಾನ ಹಾಗೂ ಕಾನೂನು – ನ್ಯಾಯಿಕ ವಿಚಾರಗಳು ಮತ್ತು ಬರಹಗಳು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಪದ ಗುಚ್ಛಗಳ ಮೂಲಕ ಸ್ಪಷ್ಟತೆಯ ಬೆಳಕು ಚೆಲ್ಲಿ ನಿಖರತೆಯ ಸ್ವರೂಪ ನೀಡುವಲ್ಲಿ ಯಶಸ್ವಿಯಾದಲ್ಲಿ ಅದನ್ನು ತರ್ಜುಮೆ ಎಂದು ಬಣ್ಣಿಸುತ್ತಾರೆ.

ಇತ್ತೀಚೆಗೆ ಎಲ್ಲಾ ವಿಜ್ಞಾನ ವಿಸ್ಮಯಗಳು, ವೈದ್ಯಕೀಯ ವಿಷಯಗಳು, ತಾಂತ್ರಿಕ ಲೇಖನಗಳು, ವಾಣಿಜ್ಯ ವಿಚಾರಗಳು, ಸೃಜನಾತ್ಮಕ ಹಾಗೂ ಕ್ರಿಯಾತ್ಮಕ ಬರಹಗಳನ್ನು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ರೂಪಾಂತರಗೊಳಿಸುವುದನ್ನು ಭಾಷಾಂತರ ಎಂದು ಕರೆಯಲಾಗುತ್ತದೆ ಎಂದು ವಿದ್ವಾಂಸರು ಹೇಳುತ್ತಾರೆ.

ಕದಂಬರ ರಾಜಧಾನಿ ಬನವಾಸಿಯಲ್ಲಿ ಹಾಗೂ ಗಂಗರ ರಾಜಧಾನಿ ತಲಕಾಡಿನಲ್ಲಿ ಕನ್ನಡ ಭಾಷೆ ಪಸರಿಸಿತು ಎಂಬುದು ಇದೀಗ ಇತಿಹಾಸ. ಕ್ರಿಸ್ತ ಶಕ 450 ರಲ್ಲಿನ ಹಲ್ಮಿಡಿ ಶಾಸನವೇ ಇದಕ್ಕೆ ಸಾಕ್ಷಿ. ನಂತರ, ಚಾಲುಕ್ಯರು ಹಾಗೂ ರಾಷ್ಟ್ರಕೂಟರ ಆಡಳಿತದಲ್ಲಿ ಕನ್ನಡ ಮತ್ತು ಸಂಸ್ಕೃತದ ಶಾಸನಗಳನ್ನು ಕಾಣಬಹುದು. ಹೌದು ! ಭಾಷಾಂತರ ಕಾರ್ಯ ಅಂದಿನಿಂದಲೇ ಪ್ರಾರಂಭವಾಗಿದೆ ಎಂಬ ಮಹತ್ವದ ಸಂಗತಿಯನ್ನು ಈ ಶಾಸನಗಳು ತಿಳಿಸುತ್ತವೆ.

**ಭಾಷಾಂತರ ಇಲಾಖೆ**

ಭಾಷಾ ಇತಿಹಾಸವನ್ನು ಒಮ್ಮೆ ಅವಲೋಕಿಸಿದರೆ, ಭಾಷಾಂತರ ಇಲಾಖೆಯು ಸ್ವಾತಂತ್ರ್ಯಪೂರ್ವ ಇಲಾಖೆ ಎಂಬ ಅಂಶ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಆಂಗ್ಲರ ಆಡಳಿತದಲ್ಲಿ ದ್ವಿ–ಭಾಷಿಗಳು ಹಾಗೂ ಭಾಷಾಂತರಕಾರರನ್ನು ನೇಮಕ ಮಾಡಿಕೊಂಡು ಆಡಳಿತ ಮತ್ತು ಕಾನೂನಿಗೆ ಸಂಬಂಧಿಸಿದ ವಿಚಾರಗಳನ್ನು ಇಂಗ್ಲೀಷ್ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರ ಮಾಡುವ ಓರಿಯಂಟಲ್ ಟ್ರಾನ್ಸ್‌ಲೇಷನ್ಸ್ ಡಿಪಾರ್ಟ್‌ಮೆಂಟ್ ಎಂಬ ಹೆಸರಿನ ಇಲಾಖೆಯೇ ಇತ್ತು. ಭಾಷಾವಾರು ಪ್ರಾಂತ್ಯಗಳ ಪುನರ್ವಿಂಗಡಣೆಯ ಜೊತೆ ಜೊತೆಗೆ ರಚನೆಯಾದ ವಿಶಾಲ ಮೈಸೂರು ರಾಜ್ಯದೊಂದಿಗೆ ಚಿಗುರೊಡೆದದ್ದು ಭಾಷಾಂತರ ಇಲಾಖೆ.

ಮುಂಬೈ–ಕರ್ನಾಟಕ, ಹೈದರಾಬಾದ್–ಕರ್ನಾಟಕ ಹಾಗೂ ಮದರಾಸು ಪ್ರಾಂತ್ಯದ ಕೆಲವು ಪ್ರದೇಶಗಳು ಮೈಸೂರು ರಾಜ್ಯದೊಂದಿಗೆ ವಿಲೀನವಾದಾಗ ಆ ಪ್ರದೇಶದಲ್ಲಿನ ಅನ್ಯ ಭಾಷಿಕರಿಗೆ ಸರ್ಕಾರದ ವಿಚಾರವನ್ನು ತಲುಪಿಸುವ ಅಳಿಲು ಸೇವೆ ಮಾಡಿದ್ದು ಈ ಇಲಾಖೆಯೇ.

ಇಂದಿಗೂ ಸಂಸದೀಯ ವ್ಯಹಾರಗಳು ಮತ್ತು ಶಾಸನ ರಚನಾ ಇಲಾಖೆಯ ನರಮಂಡಲ ಹಾಗೂ ಹೃದಯಮಂಡಲದತೆ ಇರುವ ಭಾಷಾಂತರ ಇಲಾಖೆಯು ಅಡುಗೆಯಲ್ಲಿ ಉಪ್ಪು ಪಡೆದುಕೊಳ್ಳುವಷ್ಟೇ ಮಹತ್ವವನ್ನು ಸರ್ಕಾರದಲ್ಲಿ ಪಡೆದುಕೊಂಡಿದೆ. ಅಂದಿನ ಕಾಲದಲ್ಲಿ ಆಂಗ್ಲ ಭಾಷಾ ಪ್ರಭಾವ ಎಷ್ಟಿತ್ತೆಂದರೆ ಇಂಗ್ಲೀಷ್ ಭಾಷೆಯ ಪದಗಳಿಗೆ "ಉ"ಕಾರ ಸೇರ್ಪಡೆಯಾದಲ್ಲಿ ಅದು ಕನ್ನಡ ಪದವಾಗಿಬಿಡುತ್ತಿತ್ತು. ಅದೇ ರೀತಿಯಲ್ಲಿ ಬಸ್ಸು, ಕಾರು, ಪೊಲೀಸು, ಕೋರ್ಟು, ಬ್ಯಾಂಕು, ನೋಟೀಸು, ಸ್ಟ್ಯಾಂಪು, ಪಂಪು, ಜಡ್ಜು, ಲಾಯರು ಎಂಬ ಶಬ್ದಗಳು ಕನ್ನಡ ಭಾಷಾ ಪದಕೋಶದಲ್ಲಿ ಸೇರಿಬಿಟ್ಟವು.

ಭಾರತ ಸರ್ಕಾರವು ಹೊರಡಿಸಿರುವ ಎರಡೂವರೆ ಸಾವಿರಕ್ಕೂ ಹೆಚ್ಚು ಅಧಿನಿಯಮಗಳನ್ನು ಭಾಷಾಂತರ ಇಲಾಖೆ ಕನ್ನಡ ಭಾಷೆಗೆ ಭಾಷಾಂತರ ಮಾಡಿದೆ. ಅಂತೆಯೇ, ಕರ್ನಾಟಕ ಸರ್ಕಾರದ ಎರಡು ಸಾವಿರಕ್ಕೂ ಹೆಚ್ಚು ಅಧಿನಿಯಮಗಳನ್ನು ಕನ್ನಡ ಭಾಷೆಯಲ್ಲಿ ಸಿದ್ಧಪಡಿಸುವಲ್ಲಿ ವಿವಿಧ ಇಲಾಖೆಗಳಿಗೆ ನೆರವು ನೀಡಿದೆ.

ಅಲ್ಲದೆ, ಆಡಳಿತಾತ್ಮಕ ವಿಷಯಗಳಿಗೆ ಸಂಬಂಧಿಸಿದ ಸರ್ಕಾರದ ಅಧಿಸೂಚನೆಗಳು, ಅಧಿಕೃತ ಜ್ಞಾಪನಗಳು, ಆದೇಶಗಳು, ಸುತ್ತೋಲೆಗಳು, ವಿಷಯ ಸಮಿತಿಗಳ ವರದಿಗಳು, ರಾಜ್ಯಾಡಳಿತ ವರದಿಗಳು, ವಾರ್ಷಿಕ ವರದಿಗಳು, ನಿಯಂತ್ರಕರು ಹಾಗೂ ಮಹಾಲೇಖಪಾಲರ ವರದಿಗಳು, ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ವರದಿಗಳು, ವಿಚಾರಣಾ ವರದಿಗಳು, ವೃಂದ ಮತ್ತು ನೇಮಕಾತಿ ನಿಯಮಾವಳಿಗಳು, ವಿವಿಧ ಇಲಾಖೆಗಳು ಕಳುಹಿಸಿಕೊಡುವ ವಿವಿಧ ವಿಷಯಗಳ ಕನ್ನಡ ಭಾಷಾಂತರ ಇವೆಲ್ಲವೂ ಭಾಷಾಂತರ ಇಲಾಖೆಯ ದೈನಂದಿನ ಕಾರ್ಯಚಟುವಟಿಕೆಗಳಾಗಿವೆ ಎಂದು ಭಾಷಾಂತರ ಇಲಾಖೆಯ ನಿರ್ದೇಶಕ ಡಾ ಅರದೇಶಹಳ್ಳಿ ವೆಂಕಟೇಶ್ ಅವರು ಹೇಳುತ್ತಾರೆ.

ಅಧೀನ ನ್ಯಾಯಾಲಯಗಳಲ್ಲಿ ಕನ್ನಡದ ಅನುಷ್ಠಾನಕ್ಕೆ ಭಾಷಾಂತರ ಇಲಾಖೆಯ ಕೊಡುಗೆ ಅಗಾಧ ಮತ್ತು ಅಪಾರ. ಪ್ರಥಮ ಮಾಹಿತಿ ವರದಿ, ದೋಷಾರೋಪಣಾ ಪಟ್ಟಿ, ಸಾಕ್ಷಿಗಳ ಹೇಳಿಕೆಗಳು, ಪಾಟೀ ಸವಾಲುಗಳು, ಮಹಜರು, ಅಧೀನ ನ್ಯಾಯಾಲಯಗಳ ತೀರ್ಪುಗಳು ಹಾಗೂ ಇನ್ನಿತರೆ ನ್ಯಾಯಿಕ ವಿಷಯಗಳನ್ನು ಇಂಗ್ಲೀಷ್‌ನಿಂದ ಕನ್ನಡಕ್ಕೆ ಹಾಗೂ ಕನ್ನಡದಿಂದ ಇಂಗ್ಲೀಷ್ ಭಾಷೆಗೆ ಭಾಷಾಂತರ ಮಾಡಿ ಉಚ್ಚ ಹಾಗೂ ಸರ್ವೋಚ್ಚ ನ್ಯಾಯಾಲಯಗಳಲ್ಲಿನ ಮೇಲ್ಮನವಿ ಪ್ರಕರಣಗಳ ವಿಚಾರಣೆಗೆ ಪೂರಕವಾಗುವಂತೆ ಅಡ್ವೋಕೇಟ್ ಜನರಲ್, ಅಭಿಯೋಜಕರ ಇಲಾಖೆ ಹಾಗೂ ಪೊಲೀಸ್ ಇಲಾಖೆಗೆ ಕಳುಹಿಸಿ ಭಾಷಾಂತರ ಇಲಾಖೆ ತನ್ನ ವಿಶಿಷ್ಠ ಸೇವೆಯನ್ನು ಒದಗಿಸುತ್ತದೆ.

ಕಾನೂನು ಪದಕೋಶ ಹಾಗೂ ಪಾರಿಭಾಷಿಕ ಪದಕೋಶಗಳನ್ನು ಸಿದ್ಧಪಡಿಸುವಲ್ಲಿಯೂ ಭಾಷಾಂತರ ಇಲಾಖೆ ಮಹತ್ತರ ಸೇವೆ ಸಲ್ಲಿಸುತ್ತಿದೆ. ಕನ್ನಡ ಭಾಷೆಯಲ್ಲಿ ಭಾರತದ ಸಂವಿಧಾನ, ಸಿವಿಲ್, ಪ್ರೊಸೀಜರ್ ಕೋಡ್, ಕ್ರಿಮಿನಲ್ ಪ್ರೊಸೀಜರ್ ಕೋಡ್ ಹಾಗೂ ಇಂಡಿಯನ್ ಪೀನಲ್ ಕೋಡ್‌ಗಳನ್ನು ಭಾಷಾಂತರಿಸಿ ಪ್ರಕಟಿಸಿದ ಕೀರ್ತಿ ಮತ್ತು ಗೌರವ ಭಾಷಾಂತರ ಇಲಾಖೆಯದಾಗಿದೆ.

ರಾಜ್ಯ ವಿಧಾನ ಮಂಡಲದಲ್ಲಿ ಅನುಮೋದನೆಗೊಂಡ ವಿಧೇಯಕಗಳನ್ನು ರಾಜ್ಯಪಾಲರ ಅಂಕಿತಕ್ಕೆ ಹಾಗೂ ಸಂಸತ್ತಿನಲ್ಲಿ ಅನುಮೋದಿತಗೊಳ್ಳುವ ವಿಧೇಯಕಗಳನ್ನು ರಾಷ್ಟ್ರಪತಿಗಳ ಅಂಕಿತಕ್ಕೆ ಕಳುಹಿಸುವಲ್ಲಿಯೂ ಭಾಷಾಂತರ ಇಲಾಖೆ ತನ್ನ ಸೇವೆಯ ಧಾರೆ

**ಭಾಷಾಂತರ ಆ್ಯಪ್ !**

ಭಾಷಾಂತರ ಎಂಬುದು ಸೂಕ್ಷ್ಮಾತಿ ಸೂಕ್ಷ್ಮ ವಿಚಾರ. ಇತ್ತೀಚಿನ ದಿನಗಳಲ್ಲಿ ಭಾಷಾಂತರ ಆ್ಯಪ್‌ಗಳು ಮಾರುಕಟ್ಟೆ ಪ್ರವೇಶಿಸಿವೆ. ಆದರೆ, ಈ ಆ್ಯಪ್‌ಗಳು ಪರಿಪೂರ್ಣ ಭಾಷಾಂತರ ಮಾಡಲು ಸಾಧ್ಯವೇ ಇಲ್ಲ. ಜಾಹೀರಾತು ರೂಪದಲ್ಲಿ ಹೊರಹೊಮ್ಮುತ್ತಿರುವ ವಾಣಿಜ್ಯ ಬರಹಗಳಲ್ಲಿ ಇದನ್ನು ನಾವು ಕಾಣಬಹುದಾಗಿದೆ. ಹಲವೊಮ್ಮೆ ಭಾಷೆಯ ಮೂಲ ಆಶಯವನ್ನೇ ಮೂಲೆಗುಂಪು ಮಾಡುವ ಇಂತಹ ಆ್ಯಪ್‌ಗಳ ಬಳಕೆ ಅಪಾಯಕಾರಿ ಎಂದು ಡಾ ವೆಂಕಟೇಶ್ ಅವರು ಅಭಿಪ್ರಾಯಪಡುತ್ತಾರೆ.

ಭಾಷಾ ವಿಸ್ತಾರತೆಯ ಅರಿವಿನ ಕೊರತೆಯ ಹಿನ್ನೆಲೆಯಲ್ಲಿ ಕೃತಕ ಬುದ್ಧಿಮತ್ತೆಯ ತಂತ್ರಾಶದಲ್ಲೂ ಇದೇ ರೀತಿಯ ಸಮಸ್ಯೆಗಳು ಎದುರಾಗುತ್ತವೆ. ವಿಶೇಷ ಅಂದರೆ ಯಾವುದೇ ಯಂತ್ರ ಅಥವಾ ತಂತ್ರಾಂಶಕ್ಕಿಂತಲೂ ಮಾನವ – ವೃತ್ತಿಪರ ವ್ಯಕ್ತಿ – ಮಾಡುವ ಭಾಷಾಂತರ ಕಾರ್ಯ ಮಾತ್ರ ಅತ್ಯುತ್ತಮವಾಗಿರಲು ಸಾಧ್ಯ ಎಂಬುದು ಡಾ ವೆಂಕಟೇಶ್ ಅವರ ಅನಿಸಿಕೆ.

**ಭಾಷೆ ಒಂದೇ ! ಅರ್ಥ ಬೇರೇ !!**

ಭಾಷೆ ಒಂದೇ ಆಗಿದ್ದರೂ, ಪ್ರದೇಶ ಬದಲಾದಂತೆ ಹಾಗೂ ಕಾಲ ಬದಲಾದಂತೆ ಭಾಷೆಯಲ್ಲಿನ ಪದಗಳ ಅರ್ಥ ಬದಲಾಗುತ್ತದೆ. ಉದಾಹರಣೆಗೆ, ಬೆಂಗಳೂರಿನಲ್ಲಿ **"ಭಯಂಕರ"** ಎಂಬ ಪದ ಭೀಕರತೆಯನ್ನು ಸೂಚಿಸುತ್ತದೆ. ಆದರೆ, ಮಂಗಳೂರಿನಲ್ಲಿ **"ಭಯಂಕರ"** ಎಂಬ ಪದ ಗುಣವಾಚಕ ಪದವಾಗಿದೆ. ಕರಾವಳಿ ಭಾಗದಲ್ಲಿ ಆತ ಭಯಂಕರ ವ್ಯಕ್ತಿ ಎಂದರೆ ಆತ ಶಕ್ತಿಶಾಲಿ, ಬುದ್ಧಿಶಾಲಿ ಅಥವಾ ಧೈರ್ಯಶಾಲಿ ಎಂದು ಅರ್ಥ.

**ಬಂದಿದೆ ಅಲ್ಲ ! ಬಂದ್ ಇದೆ !!**

ಅಂದಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಹುಬ್ಬಳ್ಳಿಯ ಪರಿವೀಕ್ಷಣಾ ಮಂದಿರದಲ್ಲಿ ತಂಗಿದ್ದ ಸಂದರ್ಭ. ಮುಂಜಾನೆ ಎದ್ದು ಸ್ನಾನ ಮಾಡಲು ಹೋದಾಗ ನಲ್ಲಿಯಲ್ಲಿ ನೀರು ಬರುತ್ತಿರಲಿಲ್ಲ ! ಸ್ವಲ್ಪ ಹೊತ್ತಿನ ನಂತರ ಮತ್ತೆ ಸ್ನಾನದ ಮನೆಗೆ ತೆರಳುತ್ತಾರೆ. ಆಗಲೂ ನೀರು ಬರುತ್ತಿರಲಿಲ್ಲ ! ಮೂರನೇ ಬಾರಿ ತೆರಳಿದಾಗಲೂ ನೀರು ಬಾರದ್ದನ್ನು ಗಮನಿಸಿದ ಹನುಮಂತಯ್ಯನವರು ಅಲ್ಲಿನ ಮೇಟಿಯನ್ನು ಕರೆಯುತ್ತಾರೆ. **"ನೀರು ಬಂದಿದ್ದರೆ ತಿಳಿಸು"** ಎನ್ನುತ್ತಾರೆ.

ಸ್ನಾನದ ಮನೆಗೆ ಹೋಗಿ ಮರು ಕ್ಷಣವೇ ಮರಳಿದ ಮೇಟಿ, **"ನೀರು ಬಂದಿದೆ"** ಎಂದು ಮುಖ್ಯಮಂತ್ರಿಯವರಿಗೆ ತಿಳಿಸುತ್ತಾನೆ. ಕೆಂಗಲ್ ಹನುಮಂತಯ್ಯನವರು ಕೂಡಲೇ ಸ್ನಾನದ ಮನೆಗೆ ತೆರಳುತ್ತಾರೆ. ನಲ್ಲಿಯಲ್ಲಿ ನೀರು ಬಾರದೇ ಇರುವುದನ್ನು ಗಮನಿಸಿ **"ಏನೋ ತಮ್ಮಾ ! ನಲ್ಲಿಯಲ್ಲಿ ನೀರು ಬರುತ್ತಿಲ್ಲವಲ್ಲೋ !"** ಎಂದು ಉದ್ಗರಿಸುತ್ತಾರೆ. ಆಗ ಆ ಮೇಟಿ ಹೇಳಿದ್ದೇನು ಗೊತ್ತೇ ? **"ಸ್ವಾಮಿ ! ನೀರು ಬಂದ್ ಇದೆ ಅಂತಾನೇ ನಾನು ಹೇಳಿದ್ದು"** ಎನ್ನುತ್ತಾನೆ. ಆದರೆ, **"ನೀರು ಬಂದಿದೆ"** ಎಂದು ಮೈಸೂರು ಸೀಮೆಯ ಕೆಂಗಲ್ ಅವರು ಭಾವಿಸಿದ್ದರು.

**ಬೆಳಗ್ಗೆ ಮುಟ್ಟುವುದಿಲ್ಲ !**

ಧಾರವಾಡದ ಹುಡುಗಿಯನ್ನು ಉಡುಪಿಯ ಹುಡುಗನೊಬ್ಬ ಮದುವೆಯಾದನಂತೆ. ವಧೂ–ವರರು ಧಾರವಾಡದಲ್ಲಿ ರಾತ್ರಿ ಬಸ್ಸು ಹತ್ತಿದರು. ಮರುದಿನ ಬೆಳಗ್ಗೆ ಆ ನವದಂಪತಿ ಮಂಗಳೂರು ತಲುಪಿದ್ದಾರೆ.

ಹುಡುಗಿಯ ತಂದೆ ಅಳಿಯನಿಗೆ ದೂರವಾಣಿ ಕರೆ ಮಾಡಿ
**"ಅಳಿಯಂದ್ರೇ! ಮುಟ್ಟಿದ್ರಾ"** ಎಂದು ಪ್ರಶ್ನಿಸುತ್ತಾರೆ.
**"ಛೇ! ಬೆಳಗ್ಗೇ ಬೆಳಗ್ಗೆ! ಮುಟ್ಟುವುದಿಲ್ಲ !!** ಎಂದು ಅಳಿಯ ಮಾವನಿಗೆ ಉತ್ತರಿಸಿದನಂತೆ !!!

**ಹಚ್ಚುವುದು ! ಹತ್ತುವುದು !!**

ದಕ್ಷಿಣ ಕರ್ನಾಟಕದಲ್ಲಿ ಒಲೆ ಹಚ್ಚುವುದು, ದೀಪ ಹಚ್ಚುವುದು, ಸ್ನಾನಕ್ಕೆ ಇಳಿಯುವುದು ಎಂಬ ಪದಗಳನ್ನು ಬಳಸುತ್ತೇವೆ.

ಉತ್ತರ ಕರ್ನಾಟಕದಲ್ಲಿ ಪೋನು ಹಚ್ಚುವುದು, ಜಳಕ ಮಾಡಲು ಹತ್ತುವುದು ಎಂಬುದು ಸಾಮಾನ್ಯವಾಗಿ ಬಳಸುವ ಪದಗಳಾಗಿವೆ. ಭಾಷೆಯಲ್ಲಿ ಸ್ಪಷ್ಟತೆ ಎಷ್ಟು ಮುಖ್ಯವೋ ಭಾಷಾಂತರ ಕಾರ್ಯದಲ್ಲಿ ನಿಖರತೆಯೂ ಅಷ್ಟೇ ಮುಖ್ಯ !



**– ಡಾ ವೆಂಕಟೇಶ್**
ನಿರ್ದೇಶಕರು, ಭಾಷಾಂತರ ನಿರ್ದೇಶನಾಲಯ





Downloaded From: www.kpscvaani.com



# ಕನ್ನಡ ಮಾಧ್ಯಮದಲ್ಲಿ ವಿಜ್ಞಾನ ಶಿಕ್ಷಣಕ್ಕೆ ಮುಂದಾದ ಸರ್ಕಾರ

**ಕನ್ನಡ ಮಾಧ್ಯಮದಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಯಾವುದೇ ಆತಂಕವಿಲ್ಲದೆ ಇನ್ನು ಮುಂದೆ ಪದವಿ ಪೂರ್ವ ಶಿಕ್ಷಣದಲ್ಲಿ ವಿಜ್ಞಾನ ವಿಷಯವನ್ನು ತೆಗೆದುಕೊಂಡು ವಿದ್ಯಾಭ್ಯಾಸವನ್ನು ಮುಂದುವರೆಸಲು ಅನುಕೂಲವಾಗುವಂತಹ ನಿಟ್ಟಿನಲ್ಲಿ ಇದೇ ಮೊದಲ ಬಾರಿಗೆ ರಾಜ್ಯ ಸರ್ಕಾರವು ಕನ್ನಡ ಮಾಧ್ಯಮದಲ್ಲಿ ವಿಜ್ಞಾನ ವಿಷಯಗಳ ಪಠ್ಯ ಪುಸ್ತಕಗಳನ್ನು ಮುದ್ರಿಸುವ ಮೂಲಕ ಕನ್ನಡ ಭಾಷೆಯಲ್ಲಿ ವಿಜ್ಞಾನ ಶಿಕ್ಷಣಕ್ಕೆ ಮುಂದಾಗಿದೆ.**

ಎನ್.ನಾಗರತ್ನಮ್ಮ

ಗ್ರಾಮೀಣ ಭಾಗದ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ, ಅದರಲ್ಲೂ ಕನ್ನಡ ಮಾಧ್ಯಮದಲ್ಲಿ ತಮ್ಮ ಪ್ರೌಢಶಿಕ್ಷಣವನ್ನು ಮುಗಿಸುತ್ತಾರೆ. ಎಸ್.ಎಸ್.ಎಲ್.ಸಿ ಯಲ್ಲಿ ಉತ್ತಮ ಅಂಕಗಳನ್ನು ಪಡೆದು, ವಿಜ್ಞಾನ ವಿಷಯವನ್ನು ಓದಲು ಆಸಕ್ತಿ ಇದ್ದರೂ ಕೂಡ, ವಿಜ್ಞಾನ ವಿಷಯವನ್ನು ಆಯ್ಕೆ ಮಾಡಿಕೊಳ್ಳಲು ಗ್ರಾಮೀಣ ಭಾಗದ ಮಕ್ಕಳು ಹಿಂಜರಿಯುತ್ತಾರೆ. ವಿಜ್ಞಾನ ವಿಷಯಗಳು ಆಂಗ್ಲ ಭಾಷೆಯಲ್ಲಿ ಇರುವುದೇ ಇದಕ್ಕೆ ಕಾರಣ.

ಗ್ರಾಮೀಣಾ ಪ್ರದೇಶದ ಬಹುತೇಕ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ವರೆಗೆ ಕನ್ನಡ ಮಾಧ್ಯಮದಲ್ಲಿ ಅಧ್ಯಯನ ಮಾಡಿರುತ್ತಾರೆ. ನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ವಿಜ್ಞಾನವನ್ನು ಆಯ್ದುಕೊಂಡಲ್ಲಿ ಅವರಿಗೆ ಹೊಸದೊಂದು ಸಮಸ್ಯೆ ಪ್ರಾರಂಭವಾಗುತ್ತದೆ. ವಿಜ್ಞಾನದ ಪಠ್ಯಪುಸ್ತಕಗಳು ಆಂಗ್ಲ ಭಾಷೆಯಲ್ಲಿ ಮಾತ್ರ ಲಭ್ಯವಿರುವುದು ಈ ಸಮಸ್ಯೆಗೆ ಕಾರಣವಾಗಿದೆ. ಗ್ರಾಮೀಣ ಭಾಗದ ಮಕ್ಕಳಿಗೆ ವಿಜ್ಞಾನ ವಿಷಯವನ್ನು ಆಂಗ್ಲ ಮಾಧ್ಯಮದಲ್ಲಿ ಅಭ್ಯಾಸ ಮಾಡಲು ತೊಡಕಾಗುವುದನ್ನು ಮನಗಂಡ ಸರ್ಕಾರವು ಪದವಿ ಪೂರ್ವ ಶಿಕ್ಷಣ ಇಲಾಖೆಯ ಮುಖಾಂತರ ವಿಜ್ಞಾನ ಸಂಯೋಜನೆಯಾದ ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತ ಶಾಸ್ತ್ರ ಹಾಗೂ ಜೀವಶಾಸ್ತ್ರ ವಿಷಯಗಳ ಪಠ್ಯ ಪುಸ್ತಕಗಳನ್ನು ಕನ್ನಡ ಮಾಧ್ಯಮದಲ್ಲಿ ಇದೇ ಮೊದಲ ಬಾರಿಗೆ ಮುದ್ರಿಸಿದೆ. ಆ ಮೂಲಕ ಮಾತೃ ಭಾಷೆಯಲ್ಲಿ ವಿಜ್ಞಾನ ಶಿಕ್ಷಣ ನೀಡಲು ಸರ್ಕಾರ ಸನ್ನದ್ಧವಾಗಿದೆ.

ರಾಷ್ಟ್ರದಾದ್ಯಂತ ಒಂದೇ ರೀತಿಯ ಪಠ್ಯಕ್ರಮ ಇರಬೇಕೆಂಬ ಕೇಂದ್ರ ಸರ್ಕಾರದ ನಿಲುವಿಗೆ ಅನುಗುಣವಾಗಿ ರಾಜ್ಯದಲ್ಲಿ ಪ್ರಥಮ ಹಾಗೂ ದ್ವಿತೀಯ ಪಿ.ಯು.ಸಿ ತರಗತಿಗಳಿಗೆ 2012–13 ರ ಶೈಕ್ಷಣಿಕ ವರ್ಷದಿಂದ ಸಿ.ಬಿ.ಎಸ್.ಸಿ ಪಠ್ಯಕ್ರಮದಂತೆ ರಚಿತವಾದ ಎನ್.ಸಿ.ಎ.ಆರ್.ಟಿ. ಪಠ್ಯಪುಸ್ತಕವನ್ನು ಬೋಧನೆಗಾಗಿ ಅಧಿಕೃತ ಪಠ್ಯ ಪುಸ್ತಕವನ್ನಾಗಿ ಪದವಿ ಪೂರ್ವ ಶಿಕ್ಷಣ ಇಲಾಖೆಯು ಅಳವಡಿಸಿಕೊಂಡಿತ್ತು.

ಈ ಹಿನ್ನೆಲೆಯಲ್ಲಿ ವಿಜ್ಞಾನದ ಪರಿಕಲ್ಪನೆಗಳನ್ನು ಕನ್ನಡದಲ್ಲಿ ವಿದ್ಯಾರ್ಥಿಗಳಿಗೆ ತಲುಪಿಸುವ ವಿಶಿಷ್ಟ ಯೋಜನೆಯನ್ನು ಹಮ್ಮಿಕೊಂಡು 2015 ರಲ್ಲಿ ಸಿದ್ಧಪಡಿಸಿದ್ದರು. ತಾಂತ್ರಿಕವಾಗಿ ಪರಿಷ್ಕರಣೆಗೊಂಡು ಪಠ್ಯಕ್ರಮಕ್ಕೆ ಅನುಗುಣವಾಗಿ ಕನ್ನಡಕ್ಕೆ ಅನುವಾದಿಸಿ 2019–20 ನೇ ಸಾಲಿನಲ್ಲಿ ಮುದ್ರಿಸಿ ವಿದ್ಯಾರ್ಥಿಗಳು ಹಾಗೂ ಉಪನ್ಯಾಸಕರ ಕೈಸೇರಲು ಪುಸ್ತಕಗಳನ್ನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರಾದ ಎಸ್. ಸುರೇಶ್ ಕುಮಾರ್ ಅವರು ಸೆಪ್ಟೆಂಬರ್ ಮಾಹೆಯಲ್ಲಿ ಲೋಕಾರ್ಪಣೆ ಮಾಡಿದರು.

ಇನ್ನು ಮುಂದೆ ರಾಷ್ಟ್ರ ಮಟ್ಟದ ಸ್ಪರ್ಧಾತ್ಮ ಪರೀಕ್ಷೆಗಳಾದ ನೀಟ್, ಜೆಇಇ, ಸಿಇಟಿ ಗಳಲ್ಲಿ ಪ್ರಶ್ನೆಗಳು ಕೇವಲ ಆಂಗ್ಲ ಭಾಷೆಯಲ್ಲಿರದೆ ಆಯಾ ರಾಜ್ಯ ಭಾಷೆಗಳಿಗೆ ಭಾಷಾಂತರವಾಗಿ ಬರುವುದರಿಂದ ಎಸ್.ಎಸ್.ಎಲ್.ಸಿ. ಯವರೆಗೆ ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿರುವ ಸ್ಪರ್ಧಾತ್ಮಕ ವಿದ್ಯಾರ್ಥಿಗಳಿಗೂ ಸಹಕಾರಿಯಾಗುವುದು ಎಂದು ಮನಗಂಡ ಸರ್ಕಾರವು ಪ್ರಥಮ ಮುದ್ರಣದಲ್ಲಿ ಪ್ರತಿ ಶೀರ್ಷಿಕೆಯ 1,500 ಪ್ರತಿಗಳನ್ನು ಮುದ್ರಿಸಲಾಗಿದೆ.

ಈ ಪ್ರತಿಗಳಲ್ಲಿ ವಿಜ್ಞಾನ ಸಂಯೋಜನೆ ಹೊಂದಿರುವ ರಾಜ್ಯದ 650 ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಗ್ರಂಥಾಲಯಗಳಿಗೆ ಒಂದೊಂದು ಪ್ರತಿಯನ್ನು ಉಚಿತವಾಗಿ ನೀಡುತ್ತಿದ್ದು, ವಿದ್ಯಾರ್ಥಿಗಳಿಗೆ ಸದಾ ಕಾಲವು ಅಧ್ಯಯನಕ್ಕೆ ಲಭ್ಯವಿರುತ್ತದೆ. ಉಳಿದ ಪ್ರತಿಗಳು ಮಾರಾಟ ಪ್ರತಿಗಳಾಗಿದ್ದು, ರಾಜ್ಯದ ಅನುದಾನಿತ ಹಾಗೂ ಅನುದಾನರಹಿತ ಕಾಲೇಜುಗಳು ಹಾಗೂ ಆಸಕ್ತರು ಖರೀದಿಸಬಹುದು. ಇನ್ನು ಮುಂದೆ ಬೇಡಿಕೆಗೆ ಅನುಗುಣವಾಗಿ ಹೆಚ್ಚಿನ ಪುಸ್ತಕಗಳನ್ನು ಮುದ್ರಿಸಲಾಗುವುದು.

## ಸರ್ಕಾರವು ಕನ್ನಡ ಮಾಧ್ಯಮದಲ್ಲಿ ವಿಜ್ಞಾನ ಪುಸ್ತಕಗಳನ್ನು ಪ್ರಕಟಿಸಿರುವ ಕುರಿತು ವಿದ್ಯಾರ್ಥಿಗಳ ಹಾಗೂ ಪೋಷಕರ ಅಭಿಪ್ರಾಯ

ಈವರೆಗೆ ವಿಜ್ಞಾನ ವಿಭಾಗದ ಪುಸ್ತಕಗಳು ಆಂಗ್ಲ ಭಾಷೆಯಲ್ಲಿದ್ದರಿಂದ ಅಭ್ಯಾಸಕ್ಕೆ ತೊಂದರೆಯಾಗುತ್ತದೆ ಎಂದು ವಾಣಿಜ್ಯ ವಿಭಾಗಕ್ಕೆ ಪ್ರವೇಶ ಪಡೆದಿದ್ದೇನೆ. ಎಸ್.ಎಸ್.ಎಲ್.ಸಿ ಯವರೆಗೆ ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿರುವ ವಿದ್ಯಾರ್ಥಿಗಳಿಗೆ ಇನ್ನು ಮುಂದೆ ವಿಜ್ಞಾನ ವಿಭಾಗದಲ್ಲಿ ಅಭ್ಯಾಸ ಮಾಡಲು ಕನ್ನಡ ಮಾಧ್ಯಮದ ಪುಸ್ತಕಗಳು ಸಹಾಯವಾಗುತ್ತದೆ ಎಂದು ದ್ವಿತೀಯ ಪಿಯು ವಾಣಿಜ್ಯ ವಿಭಾಗದಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿರುವ ತೇಜಸ್ ಅಭಿಪ್ರಾಯ ಪಡುತ್ತಾನೆ.

ಎಸ್.ಎಸ್.ಎಲ್.ಸಿ ವರೆಗೆ ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿರುವುದರಿಂದ ವಿಜ್ಞಾನ ವಿಭಾಗದಲ್ಲಿ ಓದಲು ತುಂಬಾ ಶ್ರಮ ಪಡುತ್ತಿದ್ದೇನೆ. ಪಿಸಿಎಂಬಿ ಪುಸ್ತಕಗಳು ಕನ್ನಡ ಮಾಧ್ಯಮದಲ್ಲಿ ಭಾಷಾಂತರವಾಗಿರುವುದರಿಂದ ಮುಂದಿನ ವಿದ್ಯಾರ್ಥಿಗಳ ಕಲಿಕೆಗೆ ಸಹಾಯಕವಾಗಲಿದೆ ಎಂಬುದು ವಿಜ್ಞಾನ ವಿಭಾಗದಲ್ಲಿ ದ್ವಿತೀಯ ಪಿಯು ಓದುತ್ತಿರುವ ಯಶಸ್ವಿನಿಯ ಅಭಿಪ್ರಾಯವಾಗಿದೆ.

ವಿಜ್ಞಾನ ವಿಭಾಗದ ಪಿಸಿಎಂಬಿಯಲ್ಲಿ ಅಭ್ಯಾಸ ಮಾಡಲು ತುಂಬಾ ಉತ್ಸುಕಳಾಗಿದ್ದೆ. ಆದರೆ ಕನ್ನಡ ಮಾಧ್ಯಮ ವಿದ್ಯಾರ್ಥಿಯಾಗಿದ್ದರಿಂದ ಕಲಿಕೆ ಕಷ್ಟವಾಗುತ್ತದೆ ಎಂದು ವಾಣಿಜ್ಯ ವಿಭಾಗದಲ್ಲಿ ಅಭ್ಯಾಸ ಮಾಡುತ್ತಿದ್ದೇನೆ. ವಿಜ್ಞಾನ ವಿಭಾಗದಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮದ ಪುಸ್ತಕಗಳು ವಿಜ್ಞಾನ ಕಲಿಕೆಗೆ ಆಸಕ್ತಿ ಮೂಡಿಸುತ್ತದೆ ಎನ್ನುತ್ತಾಳೆ ಭೂಮಿಕ.

ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡುವ ಗ್ರಾಮಾಂತರದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಇದರಿಂದ ಹೆಚ್ಚಿನ ಅನುಕೂಲವಾಗುತ್ತದೆ ಹಾಗೂ ವಿಜ್ಞಾನವನ್ನು ಕನ್ನಡ ಭಾಷೆಯಲ್ಲಿ ಅಭ್ಯಸಿಸುವುದರಿಂದ ವಿದ್ಯಾರ್ಥಿಗಳಿಗೆ ವಿಷಯಗಳನ್ನು ಅರ್ಥೈಸಿಕೊಳ್ಳಲು ಸುಲಭವಾಗುತ್ತದೆ ಎಂಬುದು ಪೋಷಕರ ಅಭಿಪ್ರಾಯ.

**ವಿಜ್ಞಾನ ಸಂಯೋಜನೆ ಹೊಂದಿರುವ ರಾಜ್ಯದ 650 ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಗ್ರಂಥಾಲಯಗಳಿಗೆ ಕನ್ನಡ ಮಾಧ್ಯಮದ ಒಂದು ಸೆಟ್ ಪುಸ್ತಕಗಳನ್ನು ಉಚಿತವಾಗಿ ಒದಗಿಸಲಾಗುತ್ತದೆ. ಅನುದಾನಿತ ಮತ್ತು ಅನುದಾನರಹಿತ ಕಾಲೇಜುಗಳ ಗ್ರಂಥಾಲಯಗಳಿಗೆ ಹಾಗೂ ಆಸಕ್ತರಿಗೆ ಈ ಪುಸ್ತಕಗಳನ್ನು ಸರ್ಕಾರಿ ಮುದ್ರಣಾಲಯದಲ್ಲಿ ಖರೀದಿಸಲು ವ್ಯವಸ್ಥೆ ಮಾಡಲಾಗಿದೆ. ಇದರಿಂದ ನೀಟ್‌ನಂತಹ ಸ್ಪರ್ಧಾತ್ಮಕ ಪರೀಕ್ಷೆಗಳು ಆಂಗ್ಲ ಮಾಧ್ಯಮದೊಂದಿಗೆ ಕನ್ನಡ ಮಾಧ್ಯಮದಲ್ಲೂ ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ.**



Downloaded From: www.kpscvaani.com


ಪದವಿ ಪೂರ್ವ ಶಿಕ್ಷಣದ ವಿಜ್ಞಾನ ವಿಭಾಗದಲ್ಲಿನ ಸಿಬಿಎಸ್‌ಇ ಪಠ್ಯಕ್ರಮದ ಪಿಸಿಎಂಬಿ ಪುಸ್ತಕಗಳು ಆಂಗ್ಲ ಭಾಷೆಯಲ್ಲಿದ್ದು, ಕನ್ನಡ ಮಾಧ್ಯಮದಲ್ಲಿ ಅಭ್ಯಾಸ ಮಾಡಿರುವ ವಿದ್ಯಾರ್ಥಿಗಳಿಗಾಗುವ ತೊಂದರೆ ನೀಗಿಸಲು ಅನುಕೂಲವಾಗುವಂತೆ ಎನ್‌ಇಎಸ್‌ಆರ್‌ಟಿಸಿ ಪುಸ್ತಕಗಳನ್ನು ಇದೇ ಮೊದಲ ಬಾರಿ ಕನ್ನಡಕ್ಕೆ ಭಾಷಾಂತರಿಸಲಾಗಿದೆ.

ಪಿಯುಸಿಯಲ್ಲಿ ವಿಜ್ಞಾನ ಸಂಯೋಜನೆಗೆ ದಾಖಲಾಗುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಕನ್ನಡ ಅವತರಣಿಕೆಗಳನ್ನು ಬಿಡುಗಡೆ ಮಾಡಲಾಗಿದೆ. ಇದು ಇಲಾಖೆಯ ಅತ್ಯಂತ ಪ್ರಮುಖ ಪ್ರಯತ್ನವಾಗಿದೆ.

ಕಲಾ ವಿಭಾಗದ ಅಭ್ಯರ್ಥಿಗಳು ಮಾತ್ರವೇ ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆಯುತ್ತಿದ್ದರು. ಆದರೆ ಪಿಸಿಎಂಬಿ ಸಂಯೋಜನೆಯ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮದ ಪುಸ್ತಕಗಳು ಇಲ್ಲವಾದ್ದರಿಂದ ಅವರು ಇಷ್ಟವಿಲ್ಲದಿದ್ದರೂ ಇಂಗ್ಲಿಷ್‌ನಲ್ಲೇ ಬರೆಯಬೇಕಿತ್ತು. ಈಗ ಪುಸ್ತಕಗಳು ಕನ್ನಡ ಮಾಧ್ಯಮದಲ್ಲಿ ದೊರೆಯುವ ಅವಕಾಶವಾಗಿರುವುದರಿಂದ ಪಿಸಿಎಂಬಿ ವಿದ್ಯಾರ್ಥಿಗಳೂ ಇನ್ನು ಮುಂದೆ ಕನ್ನಡದಲ್ಲಿ ಬರೆಯಬಹುದಾಗಿದೆ. ಉಪನ್ಯಾಸಕರೂ ಸಹ ಕನ್ನಡದಲ್ಲಿ ಬೋಧಿಸಲು ಸಹಾಯಕವಾಗಿದೆ.

ಇದು ಸ್ಪರ್ಧಾತ್ಮಕ ಜಗತ್ತು. ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಪ್ರವೇಶ ಪರೀಕ್ಷೆಗಳಲ್ಲಿ ದೇಶದ ಎಲ್ಲ ಭಾಗದ ಮಕ್ಕಳೊಂದಿಗೆ ನಮ್ಮ ಮಕ್ಕಳೂ ಸ್ಪರ್ಧಿಸಬೇಕಾಗಿದೆ. ನಮ್ಮ ಸಿಇಟಿ ಅಷ್ಟೇ ಅಲ್ಲ, ಜೆಇಇ, ನೀಟ್ ನಂತಹ ರಾಷ್ಟ್ರಮಟ್ಟದ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಸ್ಪರ್ಧಿಸಲು ಅನುವಾಗುವಂತೆ 2013–14ರಿಂದ ನಮ್ಮ ರಾಜ್ಯದ ಶಾಲಾ ಕಾಲೇಜುಗಳಲ್ಲಿ ಪ್ರಚಲಿತದಲ್ಲಿದ್ದ ಪಠ್ಯಕ್ರಮಗಳನ್ನು ಕೇಂದ್ರೀಯ ಶಾಲಾ ಕಾಲೇಜುಗಳಲ್ಲಿ ಪ್ರಚಲಿತವಿರುವ ಪಠ್ಯಕ್ರಮಕ್ಕೆ ಬದಲಿಸಲಾಗಿದೆ.

**ಎಸ್. ಸುರೇಶ್‌ಕುಮಾರ್**
ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು



ಈವರೆಗೆ ಕನ್ನಡದಲ್ಲಿ ಪುಸ್ತಕಗಳು ಲಭ್ಯವಿಲ್ಲದ ಕಾರಣ ಕನ್ನಡದಲ್ಲಿ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಸಂಖ್ಯೆ ಕೂಡ ತುಂಬಾ ವಿರಳವಾಗಿತ್ತು. ಪ್ರತಿ ವರ್ಷ ಇಡೀ ರಾಜ್ಯದಲ್ಲಿ ಸುಮಾರು 200–300 ಮಂದಿ ವಿದ್ಯಾರ್ಥಿಗಳು ಮಾತ್ರ ಇದ್ದು, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ವಿಜ್ಞಾನವು ಆಂಗ್ಲ ಭಾಷೆಯಲ್ಲಿದ್ದುದರಿಂದ ಆಯ್ಕೆ ಮಾಡಿಕೊಳ್ಳಲು ಹಿಂಜರಿಯುತ್ತಿದ್ದರು. ಈಗ ಕನ್ನಡ ಮಾಧ್ಯಮದಲ್ಲಿ ಪುಸ್ತಕ ದೊರೆಯುವುದರಿಂದ, ಕನ್ನಡ ಮಾಧ್ಯಮದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ವಿಜ್ಞಾನ ವಿಷಯವನ್ನು ಆಯ್ಕೆ ಮಾಡಿಕೊಳ್ಳಬಹುದು ಎಂದು ನಿರೀಕ್ಷಿಸಲಾಗಿದೆ.

ಯಾವುದೇ ಕಷ್ಟಕರವಾದ ವಿಷಯವನ್ನು ನಮ್ಮ ಮಾತೃ ಭಾಷೆಯಲ್ಲಿ ಸುಲಭವಾಗಿ ಕಲಿಯಲು ಸಾಧ್ಯ. ಆಗ ವಿಷಯದ ಕಠಿಣತೆ ಕಡಿಮೆಯಾಗುತ್ತದೆ. ಈ ನಿಟ್ಟಿನಲ್ಲಿ ಪಿಯುಸಿ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ ವಿಜ್ಞಾನ ಪಠ್ಯ ಪುಸ್ತಕ ನೀಡಲು ಹೊಸ ಹೆಜ್ಜೆ ಇಟ್ಟು, ಮುಖ್ಯವಾಗಿ ಭಾಷಾ ಗಾಂಭೀರ್ಯಕ್ಕೆ ಹಾಗೂ ನಿಖರತೆಗೆ ಕುಂದಿಲ್ಲದಂತೆ ಮೂಲ ವಿಷಯಗಳಿಗೆ ದಕ್ಕೆ ಬಾರದಂತೆ ನಾಲ್ಕು ವಿಷಯಗಳ ಭಾಷಾಂತರ ಸಮಿತಿಯ ಗೌರವಾಧ್ಯಕ್ಷರು ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರಾದ ಎಂ.ಕನಗವಲ್ಲಿ ಭಾ.ಆ.ಸೇ., ಜೀವಶಾಸ್ತ್ರ ಪಠ್ಯ ಪುಸ್ತಕ ಭಾಷಾಂತರ ಸಮಿತಿಯ ಅಧ್ಯಕ್ಷರಾದ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ
ಡಾ: ಟಿ.ಎ.ಬಾಲಕೃಷ್ಣ ಅಡಿಗ. ಭೌತಶಾಸ್ತ್ರ ಪಠ್ಯ ಪುಸ್ತಕ ಅನುವಾದ ಸಮಿತಿಯ ಅಧ್ಯಕ್ಷರಾದ ಸರ್ಕಾರಿ ಕಾಲೇಜಿನ ಉಪನ್ಯಾಸಕರಾದ ಎಂ.ಎಸ್.ಗಾಯತ್ರಿ, ಗಣಿತಶಾಸ್ತ್ರ ಪಠ್ಯ ಪುಸ್ತಕ ಅನುವಾದ ಸಮಿತಿಯ ಅಧ್ಯಕ್ಷರಾದ ಅಂಬೇಡ್ಕರ್ ಮೆಮೊರಿಯಲ್ ಸೊಸೈಟಿ ಪದವಿ ಪೂರ್ವ ಕಾಲೇಜಿನ ನಿವೃತ್ತ ಉಪನ್ಯಾಸಕರಾದ ಹೆಚ್.ಬಿ. ಜಯಕುಮಾರಿ, ರಸಾಯನಶಾಸ್ತ್ರ ಭಾಷಾಂತರ ಸಮಿತಿಯ ಅಧ್ಯಕ್ಷರಾದ ಹನುಮಂತ ಬೆಣ್ಣೆ, ಸರ್ಕಾರಿ ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಸತೀಸ್ ಬಿ. ನಾಯ್ಕ್ ಹಾಗೂ ಅನುಭವಿ ಸದಸ್ಯರುಗಳ ಸಹಕಾರದೊಂದಿಗೆ ಕನ್ನಡ ಅವತರಣಿಕೆಯ ಪಠ್ಯಪುಸ್ತಕಗಳು ಸಿದ್ಧವಾಗಿವೆ.



Downloaded From: www.kpscvaani.com





# ಅನ್ನದಾತರಾದ ನಿರಾಶ್ರಿತರು

ಧನಂಜಯಪ್ಪ. ಬಿ.

ಹಸಿವು ನೀಗಿಸಿಕೊಳ್ಳಲು
ಮತ್ತೊಬ್ಬರ ಎದುರು ಕೈ ಚಾಚುತ್ತಿದ್ದವರು,
ತನ್ನವರೆಂಬುವರ್‍ಯಾರು ಇಲ್ಲದವರು,
ಇಂದು ಕೃಷಿ, ತೋಟಗಾರಿಕೆ ಮಾತ್ರವಲ್ಲದೇ
ಮತ್ತು ಹೈನುಗಾರಿಕೆ ಕ್ಷೇತ್ರಗಳಲ್ಲಿ
ಸ್ವಾವಲಂಬಿಗಳಾಗಿ ಬದುಕು ಕಟ್ಟಿಕೊಳ್ಳುತ್ತಿದ್ದಾರೆ.

**ಚಿ**ತ್ರದುರ್ಗ ತಾಲ್ಲೂಕಿನ ಗೋನೂರು ಸಮೀಪದ ಹೋ.ಚಿ.ಬೋರಯ್ಯ ಬಡಾವಣೆಯಲ್ಲಿ ಇರುವ ನಿರಾಶ್ರಿತರ ಪರಿಹಾರ ಕೇಂದ್ರವು ಭಿಕ್ಷುಕರು, ನಿರಾಶ್ರಿತರನ್ನು ಸ್ವಾವಲಂಬಿಗಳನ್ನಾಗಿ ರೂಪಿಸುತ್ತಿದೆ.

ಹೊಸತನದಿಂದ ಕೂಡಿದ ಈ ಮಾದರಿಯ ಬದುಕು ನಿರಾಶ್ರಿತರ ಕೇಂದ್ರದಲ್ಲಿರುವ ಹಲವರಲ್ಲಿ ಜೀವನ ಪ್ರೀತಿ ತುಂಬಿದೆ. ಇವರೆಲ್ಲರೂ ಕೃಷಿ, ತೋಟಗಾರಿಕೆ, ಹೈನುಗಾರಿಕೆ ಕ್ಷೇತ್ರದಲ್ಲಿ ಬದುಕು ಕಟ್ಟಿಕೊಳ್ಳಲು ಉತ್ಸುಕರಾಗಿದ್ದಾರೆ. ಟೊಮೊಟೊ, ಬದನೆಕಾಯಿ, ಈರುಳ್ಳಿ, ರಾಗಿ ಬೆಳೆದು ಬಂದ ಆದಾಯವನ್ನು ಸರ್ಕಾರಕ್ಕೆ ಸಂದಾಯ ಮಾಡಿದ್ದಾರೆ. ದೈನಂದಿನ ಜೀವನಕ್ಕೆ ಅಗತ್ಯವಾದ ಆಹಾರ ಧಾನ್ಯ, ತರಕಾರಿಯನ್ನು ತಾವೇ ಬೆಳೆದುಕೊಳ್ಳುತ್ತಿದ್ದಾರೆ.

ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇಲ್ಲಿನ ನಿರಾಶ್ರಿತರ ಪರಿಹಾರ ಕೇಂದ್ರವು 14 ಎಕರೆ ವ್ಯಾಪ್ತಿಯಲ್ಲಿದ್ದು, 2018 ರಿಂದ ಮೂರು ಎಕರೆ ಪ್ರದೇಶದಲ್ಲಿ ಕೃಷಿ ಚಟುವಟಿಕೆ

2010–11ನೇ ಸಾಲಿನಲ್ಲಿ 76, 2011–12ರಲ್ಲಿ 92, 2012–13ರಲ್ಲಿ 38, 2013–14ರಲ್ಲಿ 16, 2014–15 ರಲ್ಲಿ 06, 2015–16ರಲ್ಲಿ 11, 2016–17ರಲ್ಲಿ 64, 2017–18 ರಲ್ಲಿ 253, 2018–19ರಲ್ಲಿ 221, 2019–20ನೇ ಸಾಲಿನಲ್ಲಿ 2020 ಜನವರಿ 31ರ ವರೆಗೆ 107 ಮಂದಿ ಸೇರಿದಂತೆ ದೇಶದ ವಿವಿಧ ರಾಜ್ಯಗಳ ಒಟ್ಟು 884 ನಿರಾಶ್ರಿತರು ತಮ್ಮ ಕುಟುಂಬದವರ ತೆಕ್ಕೆಗೆ ಮರಳಿದ್ದಾರೆ.





ಆರಂಭಿಸಲಾಗಿದೆ. 2018–19ನೇ ಸಾಲಿನಲ್ಲಿ ತರಕಾರಿ ಬೆಳೆಗಳಾದ ಟೊಮೊಟೊ, ಬದನೆಕಾಯಿ, ಹಸಿಮೆಣಸಿನಕಾಯಿ ಬೆಳೆದು ರೂ.1.09 ಲಕ್ಷ ಹಣವನ್ನು ಸರ್ಕಾರಕ್ಕೆ ಸಂದಾಯ ಮಾಡಿದ್ದಾರೆ. 2019–20ನೇ ಸಾಲಿನಲ್ಲಿ 12 ಕ್ವಿಂಟಾಲ್‌ನಷ್ಟು ರಾಗಿ ಬೆಳೆದು ಪರಿಹಾರ ಕೇಂದ್ರಕ್ಕೆ ಬಳಸಿಕೊಳ್ಳಲಾಗಿದೆ. ಪ್ರಸಕ್ತ ವರ್ಷ 2020–21ನೇ ಸಾಲಿನಲ್ಲಿ ಈರುಳ್ಳಿ ಬೆಳೆಯಲಾಗಿದೆ. ಉತ್ತಮ ಫಸಲು ಬಂದಿರುವ ಈರುಳ್ಳಿ ಬೆಳೆಯನ್ನು ಕಟಾವು ಮಾಡಲಾಗುತ್ತಿದೆ.

ಕುರುಚಲು ಗಿಡ, ಕಲ್ಲುಗಳಿಂದ ತುಂಬಿದ್ದ ಬೆಟ್ಟವನ್ನು ಯಂತ್ರಗಳ ನೆರವಿನಿಂದ ಸಮತಟ್ಟು ಮಾಡಿ ಕೃಷಿ ಭೂಮಿಯನ್ನಾಗಿ ಮಾಡಿಕೊಂಡು ಮಳೆ ನೀರು ಮತ್ತು ಮೂರು ಕೊಳವೆಬಾವಿಗಳಿಂದ ಸಿಗುವ ನೀರನ್ನು ಬಳಸಿಕೊಂಡು ಕೃಷಿ ಚಟುವಟಿಕೆಯನ್ನು ಮಾಡಲಾಗಿದೆ. ನಿರಾಶ್ರಿತರ ಆರೋಗ್ಯ ಬಹಳ ಮುಖ್ಯ. ಕೇಂದ್ರದಲ್ಲಿ ಸುಮ್ಮನೆ ಕುಳಿತರೆ ಅವರಲ್ಲಿ ಏಕಾಂತ ಭಾವನೆ ಹಾಗೂ ಸೋಮಾರಿತನ ಜಾಸ್ತಿಯಾಗುತ್ತದೆ. ಹಾಗಾಗಿ ಅವರಿಗೆ ಕೇಂದ್ರದಲ್ಲಿ ಸಣ್ಣಪುಟ್ಟ ಕೆಲಸ ನೀಡುವ ಜೊತೆಗೆ ಗಿಡಗಳಿಗೆ ನೀರು ಹಾಕುವುದು ಹಾಗೂ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿದರೆ ಮಾನಸಿಕ ಆರೋಗ್ಯ ಸರಿ ಹೋಗುತ್ತದೆ ಅನಿಸಿ, ನಿರಾಶ್ರಿತರನ್ನು ಕೃಷಿ ಚಟುವಟಿಕೆಗೆ ಬಳಸಿಕೊಳ್ಳಲಾಯಿತು. ಈ ನಿಟ್ಟಿನಲ್ಲಿ ನಿರಾಶ್ರಿತರಿಂದ ಬೇಸಾಯ ಮಾಡಿಸುವ ಪ್ರಯೋಗವೂ ಯಶಸ್ವಿಯಾಯಿತು ಎನ್ನುತ್ತಾರೆ ಗೋನೂರು ನಿರಾಶ್ರಿತರ ಪರಿಹಾರ ಕೇಂದ್ರದ ಅಧೀಕ್ಷಕ ಎಂ.ಮಹದೇವಯ್ಯ.

> **"ಕೇಂದ್ರದಲ್ಲಿ ಸುಮ್ಮನೆ ಕುಳಿತರೆ ಅವರಲ್ಲಿ ಏಕಾಂತ ಭಾವನೆ ಹಾಗೂ ಸೋಮಾರಿತನ ಜಾಸ್ತಿಯಾಗುತ್ತದೆ. ಹಾಗಾಗಿ ಅವರಿಗೆ ಕೇಂದ್ರದಲ್ಲಿ ಸಣ್ಣಪುಟ್ಟ ಕೆಲಸ ನೀಡುವ ಜೊತೆಗೆ ಗಿಡಗಳಿಗೆ ನೀರು ಹಾಕುವುದು ಹಾಗೂ ಕೃಷಿ ಚಟುವಟಿಕೆಯಲ್ಲಿ ತೊಡಗಿಸಿದರೆ ಮಾನಸಿಕ ಆರೋಗ್ಯ ಸರಿ ಹೋಗುತ್ತದೆ ಅನಿಸಿ, ನಿರಾಶ್ರಿತರನ್ನು ಕೃಷಿ ಚಟುವಟಿಕೆಗೆ ಬಳಸಿಕೊಳ್ಳಲಾಯಿತು."**

ಈ ಕೇಂದ್ರದಲ್ಲಿ ಪುರಷರು ಮತ್ತು ಮಹಿಳೆಯರನ್ನು ಸೇರಿಸಿ ಒಟ್ಟು 288 ನಿರಾಶ್ರಿತರಿಗೆ ಆಶ್ರಯ ಕಲ್ಪಿಸಲಾಗಿದೆ. ಕರ್ನಾಟಕ, ತಮಿಳುನಾಡು, ಆಂಧ್ರ, ಕೇರಳ ಸೇರಿದಂತೆ ದೇಶದ ವಿವಿಧ ರಾಜ್ಯದ ನಿರಾಶ್ರಿತರು ಇಲ್ಲಿದ್ದಾರೆ. ಇಲ್ಲಿನ ಕೆಲವರಿಗೆ ಕೃಷಿ ಮಾಡಿದ ಅನುಭವಗಳೂ ಇರುವುದರಿಂದ ಕೃಷಿಯನ್ನು ಸಂತಸದಿಂದ ಮಾಡುತ್ತಿದ್ದಾರೆ.

**ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ ಸುಂದರ ವಾತಾವರಣ:**

ಇಲ್ಲಿನ ನಿರಾಶ್ರಿತರ ಪರಿಹಾರ ಕೇಂದ್ರಕ್ಕೆ ಕಾಲಿಡುತ್ತಿದ್ದಂತೆ ಸುಂದರ ವಾತಾವರಣ ಮನಸ್ಸಿಗೆ ಮುದ ನೀಡುತ್ತದೆ. ಈ ಕೇಂದ್ರದಲ್ಲಿ ತೆಂಗಿನ ಮರ, ಹಲಸಿನ ಮರ, ಅಡಿಕೆ, ಸಾಗುವಾನಿ, ಸಿಲ್ವರ್ ವೋಕ್, ಹೊಂಗೆ, ಬೇವು, ಅಗಸೆ ಸೇರಿದಂತೆ ಇತರೆ ವಿವಿಧ ಜಾತಿಯ ಮರಗಳನ್ನು ಬೆಳೆಸಲಾಗಿದೆ.

ಕೌಟುಂಬಿಕ ಸಮಸ್ಯೆ, ಮಾನಸಿಕ ಅಸ್ವಸ್ಥತೆ ಸೇರಿದಂತೆ ಹಲವಾರು ಸಮಸ್ಯೆಗಳಿಂದ ಕುಟುಂಬದ ಸದಸ್ಯರಿಂದ ಬೇರ್ಪಟ್ಟು, ನಿರಾಶ್ರಿತರ ಪರಿಹಾರ ಕೇಂದ್ರದಲ್ಲಿ ಆಶ್ರಯ ಪಡೆಯುತ್ತಾರೆ. ಅನೇಕ ನಿರಾಶ್ರಿತರು ಕೇಂದ್ರದಲ್ಲಿ ವರ್ಷಗಳ ಕಾಲ ಆರೈಕೆ ಪಡೆದು ಚೇತರಿಸಿಕೊಂಡ ನಂತರ, ತಮ್ಮವರ ಜೊತೆ ಮರಳಿ ಮನೆಗೆ ಸೇರಿದ ಉದಾಹರಣೆಗಳಿವೆ. ■



# ರೇರಾ ಪ್ರಾಧಿಕಾರದ

## ಕ್ಷೇತ್ರದಲ್ಲಿ ಪಾರದರ್ಶಕತೆ

**ಭಾರತ ಸರ್ಕಾರವು ರಿಯಲ್ ಎಸ್ಟೇಟ್ ಕ್ಷೇತ್ರವನ್ನು ಸುಧಾರಿಸಲು ಹಾಗೂ ಹೆಚ್ಚಿನ ಪಾರದರ್ಶಕತೆ, ಹಣಕಾಸಿನ ಶಿಸ್ತು, ಸಾರ್ವಜನಿಕರ ಹಿತಾಸಕ್ತಿಯನ್ನು ಕಾಪಾಡುವ ದೃಷ್ಟಿಯಿಂದ ರಿಯಲ್ ಎಸ್ಟೇಟ್ ಕಾಯ್ದೆ 2016ನ್ನು ಕೇಂದ್ರೀಯ ಕಾಯ್ದೆ 16, 2016 ರಡಿ 26.03.2016 ರಿಂದ ಜಾರಿಗೆ ತಂದಿದೆ.**

**ಪಿ.ಎನ್. ಗುರುಮೂರ್ತಿ**
(ಕನ್ನಡಕ್ಕೆ ಅನುವಾದ: ಸುಮನ)

ಕರ್ನಾಟಕದಲ್ಲಿ ಈ ಕಾಯ್ದೆಯನ್ನು ಸೆಕ್ಷನ್ 20 ರಂತೆ ಕರ್ನಾಟಕ ಗೆಜೆಟ್‌ನಲ್ಲಿ ಸಂ: ಡಿಓಹೆಚ್ 109 ಕೆಹೆಚ್‌ಬಿ ಬೆಂಗಳೂರು ದಿನಾಂಕ: 10.07.2017 ರಡಿಯಲ್ಲಿ ಕರ್ನಾಟಕ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮ 2017 ಅನ್ನು ಪ್ರಕಟಿಸಿದೆ. ಅದರ ಪ್ರಕಾರ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರವನ್ನು (ರೇರಾ) ಸ್ಥಾಪಿಸಲಾಗಿದೆ.

ಮನೆ, ಸೈಟುಗಳು, ಅಪಾರ್ಟ್‌ಮೆಂಟ್‌ಗಳು, ಕಟ್ಟಡಗಳು ಮತ್ತು ರಿಯಲ್ ಎಸ್ಟೇಟ್ ಪ್ರಾಜೆಕ್ಟ್‌ಗಳ ಮಾರಾಟವನ್ನು ಸಮರ್ಥವಾಗಿ ಪಾರದರ್ಶಕವಾಗಿ ನಿರ್ವಹಿಸಲು ಹಾಗೂ ರಿಯಲ್ ಎಸ್ಟೇಟ್ ವಲಯದಲ್ಲಿ ಗ್ರಾಹಕರ ಹಿತಾಸಕ್ತಿಯನ್ನು ಕಾಪಾಡಲು ಕಾಯ್ದೆಯನ್ನು ರಚಿಸಿ ಅನುಷ್ಠಾನಗೊಳಿಸಲಾಗಿದೆ.

ಕಾಯ್ದೆಯಲ್ಲಿ ಗೃಹ ಖರೀದಿ ಪ್ರಕ್ರಿಯೆಯಲ್ಲಿ ಬಾಧಿತರಾದ ಗೃಹ ಖರೀದಿದಾರರು ದಾಖಲಿಸುವ ಫಿರ್ಯಾದುಗಳ ತುರ್ತು ವಿಲೇಗೊಳಿಸಲು ಮತ್ತು ಮೇಲ್ಮನವಿ ನ್ಯಾಯಾಧೀಕರಣದಿಂದ ನಿರ್ಣಯಗಳ ಮನವಿ, ರಿಯಲ್ ಎಸ್ಟೇಟ್ ನ್ಯಾಯಾಧೀಕರಣ ಪ್ರಾಧಿಕಾರದ ಆದೇಶಗಳು ಅಥವಾ ಮಾರ್ಗದರ್ಶನಗಳನ್ನು ನೀಡಲು ನ್ಯಾಯಾಧೀಶರಿಗೆ ಕಾನೂನಾತ್ಮಕವಾಗಿ ಹಕ್ಕುಗಳನ್ನು ನೀಡಲಾಗಿದೆ.

ರಾಜ್ಯದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರಗಳು ಸರ್ಕಾರದ ಕಟ್ಟುನಿಟ್ಟಿನ ವ್ಯಾಪ್ತಿಗೊಳಪಡಿಸಲು ರಾಜ್ಯ ಸರ್ಕಾರವು K-RERA (R&D) ಕಾಯ್ದೆ 2017 ನಿಯಮವನ್ನು ಜಾರಿಗೆ ತರಲಾಯಿತು.





Downloaded From: www.kpscvaani.com



## ವಿವಾದ ಪರಿಹಾರ ಕೋಶ

**ರಾಜ್ಯದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರಗಳನ್ನು, ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕವಾಗಿ ನಡೆಸಲು ಪ್ರಾಧಿಕಾರ ಮತ್ತು ಕಾಯ್ದೆ ಸ್ಥಾಪನೆಗೆ ಪೂರಕವಾಗಿ K-RERA ಸಂಧಾನ ಮತ್ತು ವಿವಾದ ಪರಿಹಾರ ಕೋಶವನ್ನು (K-RERAS Conciliation and Dispute Resolution Cell) KCDRC ರಚನೆ ಮಾಡಲಾಯಿತು.**

ರಿಯಲ್ ಎಸ್ಟೇಟ್ ವಲಯದಲ್ಲಿ ಸುಧಾರಣೆಗಳನ್ನು ಮತ್ತು ಹೊಸತನವನ್ನು ತರುವುದು ರಿಯಲ್ ಎಸ್ಟೇಟ್ ವಲಯದ ವ್ಯವಹಾರದಲ್ಲಿ ಗ್ರಾಹಕರು/ಅಭಿವೃದ್ಧಿದಾರರ ನಡುವಿನ ವ್ಯವಹಾರದಲ್ಲಿ ಪಾರದರ್ಶಕತೆ, ಗ್ರಾಹಕ/ಅಭಿವೃದ್ಧಿ ಸ್ನೇಹಿಯಾಗಿರುವುದರ ಮೂಲಕ ಸಂಬಂಧಪಟ್ಟ ವಿಷಯಗಳಲ್ಲಿ ನಿಖರತೆ ಮತ್ತು ಹಣಕಾಸಿನ ಅಕ್ರಮ ವ್ಯವಹಾರಗಳನ್ನು ತಡೆಯುವುದರ ಮೂಲಕ ಸದರಿ ವಲಯವನ್ನು ಉತ್ತೇಜಿಸುವುದು.

2016 ರ ಕಾಯ್ದೆ ಜಾರಿಯ ಮತ್ತು ಜುಲೈ 10, 2017 ರಿಂದ ಜಾರಿಗೆ ಬಂದ ನಿಯಮಗಳ ಪರಿಣಾಮವಾಗಿ, ಮೇ 1, 2017ರ ನಂತರದಲ್ಲಿ ಚಾಲ್ತಿಯಲ್ಲಿರುವ ಎಲ್ಲಾ ಯೋಜನೆಗಳು ಮತ್ತು ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶ ಹೊಂದಿರುವ ಭೂಮಿಯ ಅಳತೆ 500 ಚದರ ಮೀಟರ್‌ಗಳಿಗಿಂತ ಮತ್ತು ಎಲ್ಲಾ ಹಂತಗಳನ್ನು ಸೇರಿಸಿ ಎಂಟು, ಅದಕ್ಕಿಂತ ಹೆಚ್ಚು ವಸತಿ ಘಟಕಗಳನ್ನು ಹೊಂದಿರುವ ಹೊಸ ಯೋಜನೆಗಳನ್ನು K-RERA ದಡಿ ನೋಂದಣಿಯನ್ನು ಕಡ್ಡಾಯಗೊಳಿಸಲಾಗಿದೆ.

### ಅಭಿವೃದ್ಧಿದಾರರ ನೋಂದಣಿ

ರೇರಾ ಕಾಯೆ ನಿಯಮ 4(1) ರ ಪ್ರಕಾರ ಪ್ರತಿಯೊಬ್ಬ ಅಭಿವೃದ್ಧಿದಾರರು ತಮ್ಮ ಯೋಜನೆಗಳನ್ನು ರೇರಾ ಪ್ರಾಧಿಕಾರದಲ್ಲಿ ಕಡ್ಡಾಯವಾಗಿ ನೋಂದಾಯಿಸ ಬೇಕಾಗಿರುತ್ತದೆ. ರೇರಾ ಪ್ರಾಧಿಕಾರವು ಅಭಿವೃದ್ಧಿದಾರರಿಗೆ ಅನುಕೂಲವಾಗುವಂತೆ ವೆಬ್ ಪೋರ್ಟಲ್‌ನಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಭಿವೃದ್ಧಿದಾರರು ತಮ್ಮ ಯೋಜನೆಗಳನ್ನು ರೇರಾ ವೆಬ್ ಪೋರ್ಟಲ್‌ನಲ್ಲಿ ನೋಂದಣಿ ಮಾಡುವಾಗ ಯಾವ ಯಾವ ದಾಖಲೆಗಳನ್ನು ಅಪ್ ಲೋಡ್ ಮಾಡಬೇಕೆಂಬುದನ್ನು ತಿಳಿಸಲಾಗಿದ್ದು, ಕಾಲಾನುಕಾಲಕ್ಕೆ ಸೂಚನೆಗಳನ್ನು ನೀಡಲಾಗುತ್ತಿದೆ. ಅಭಿವೃದ್ಧಿದಾರರು ತಮ್ಮ ಯೋಜನೆಗಳಿಗೆ ಸಂಬಂಧಿಸಿದಂತೆ ಅಗತ್ಯ ದಾಖಲಾತಿಗಳನ್ನು ರೇರಾ ವೆಬ್ ಪೋರ್ಟಲ್‌ನಲ್ಲಿ ಸಲ್ಲಿಸಿದ ನಂತರ ಪ್ರಾಧಿಕಾರವು ಪರಿಶೀಲಿಸಿ ದಾಖಲಾತಿಗಳು ತೃಪ್ತಿಕರವಾಗಿದ್ದಲ್ಲಿ ನೋಂದಣಿ ಮಾಡಲಾಗುವುದು.

ಸೆಕ್ಷನ್ 12, 14, 18 ಮತ್ತು 19 ರಡಿಯಲ್ಲಿ ದಾಖಲಾಗುವ ಎಲ್ಲಾ ವಿಚಾರಗಳನ್ನು ದಾಖಲಾದ ಯೋಜನೆಗಳಿಗೆ ಸಂಬಂಧಪಟ್ಟ ವಿವಾದಗಳನ್ನು ಬಗೆಹರಿಸಲು ಈ ಕಾಯ್ದೆಯಲ್ಲಿ ನ್ಯಾಯ ನಿರ್ಣಯಾಧಿಕಾರಿಗಳಿಗೆ ಅವಕಾಶವಿದೆ. ಈ ವ್ಯಾಜ್ಯಗಳನ್ನು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ನ್ಯಾಯ ನಿರ್ಣಯಾಧಿಕಾರಿಯವರ ತೀರ್ಪನ್ನು ಮೇಲ್ಮನವಿ ಪ್ರಾಧಿಕಾರದಲ್ಲಿ 60 ದಿನಗಳೊಳಗೆ ಪ್ರಶ್ನಿಸಲು ಅವಕಾಶವಿರುತ್ತದೆ. (ನ್ಯಾಯ ನಿರ್ಣಯಾಧಿಕಾರಿಗಳು ನೀಡುವ ಆದೇಶದಂತೆ ಬಾಧಿತರಾಗುವ ಗೃಹ ಖರೀದಿದಾರರು/ಅಭಿವೃದ್ಧಿದಾರರು) ಯಾವುದೇ ಯೋಜನೆಯನ್ನು K-RERA ದಲ್ಲಿ ನೋಂದಣಿ ಮಾಡಿಕೊಳ್ಳದೆ ಯಾವುದೇ ಪ್ರವರ್ತಕರು/ಅಭಿವೃದ್ಧಿದಾರರು/ಸೈಟ್, ಅಪಾರ್ಟ್‌ಮೆಂಟ್ ಅಥವಾ ಕಟ್ಟಡಗಳ ಜಾಹಿರಾತನ್ನು ಮಾಧ್ಯಮ/ಮುದ್ರಣ ಮಾಧ್ಯಮ ಮೂಲಕ ಸೂಚನೆ ನೀಡುವ ಹಾಗಿಲ್ಲ.

**ರಿಯಲ್ ಎಸ್ಟೇಟ್ ವಲಯದಲ್ಲಿ ಸುಧಾರಣೆಗಳನ್ನು ಮತ್ತು ಹೊಸತನವನ್ನು ತರುವುದು ರಿಯಲ್ ಎಸ್ಟೇಟ್ ವಲಯದ ವ್ಯವಹಾರದಲ್ಲಿ ಗ್ರಾಹಕರು/ಅಭಿವೃದ್ಧಿದಾರರ ನಡುವಿನ ವ್ಯವಹಾರದಲ್ಲಿ ಪಾರದರ್ಶಕತೆ, ಗ್ರಾಹಕ/ಅಭಿವೃದ್ಧಿ ಸ್ನೇಹಿಯಾಗಿರುವುದರ ಮೂಲಕ ಸಂಬಂಧಪಟ್ಟ ವಿಷಯಗಳಲ್ಲಿ ನಿಖರತೆ ಮತ್ತು ಹಣಕಾಸಿನ ಅಕ್ರಮ ವ್ಯವಹಾರಗಳನ್ನು ತಡೆಯುವುದರ ಮೂಲಕ ಸದರಿ ವಲಯವನ್ನು ಉತ್ತೇಜಿಸುವುದು.**

### ದೂರು ಸಲ್ಲಿಕೆಗೆ ಅವಕಾಶ

ಅಭಿವೃದ್ಧಿದಾರರಿಂದ ಸ್ವಂತ ಮನೆ ಖರೀದಿಸಲು, ಮುಂಗಡ ಹಣ ಪಾವತಿಸಿ ಕರಾರಿನಂತೆ ನಿಗಧಿತ ಅವಧಿಯಲ್ಲಿ ಮನೆ ದೊರೆಯದಿದ್ದಾಗ, ಕಟ್ಟಡದ ಕಾಮಗಾರಿ ಅರ್ಧಕ್ಕೆ ನಿಂತಾಗ, ನಕ್ಷೆಯಲ್ಲಿ ಬದಲಾವಣೆ ಮಾಡಿದಾಗ, ಮೂಲಭೂತ ಸೌಕರ್ಯಗಳಿಲ್ಲದಿದ್ದಾಗ, ಮನೆ ಖರೀದಿದಾರರು ರೇರಾ ಪ್ರಾಧಿಕಾರದಲ್ಲಿ ಅಭಿವೃದ್ಧಿದಾರರ ವಿರುದ್ಧ ದೂರು ದಾಖಲಿಸಬಹುದಾಗಿರುತ್ತದೆ.

ಒಂದು ಬಾರಿ ಪ್ರಾಧಿಕಾರದಲ್ಲಿ ದೂರು ನೋಂದಣಿಯಾದರೆ ನಂತರ ಪ್ರಾಧಿಕಾರದ ನ್ಯಾಯ ನಿರ್ಣಯಾಧಿಕಾರಿಗಳ ಮುಂದೆ ಉಭಯತ್ರರನ್ನೂ ಕರೆಸಿ ಸತ್ಯಾ-ಸತ್ಯತೆಗಳ ಬಗ್ಗೆ ಕೂಲಂಕಷವಾಗಿ ವಿಚಾರಣೆ ನಡೆಸಲಾಗುವುದು. ವಿಚಾರಣೆ ನಡೆಸಿದ ನಂತರ, ದೂರುದಾರರ ಅಂಶಗಳು ಸತ್ಯವೆಂದು ಕಂಡು ಬಂದಾಗ ನ್ಯಾಯ ನಿರ್ಣಯಾಧಿಕಾರಿಗಳು ನೀಡುವ ತೀರ್ಪನ್ನು ಖರೀದಿದಾರರಿಗೆ ದಂಡ/ಪರಿಹಾರ ಪಾವತಿಸುವಂತೆ ತೀರ್ಪು ನೀಡಿ, ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡಲು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಗೆ ಆದೇಶ ನೀಡಲಾಗುವುದು.

ಪ್ರಾಧಿಕಾರದಲ್ಲಿ, ಈವರೆವಿಗೂ ಮನೆ/ನಿವೇಶನ ಖರೀದಿದಾರರಿಂದ 4460 ದೂರುಗಳು ದಾಖಲಾಗಿದ್ದು, ಸೆಪ್ಟೆಂಬರ್-2020ರ ಅಂತ್ಯಕ್ಕೆ 2450 ದೂರುಗಳು ಇತ್ಯರ್ಥವಾಗಿವೆ.

### ವಿವಾದ ಪರಿಹಾರ ಕೋಶ

ರಾಜ್ಯದಲ್ಲಿ ರಿಯಲ್ ಎಸ್ಟೇಟ್ ವ್ಯವಹಾರಗಳನ್ನು, ಮುಕ್ತ, ನ್ಯಾಯಸಮ್ಮತ ಮತ್ತು ಪಾರದರ್ಶಕವಾಗಿ ನಡೆಸಲು ಪ್ರಾಧಿಕಾರ ಮತ್ತು ಕಾಯ್ದೆ ಸ್ಥಾಪನೆಗೆ ಪೂರಕವಾಗಿ K-RERA ಸಂಧಾನ ಮತ್ತು ವಿವಾದ ಪರಿಹಾರ ಕೋಶವನ್ನು (K-RERAS Conciliation and Dispute Resolution Cell) KCDRC ರಚನೆ ಮಾಡಲಾಯಿತು.

K-RERA ಕಾಯ್ದೆಯ ಸೆಕ್ಷನ್ 25 ರ ಪ್ರಕಾರ, ಅಧ್ಯಕ್ಷರಿಗೆ ಪ್ರಾಧಿಕಾರದ ವ್ಯವಹಾರಗಳ ನಿರ್ವಹಣೆಯಲ್ಲಿ ಸಾಮಾನ್ಯ ಮೇಲ್ವಿಚಾರಣೆ ಮತ್ತು ನಿರ್ದೇಶನದ ಅಧಿಕಾರವನ್ನು ನೀಡಲಾಗಿದೆ. ಇದಲ್ಲದೆ, ಕಾಯ್ದೆಯ ಸೆಕ್ಷನ್ 32(ಜಿ) ಪ್ರಕಾರ, ವಿವಾದ ಇತ್ಯರ್ಥ ಘಟಕದ ಕಾರ್ಯವಿಧಾನ ವ್ಯವಸ್ಥೆಯ ಮೂಲಕ ಪ್ರವರ್ತಕರು ಮತ್ತು ಹಂಚಿಕೆದಾರರ ನಡುವಿನ ವಿವಾದಗಳ ಸೌಹಾರ್ದಯುತ ಹೊಂದಾಣಿಕೆಗೆ ಅನುಕೂಲವಾಗುವಂತೆ ಕ್ರಮಗಳನ್ನು ತೆಗೆದುಕೊಳ್ಳಲು ಏ-ಖಇಖಂ ಗೆ ಅವಕಾಶವಿದೆ.

ನ್ಯಾಯಾಧೀಶರಿಗೆ ಉಲ್ಲೇಖಿಸಿದ ಯಾವುದೇ ವ್ಯಾಜ್ಯಗಳು, ಸಂಬಂಧಪಟ್ಟ ಕಕ್ಷಿದಾರರ ವ್ಯಾಜ್ಯಗಳ ವೆಚ್ಚ ಮತ್ತು ಸಮಯವನ್ನು ಉಳಿತಾಯ ಮಾಡುವುದಲ್ಲದೆ ಪರಿಹಾರ ಘಟಕದ ಮೂಲಕ ಪರಸ್ಪರ ಉಭಯತ್ರರ ನಡುವೆ ಮಾತುಕತೆಗಳನ್ನು ಏರ್ಪಡಿಸಿ ವ್ಯಾಜ್ಯಗಳನ್ನು ಕೊನೆಗಾಣಿಸಬಹುದು.


ಸಂಬಂಧಪಟ್ಟ ಬೇರೆ ಬೇರೆ ಗುಂಪುಗಳ ಪ್ರತಿನಿಧಿಗಳ ತಂಡವನ್ನು ರಚಿಸುವುದು ಮತ್ತು ವ್ಯಾಜ್ಯಗಳ ತೀರ್ಮಾನಕ್ಕೆ ಇದೇ ರೀತಿಯ ಬೇರೆ ಬೇರೆ ವೇದಿಕೆಗಳಲ್ಲಿ ಉಪಯೋಗಿಸುವ ಉತ್ತಮ ನಿಯಮಗಳನ್ನು ಅಳವಡಿಸಿಕೊಳ್ಳುವುದು, ವ್ಯಾಜ್ಯಗಳಿಗೆ ಸಂಬಂಧಿಸಿದಂತೆ ತುರ್ತು ಹಾಗೂ ಪರಿಣಾಮಕಾರಿ ಪರಿಹಾರವನ್ನು ಪಡೆದುಕೊಳ್ಳುವುದು, ಕಡಿಮೆ ವೆಚ್ಚದಲ್ಲಿ ವೇಗವಾಗಿ ವ್ಯಾಜ್ಯಗಳ ಪರಿಹಾರದ ಕ್ರಮವನ್ನು ಜಾರಿಗೆ ತರುವುದು, ಪರ್ಯಾಯ ವಿವಾದ ವಿಧಾನಗಳಲ್ಲಿ (ಎಡಿಆರ್) ಸಹಕರಿಸುವುದು, ಆಡಳಿತಾತ್ಮಕ ವ್ಯವಸ್ಥೆಯನ್ನು ಕೊಡುವುದರ ಜೊತೆಗೆ ಸಹಕರಿಸುವುದು ಮತ್ತು ಪರ್ಯಾಯವಾದ ವ್ಯಾಜ್ಯಗಳ ಪರಿಹಾರಕ್ಕೆ ಅತ್ಯುತ್ತಮ ಉದಾಹರಣೆ ಎನಿಸುವುದು ಕೆಸಿಡಿಆರ್‌ಸಿಯ ಮುಖ್ಯ ಉದ್ದೇಶವಾಗಿದೆ.

### ಲಿಖಿತ ವ್ಯಾಜ್ಯೆ

ಸಂಧಾನದ ಮೂಲಕ K-RERA ದ ನ್ಯಾಯಾಧೀಶರು ವಿವಾದಗಳನ್ನು ಬಗೆಹರಿಸಬಹುದು ಎಂದು ಅನಿಸಿದರೆ ವರದಿ ಸಲ್ಲಿಸಲು ಸಮಯ ನಿಗದಿಪಡಿಸುತ್ತಾರೆ. ಸಂಬಂಧಪಟ್ಟ ಕಕ್ಷಿದಾರರು ವಿಚಾರಣೆಗೆ ಹಾಜರಾಗದಿರುವುದು, ಸಂಧಾನ ವಿಫಲವಾಗುವುದು ಮತ್ತು ಸಂಧಾನ ಯಶಸ್ವಿಯಾಗುವುದನ್ನು ಸಹ ಇದು ಒಳಗೊಂಡಿರುತ್ತದೆ.

### ನಕ್ಷೆ ಮಾರ್ಪಡಿಸಲು ಅವಕಾಶ

ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (RERA) ಕಾಯ್ದೆಯ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ರೇರಾ ಇತ್ತೀಚೆಗೆ ಅಂದರೆ 2020 ರ ಜುಲೈಯಲ್ಲಿ K-RERA ಅಗತ್ಯ ಮಾರ್ಗಸೂಚಿಗಳನ್ನು ಹೊರಡಿಸಿತು.







Downloaded From: www.kpscvaani.com



**ಮನೆ ಖರೀದಿಸುವ ಸಂದರ್ಭದಲ್ಲಿ, ಯಾವುದೇ ಸಮಸ್ಯೆಗಳು ಉಲ್ಬಣವಾದಲ್ಲಿ ಉದಾಹರಣೆಗೆ ನಿಗಧಿತ ಅವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ಅಭಿವೃದ್ಧಿದಾರರು ಖರೀದಿದಾರರ ಸ್ವಾಧೀನಕ್ಕೆ ಮನೆ ನೀಡದೇ ಇದ್ದಾಗ/ ಯೋಜನೆಯ ನಕ್ಷೆ ಬದಲಾಯಿಸಿ ಕೊಂಡಲ್ಲಿ / ಮೂಲ ಸೌಕರ್ಯಗಳನ್ನು ಒದಗಿಸದೇ ಇದ್ದ ಸಂದರ್ಭದಲ್ಲಿ/ ಅಭಿವೃದ್ಧಿದಾರರು ಮನೆ ಮಾರಾಟ ಮಾಡುವ ಸಂದರ್ಭದಲ್ಲಿ ನೀಡಲಾಗಿದ್ದ ಜಾಹಿರಾತಿನ ಭರವಸೆಗಳಂತೆ, – ಸದರಿ ಭರವಸೆಗಳನ್ನು ಪೂರ್ಣಗೊಳಿಸದೇ ಇದ್ದ ಸಂದರ್ಭದಲ್ಲಿ – ರೇರಾ ಪ್ರಾಧಿಕಾರವು ನೆರವಿಗೆ ಬರುತ್ತದೆ**

K-RERA ಕಾಯ್ದೆಯಡಿ ಸೆಕ್ಷನ್ (14)2(11) ಪ್ರಕಾರ, ಮಂಜೂರು ಆಗಿರುವ ಯೋಜನೆಗೆ ಯಾವುದೇ ಪರಿಷ್ಕರಣೆ ಮಾಡಬೇಕೆಂದರೆ ಲೇಔಟ್ ಪ್ಲಾನ್, ಕಟ್ಟಡದ ನಿಖರತೆ, ಯೋಜನೆಯ ಒಳಗೆ ಸಾಮಾನ್ಯ ಪ್ರದೇಶಕ್ಕೆ ನಿರ್ಮಿಸಬೇಕಾದರೆ ಹಂಚಿಕೆಯಾದವರ ಪೈಕಿ ಮೂರನೆ ಎರಡು ಭಾಗದಷ್ಟು ಹಂಚಿಕೆದಾರರಿಂದ ಮೊದಲೇ ಲಿಖಿತ ವ್ಯಾಖ್ಯೆ ಪಡೆದುಕೊಳ್ಳಬೇಕು.

ಮಾರ್ಗಸೂಚಿಯಲ್ಲಿ ಪ್ರವರ್ತಕರು K-RERA ಗೆ ಉದ್ದೇಶಿತ ಬದಲಾವಣೆಯೊಂದಿಗೆ ಅರ್ಜಿ ಹಾಕಬೇಕೆಂದು, ರಚನಾತ್ಮಕ ಸ್ಥಿರತೆ ಪ್ರಮಾಣಪತ್ರದೊಂದಿಗೆ ಯಾವುದಾದರೂ ಬದಲಾವಣೆ ಮಾಡುವುದಿದ್ದರೆ ಯೋಜನೆಯ ಮುಕ್ತಾಯದ ದಿನಾಂಕದಲ್ಲಿ ಬದಲಾವಣೆಯಾಗುತ್ತದೆಯೋ ಎಂದು ನಮೂದಿಸಬೇಕೆಂದು ಸೂಚಿಸಲಾಗಿದೆ.

ಬಿಲ್ಡರ್‌ಗಳು ತಮ್ಮ ಮನಸೋ ಇಚ್ಛೆ ಪ್ರಾಜೆಕ್ಟ್‌ಗಳಲ್ಲಿ ಬದಲಾವಣೆ ಮಾಡುವುದರಿಂದ ಮೂಲಭೂತ ಸೌಕರ್ಯದಲ್ಲಿ ಮುಂದೆ ಆಗಬಹುದಾದ ಕುಂದುಕೊರತೆ, ನಂತರ ನಿವೇಶನ, ಅಪಾರ್ಟ್‌ಮೆಂಟ್ ಖರೀದಿಸಿದವರಿಗೆ ಒಸಿಗಳನ್ನು ನೀಡದಿರುವುದು, ಇವೇ ಮುಂತಾದ ವ್ಯಾಜ್ಯಗಳು ಎದುರಾಗದಂತೆ ನೋಡಿಕೊಳ್ಳಲು ಈ ರೇರಾ ಕಾಯ್ದೆ ಸಹಾಯವಾಗಲಿದೆ.

**ಮಾರಾಟ ಕರಾರು ಒಪ್ಪಂದ**

ರೇರಾ ಕಾಯ್ದೆಯು ಬಿಲ್ಡರ್‌ಗಳು, ಭೂಮಾಲೀಕರು ಮತ್ತು ಹಂಚಿಕೆದಾರರ ಮಧ್ಯೆ ಸಂಬಂಧಕ್ಕೆ ಹೊಸ ಆಯಾಮ ನೀಡಲಿದೆ. ಮನೆ ಕೊಳ್ಳುವವರಿಗೆ ಸಹ ಇದು ದೊಡ್ಡ ಮಟ್ಟದಲ್ಲಿ ಸಹಾಯಕವಾಗಲಿದ್ದು, ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಕಾಯ್ದೆಯ ಸಾಧ್ಯತೆಗಳ ಪ್ರಕಾರ ಮಾದರಿ ಮಾರಾಟ ಒಪ್ಪಂದವನ್ನು ಹೊಂದಿರುತ್ತದೆ.

ಆಸ್ತಿಗಳ ಮಾರಾಟಕ್ಕೆ ಸಂಬಂಧಪಟ್ಟಂತೆ ಎಲ್ಲಾ ಆಯಾಮಗಳಲ್ಲಿ ಬಿಲ್ಡರ್‌ಗಳು ಮತ್ತು ಕೊಳ್ಳುವವರಿಗೆ ದಾಖಲೆಯಾಗಿ ಉಳಿಯುತ್ತದೆ. ಪ್ರಾಜೆಕ್ಟ್‌ಗಳ ಪೂರ್ಣತೆ, ಮಾರಾಟದ ಸ್ಥಿತಿಗತಿ, ಪಾವತಿ ಮತ್ತು ಇತರ ಪ್ರೋತ್ಸಾಹಕಗಳನ್ನು ಒಳಗೊಂಡಿರುತ್ತದೆ. ಈ ಒಪ್ಪಂದ ಎಲ್ಲಾ ಬಿಲ್ಡರ್‌ಗಳು ಮತ್ತು ಪ್ರವರ್ತಕರಿಗೆ ಸಮನಾದ ವಿಧಾನವನ್ನು ಒದಗಿಸಲಿದ್ದು, ಡೌನ್ ಪೇಮೆಂಟ್ ಆಗಿ ಒಟ್ಟು ಆಸ್ತಿ ಮೌಲ್ಯದ ಶೇಕಡಾ 10ಕ್ಕಿಂತ ಹೆಚ್ಚು ಪಡೆಯಲು ಇಚ್ಛಿಸಿದರೆ ಪ್ರವರ್ತಕರು ಮಾರಾಟದ ದಾಖಲೆಗಳ ಒಪ್ಪಂದವನ್ನು ದಾಖಲಾತಿ ಮಾಡಿಕೊಳ್ಳಬೇಕು. ಈ ಹಿಂದೆ ಗ್ರಾಹಕರು ನೀಡುವ ಹಣಕ್ಕೆ ಯಾವುದೇ ಖಾತ್ರಿ ಇರಲಿಲ್ಲ. ಇದೀಗ ಈ ದಾಖಲೆಗಳು ಗ್ರಾಹಕರನ್ನು ಸಶಕ್ತಗೊಳಿಸುತ್ತದೆ. ಮಾಡಿಕೊಳ್ಳುವ ಒಪ್ಪಂದದ ಷರತ್ತುಗಳನ್ನು ಸಹ ಅರ್ಥ ಮಾಡಿಕೊಳ್ಳಲು ಸಹಾಯವಾಗುತ್ತದೆ.

**ಮನೆ ಖರೀದಿದಾರರಿಗೆ ಸೌಲಭ್ಯಗಳು**

ರೇರಾ ಕಾಯ್ದೆ ರಾಜ್ಯದಲ್ಲಿ ಅನುಷ್ಠಾನಗೊಂಡಂದಿನಿಂದಲೂ ಸ್ವಂತ ಮನೆ ಹೊಂದ ಬಯಸುವ ಆಕಾಂಕ್ಷಿಗಳು ರೇರಾದಲ್ಲಿ ನೋಂದಣಿಯಾಗಿರುವ ಅಭಿವೃದ್ಧಿದಾರರಿಂದಲೇ ಮನೆ ಖರೀದಿಸಬೇಕೆಂಬ ಮನೋ ಭಾವನೆ ಮೂಡಿರುತ್ತದೆ.

ಮನೆ ಖರೀದಿಸುವ ಸಂದರ್ಭದಲ್ಲಿ, ಯಾವುದೇ ಸಮಸ್ಯೆಗಳು ಉಲ್ಬಣವಾದಲ್ಲಿ ಉದಾಹರಣೆಗೆ ನಿಗಧಿತ ಅವಧಿಯಲ್ಲಿ ಯೋಜನೆಯನ್ನು ಪೂರ್ಣಗೊಳಿಸಿ, ಅಭಿವೃದ್ಧಿದಾರರು ಖರೀದಿದಾರರ ಸ್ವಾಧೀನಕ್ಕೆ ಮನೆ ನೀಡದೇ ಇದ್ದಾಗ/ ಯೋಜನೆಯ ನಕ್ಷೆ ಬದಲಾಯಿಸಿ ಕೊಂಡಲ್ಲಿ / ಮೂಲ ಸೌಕರ್ಯಗಳನ್ನು ಒದಗಿಸದೇ ಇದ್ದ ಸಂದರ್ಭದಲ್ಲಿ/ ಅಭಿವೃದ್ಧಿದಾರರು ಮನೆ ಮಾರಾಟ ಮಾಡುವ ಸಂದರ್ಭದಲ್ಲಿ ನೀಡಲಾಗಿದ್ದ ಜಾಹಿರಾತಿನ ಭರವಸೆಗಳಂತೆ, – ಸದರಿ ಭರವಸೆಗಳನ್ನು ಪೂರ್ಣಗೊಳಿಸದೇ ಇದ್ದ ಸಂದರ್ಭದಲ್ಲಿ ರೇರಾ ಪ್ರಾಧಿಕಾರವು ನೆರವಿಗೆ ಬರುತ್ತದೆ ಎಂಬ ಭಾವನೆ ಖರೀದಿದಾರರಲ್ಲಿ ಮೂಡಿದಂತ್ತಾಗಿದೆ.

ಖರೀದಿದಾರರು ಸ್ವಂತ ಮನೆ ಹೊಂದುವ ಸಂದರ್ಭದಲ್ಲಿ, ಅಭಿವೃದ್ಧಿದಾರರಿಗೆ ಮುಂಗಡವಾಗಿ ಪಾವತಿಸುವ ಹಣವನ್ನು ಅಭಿವೃದ್ಧಿದಾರರು ಪ್ರತ್ಯೇಕವಾಗಿ ಬ್ಯಾಂಕ್ ಖಾತೆಯಲ್ಲಿಟ್ಟು, ನಿರ್ಮಾಣ ಚಟುವಟಿಕೆಗಳಿಗಾಗಿ ಹಣವನ್ನು ಖರ್ಚು ಮಾಡುವುದರಿಂದ ಖರೀದಿದಾರರಿಗೆ ಪ್ರಯೋಜನ ಕಾರಿಯಾಗುತ್ತದೆ ಹಾಗೂ ಅವರ ಹಣ ದುರುಪಯೋಗವಾಗುವುದಿಲ್ಲವೆಂದು ಖಾತರಿಯಾಗುತ್ತದೆ.

ರೇರಾ ಕಾಯ್ದೆ ಜಾರಿಗೆ ಬಂದ ನಂತರ ಮನೆ/ನಿವೇಶನ ಖರೀದಿದಾರರಿಗೆ ತಾವು ಖರೀದಿ ಮಾಡಲು ಇಚ್ಚಿಸುವ ಮನೆ/ನಿವೇಶನಗಳ ದಾಖಲಾತಿಗಳು ಸಮರ್ಪಕವಾಗಿರುತ್ತವೆಂಬುದನ್ನು ಮನಗಂಡು ಹಾಗೂ ಮನೆ ಖರೀದಿಗೆ ಹೆಚ್ಚಾಗಿ ಮುಂದೆ ಬರುತ್ತಿದ್ದಾರೆ.

ರೇರಾದಲ್ಲಿ, ಏಜೆಂಟರುಗಳಿಗೆ ರಿಯಲ್ ಎಸ್ಟೇಟ್ ನೋಂದಣಿ ಪತ್ರ ನೀಡುವುದರಿಂದ, ಯಾವುದೇ ಉದ್ದೇಶಿತ ಯೋಜನೆಗಳಲ್ಲಿ ನಿವೇಶನ/ಮನೆಗಳನ್ನು ಖರೀದಿದಾರರು ಖರೀದಿ ಮಾಡಿದಲ್ಲಿ ಗ್ರಾಹಕರ ಹಿತವನ್ನು ಕಾಯ್ದುಕೊಳ್ಳಬಹುದಾಗಿದೆ.

**ವಿಡಿಯೋ ಕಾನ್ಫರೆನ್ಸ್ ಮೂಲಕ ಆನ್‌ಲೈನ್ ವಿಚಾರಣೆಗೆ ಗುಣಮಟ್ಟದ ಕಾರ್ಯವಿಧಾನ ಅಥವಾ ಶಿಷ್ಟಾಚಾರ (ಎಸ್‌ಒಪಿ)**

ಕೋವಿಡ್–19 ಸಾಂಕ್ರಾಮಿಕ ರೋಗ ಸದ್ಯಕ್ಕೆ ದೂರವಾಗುವ ಲಕ್ಷಣ ಕಾಣುತ್ತಿಲ್ಲ, ಈಗಿನ ಪರಿಸ್ಥಿತಿಯಲ್ಲಿ ಇದು ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿರುವಾಗ ಅದನ್ನು ತಡೆಗಟ್ಟಲು ವೈಯಕ್ತಿಕ ಕಾಳಜಿ ಅತೀ ಅಗತ್ಯವಿರುತ್ತದೆ. ಸಾರ್ವಜನಿಕ ಸಭೆ, ಸಮಾರಂಭಗಳಲ್ಲಿ, ಜನದಟ್ಟಣೆ ಇರುವ ಕಡೆಗಳಲ್ಲಿ ಸೇರದಿರುವುದು, ಶುಚಿತ್ವ ಕಾಪಾಡುವುದು, ಸಾಮಾಜಿಕ ಅಂತರ ಕಾಯ್ದುಕೊಳ್ಳುವ ನಿಟ್ಟಿನಲ್ಲಿ K-RERA ಆಧುನಿಕ ಮಾಹಿತಿ ತಂತ್ರಜ್ಞಾನದ ಅನುಕೂಲವನ್ನು ಪಡೆದುಕೊಂಡು ಜನರು ತಮ್ಮ ಕೆಲಸಗಳಿಗೆ ಕಚೇರಿಗೆ ಬಂದು ಹೋಗುವುದನ್ನು ಕಡಿಮೆ ಮಾಡಿ ಅವರ ಸುರಕ್ಷತೆಗೆ ಆದ್ಯತೆ ನೀಡುತ್ತದೆ.

ಈ ನಿಟ್ಟಿನಲ್ಲಿ ಕರ್ನಾಟಕ ರೇರಾ, ಡಿಜಿಟಲ್ ವೇದಿಕೆ ಮೂಲಕ ಅನಿಯಮಿತ ಆನ್‌ಲೈನ್ ಸೇವೆಗಳನ್ನು ಪರಿಣಾಮಕಾರಿಯಾಗಿ ನೀಡಲು ಮುಂದಾಗಿದೆ. ಪ್ರಾಧಿಕಾರ, ಗುಣಮಟ್ಟ ಕಾರ್ಯವಿಧಾನ (ಎಸ್‌ಒಪಿ)ಗಳು, ಶಿಷ್ಟಾಚಾರಗಳನ್ನು ವ್ಯಾಜ್ಯಗಳ ಆನ್‌ಲೈನ್ ವಿಚಾರಣೆಗೆ ಬಳಸಿಕೊಂಡು ವಿಡಿಯೋ ಕಾನ್ಫರೆನ್ಸ್ ಮೂಲಕ ತುರ್ತು ವಿಚಾರಣೆಗಳನ್ನು ಆದ್ಯತೆ ಮೂಲಕ ನಡೆಸುತ್ತದೆ.

ಅಲ್ಲದೇ, ಪ್ರಾಧಿಕಾರ ತನ್ನ ದೂರು ನಿರ್ವಹಣಾ ಐಟಿ ಅರ್ಜಿ ಕಾರ್ಯತಂತ್ರವನ್ನು ಉನ್ನತಮಟ್ಟಕ್ಕೇರಿಸಿದೆ. ದೂರು ಸಲ್ಲಿಕೆ, ಅದಕ್ಕೆ ಪ್ರತ್ಯುತ್ತರ, ದೂರು ನೀಡುವವರು ಮತ್ತು ಪ್ರತಿಕ್ರಿಯಿಸುವವರಿಂದ ಪ್ರತ್ಯುತ್ತರ, ವಿಚಾರಣೆ, ತೀರ್ಪು ಇತ್ಯಾದಿಗಳನ್ನು ಆನ್‌ಲೈನ್‌ನಲ್ಲಿಯೇ ನಡೆಸಲಾಗುತ್ತದೆ. ಜನರು ಪ್ರಾಧಿಕಾರದ ಕಚೇರಿಗೆ ಖುದ್ದಾಗಿ ಹೋಗುವುದು ತಪ್ಪುತ್ತದೆ. ಕೋವಿಡ್–19ರ ಸಮಯದಲ್ಲಿ ಇದು ಪ್ರಮುಖ ಸೇವೆಯಾಗಿದೆ.

ಎಸ್‌ಒಪಿ ಪ್ರಕಾರ, ದೂರು ನೀಡಿದವರು ಪ್ರಾಧಿಕಾರದ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಕೂಡ ದೂರು ನೀಡಬಹುದು. ಅದಕ್ಕೆ ಪ್ರತ್ಯುತ್ತರ ನೀಡಬೇಕಾದವರು ಪ್ರಕ್ರಿಯೆಯನ್ನು 15 ದಿನಗಳೊಳಗೆ ಅಗತ್ಯ ದಾಖಲೆಗಳೊಂದಿಗೆ ಆನ್‌ಲೈನ್‌ನಲ್ಲಿಯೇ ನೀಡಬಹುದು. ವಿಚಾರಣೆ ಕೈಗೆತ್ತಿಕೊಳ್ಳುವ ಮುನ್ನ ದೂರು ನೀಡಿದವರು ಮತ್ತು ಪ್ರತ್ಯುತ್ತರ ನೀಡುವವರಿಗೆ ಸರಿಯಾದ ಪ್ರಶ್ನೋತ್ತರಗಳನ್ನು ಕಳುಹಿಸಲಾಗುತ್ತದೆ, ಅವರು ಲಿಖಿತವಾಗಿ ಅದನ್ನು ಸಲ್ಲಿಸಬೇಕು.

ವಿಡಿಯೋ ಕಾನ್ಫರೆನ್ಸ್ ಮೂಲಕ ಪ್ರಕರಣದ ವಿಚಾರಣೆ ನಡೆಯುತ್ತದೆ. ಸಂಕ್ಷಿಪ್ತ ನೋಟೀಸ್ ಮೂಲಕ ಪ್ರಕರಣದ ವಿವರಗಳನ್ನು ಕಳುಹಿಸಲಾಗುತ್ತದೆ. ಅದರಲ್ಲಿ ನಿಖರವಾದ ಮಾಹಿತಿ ನೀಡುವುದಿಲ್ಲ. ಬದಲಿಗೆ, ಪ್ರಾಧಿಕಾರದ ಸದಸ್ಯರು ದಾಖಲೆಗಳನ್ನು ನೋಡಿ, ಕೇಸುಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು, ಕೋವಿಡ್–19 ಸಮಯದಲ್ಲಿ ಜನರ ಸುರಕ್ಷತೆಯನ್ನು ನೋಡಿಕೊಂಡು ಲಿಖಿತ ಸಲ್ಲಿಕೆ ಮತ್ತು ಅಗತ್ಯ ದಾಖಲೆಗಳನ್ನು ಕೇಳುತ್ತಾರೆ.

ವಿಚಾರಣೆಯ ನಿಗದಿತ ದಿನಾಂಕದಂದು ಉಭಯತ್ರರು ತಮ್ಮ ಲಿಖಿತವಾದ ಹೇಳಿಕೆಗಳನ್ನು ಏಳು ದಿನಗಳೊಳಗೆ ಸಲ್ಲಿಸಬೇಕು. ಸ್ಥಳಾವಕಾಶದ ಕೊರತೆಯಿಂದ ಮನವಿ ಮತ್ತು ಸಾರಾಂಶವನ್ನು ಮೂರು ಪುಟಗಳಿಗಿಂತ ಕಡಿಮೆಗೆ ಸೀಮಿತಗೊಳಿಸಲಾಗುತ್ತದೆ. ಉಳಿದ ದೂರುಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ಕ್ರಮವನ್ನು ಅನುಸರಿಸಲಾಗುತ್ತದೆ. ಇಂತಹ ವಿಷಯಗಳ ಜೊತೆ ವ್ಯವಹರಿಸಲು ಒಂದು ವಾರದೊಳಗೆ ಕಾನೂನಿನ ನೆರವು ನೀಡಲಾಗುತ್ತದೆ.

**ವಿಲೇ ವಿಧಾನ**

ಬಾಕಿ ಉಳಿಕೆ ದೂರುಗಳಲ್ಲಿ ದೂರು ನೀಡುವವರು ಇತರ ದಾಖಲೆಗಳನ್ನು ಆನ್‌ಲೈನ್‌ನಲ್ಲಿ ಆಪ್‌ಲೋಡ್ ಮಾಡಲು ವಾದದ ಲಿಖಿತ ದೂರುಗಳನ್ನು ಮೂರು ಪುಟಗಳಿಗೆ ಮೀರದಂತೆ ಸಲ್ಲಿಸಲು ಅವಕಾಶವಿದೆ. ತನ್ನ ಲಾಗಿನ್‌ಗೆ ದಾಖಲೆಗಳು ಜೋಡಣೆಯಾಗಿದೆಯೇ ಎಂದು ಪ್ರತಿಕ್ರಿಯೆ ನೀಡುವವರು ನೋಡಿಕೊಂಡು ಮುಂದಿನ 15 ದಿನಗಳಲ್ಲಿ ಸಂಕ್ಷಿಪ್ತ ರೂಪದಲ್ಲಿ ಪ್ರತಿಕ್ರಿಯೆಯನ್ನು ಅಪ್‌ಲೋಡ್ ಮಾಡಬೇಕು.

ಇಡೀ ವಿಚಾರಣೆ ಪ್ರಕ್ರಿಯೆ ಹಂತದಲ್ಲಿ ಎರಡೂ ಕಡೆಯವರ ಮನವಿ ಮತ್ತು ದಾಖಲೆಗಳನ್ನು ಗಮನಿಸಿ, ಅವರು ಆಶಯ ವ್ಯಕ್ತಪಡಿಸಿದರೆ ಬೇರೆ ದಾಖಲೆಗಳನ್ನು ಅಪ್‌ಲೋಡ್ ಮಾಡಬಹುದು. ಒಂದು ಬಾರಿ ದೂರನ್ನು ಅಂತಿಮ ಆದೇಶಕ್ಕೆ ಮುಚ್ಚಿದರೆ ಬೇರೆ ದಾಖಲೆಗಳನ್ನು ಅಪ್‌ಲೋಡ್ ಮಾಡಲು ವಾದಿ–ಪ್ರತಿವಾದಿ ಎರಡೂ ಕಡೆಯವರಿಗೆ ಸಾಧ್ಯವಾಗುವುದಿಲ್ಲ.

ನೀಡಿರುವ ಮಾಹಿತಿಯಲ್ಲಿ ವಾದ ಮಾಡುವ ವ್ಯಕ್ತಿ ಅಥವಾ ಅಡ್ವೊಕೇಟ್‌ನ ವಿವರಗಳು, ಅವರ ಹೆಸರು, ಹುದ್ದೆ, ಇಮೇಲ್ ವಿಳಾಸ ಮತ್ತು ಮೊಬೈಲ್ ಸಂಖ್ಯೆಯಿರುತ್ತದೆ.

K-RERA ದ ಕಾನೂನು ವಿಭಾಗ, ಐಟಿ ವಿಭಾಗ ವಿಚಾರಣೆಯ ದಿನಾಂಕವನ್ನು ನಿಗದಿಪಡಿಸಿ ವಿಡಿಯೋ ಕಾನ್ಫರೆನ್ಸ್‌ನ ಸಂಪರ್ಕ ಕೊಂಡಿಯನ್ನು ಸಂಬಂಧಪಟ್ಟ ವ್ಯಕ್ತಿಗಳಿಗೆ ತಿಳಿಸಲಾಗುತ್ತದೆ.

ಪ್ರತಿ ಸಭೆಯ ಸಂಖ್ಯೆ ಮತ್ತು ಪಾಸ್‌ವರ್ಡ್‌ಗಳನ್ನು ಸೃಷ್ಟಿಮಾಡಿ ಅದನ್ನು ಸಂಬಂಧಪಟ್ಟ ವಾದಿ ಪ್ರತಿವಾದಿಗಳಿಗೆ ಮೊದಲೇ ತಿಳಿಸಲಾಗುತ್ತದೆ. ಈ ಸಂಖ್ಯೆ ಮತ್ತು ಪಾಸ್‌ವರ್ಡ್ ಅನ್ನು ಬೇರೆಯವರೊಂದಿಗೆ ಹಂಚಿಕೊಳ್ಳುವಂತಿಲ್ಲ. ಸರಿಯಾದ ಸಮಯಕ್ಕೆ ಸಭೆಗೆ ಹಾಜರಾಗಬೇಕು, ಹಂಚಿಕೆಯಾಗಿರುವ ಸಮಯದೊಳಗೆ ವಾದ–ವಿವಾದಕ್ಕೆ ಪ್ರಾಧಿಕಾರಕ್ಕೆ ಸಹಕಾರ ನೀಡಬೇಕು.

ಸಮಯ ಮುಗಿಯುವುದರೊಳಗೆ ವಿಚಾರಣೆಯನ್ನು ಮುಗಿಸುವ ಹಕ್ಕು ಪ್ರಾಧಿಕಾರಕ್ಕೆ ಇರುತ್ತದೆ. ಅತ್ಯಪರೂಪ ಕೇಸು ವಿಚಾರಣೆಯಲ್ಲಿ ಮುಂದೂಡುವ ಅಧಿಕಾರ ಕೂಡ ಪ್ರಾಧಿಕಾರಕ್ಕೆ ಇರುತ್ತದೆ. ಮೌಖಿಕವಾಗಿ ವಿಚಾರಣೆ ಮಾಡುವಾಗ ನಿಗದಿತ ಸಮಯದೊಳಗೆ ವಿಚಾರಣೆ ಮುಗಿಸಲು ವಿಸ್ತಾರವಾದ ಮತ್ತು ವಿಸ್ತೃತವಾದ ಅಂಶಗಳು ಬೇಕಾಗುತ್ತದೆ.

ಕಕ್ಷಿದಾರರು ವಿಚಾರಣೆಗೆ ನಿಗದಿತ ಸಮಯಕ್ಕೆ ಹಾಜರಾಗಲು ವಿಫಲರಾದಾಗ ಕಾನೂನು ಪ್ರಕಾರ ಆದೇಶ ಹೊರಡಿಸಿ ಕುಂದುಕೊರತೆಗಳನ್ನು ಪೂರ್ವಭಾವಿಯಾಗಿ ತಡೆಯಬಹುದು. ■



Downloaded From: www.kpscvaani.com



# ಎಚ್‌ಐವಿ–ಏಡ್ಸ್

## ಭಯ ಬೇಡ, ಎಚ್ಚರಿಕೆ ಇರಲಿ

**ಎಚ್‌ಐವಿ ಏಡ್ಸ್ ಮಾರಕ ಕಾಯಿಲೆಯ ಬಗ್ಗೆ ಜಾಗೃತಿ ಮೂಡಿಸಲು ಪ್ರತಿ ವರ್ಷ ಡಿಸೆಂಬರ್ 1 ರಂದು ವಿಶ್ವದಾದ್ಯಂತ "ವಿಶ್ವ ಏಡ್ಸ್ ದಿನಾಚರಣೆ"ಯನ್ನು ಆಚರಿಸಲಾಗುತ್ತದೆ.**

ಡಾ॥ ಎಸ್.ಎಂ.ತಿಮ್ಮಾಪೂರ

**ಈ** ರೋಗದಿಂದ ಬಳಲುತ್ತಿರುವ ಸಂತ್ರಸ್ತರನ್ನು ಬೆಂಬಲಿಸುವುದು, ಅನೇಕ ಜಾಗೃತಿ ಮತ್ತು ಆರೋಗ್ಯ ಶಿಕ್ಷಣ ಕಾರ್ಯಕ್ರಮಗಳನ್ನು ಏರ್ಪಡಿಸುವುದು ಮತ್ತು ಎಚ್‌ಐವಿ–ಏಡ್ಸ್ ವಿರುದ್ಧ ಯುದ್ಧವನ್ನು ನಡೆಸುತ್ತಿರುವವರಿಗೆ ಬೆಂಬಲಿಸುವುದು ಹಾಗೂ ಈ ರೋಗವನ್ನು ಎದುರಿಸಲು ರೋಗಿಗಳಿಗೆ ಸಹಾಯ ಮಾಡುವುದು ಈ ದಿನಾಚರಣೆಯ ಉದ್ದೇಶವಾಗಿದೆ.

ಎಚ್‌ಐವಿ–ಏಡ್ಸ್‌ನಂತಹ ಸ್ಥಿತಿಯೊಂದಿಗೆ ಜೀವನವನ್ನು ನಡೆಸುವುದು ಸುಲಭವಲ್ಲ. ಇದು ರೋಗಿಯ ವ್ಯಕ್ತಿತ್ವಕ್ಕೆ ಧಕ್ಕೆ ಉಂಟು ಮಾಡುತ್ತದೆ, ಮತ್ತು ರೋಗಿಯನ್ನು ದೈಹಿಕವಾಗಿ, ಮಾನಸಿಕವಾಗಿ ಬಳಲುವಂತೆ ಮಾಡುತ್ತದೆ.
ಸಾಮಾಜಿಕವಾಗಿಯೂ ಕೂಡ ವ್ಯಕ್ತಿಯು ಪ್ರತ್ಯೇಕವಾಗಿರುವಂತೆ ಮಾಡುತ್ತದೆ. 1987 ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯ ಜಾಗತಿಕ ಮಾಹಿತಿ ಪ್ರಸಾರ ವಿಭಾಗದ ಉಸ್ತುವಾರಿ ವಹಿಸಿದ್ದ ಜೇಮ್ಸ್ ಡಬ್ಲ್ಯೂ ಬನ್ ಮತ್ತು ಥಾಮಸ್ ನೆಟ್ಟರ್‌ಏಡ್ಸ್ ಬಗ್ಗೆ ಜಾಗೃತಿ ಮೂಡಿಸಲು ವಿಶ್ವ ಏಡ್ಸ್ ದಿನವನ್ನು ಪ್ರಾರಂಭಿಸುವ ಪ್ರಸ್ತಾಪವನ್ನು ಔಪಚಾರಿಕವಾಗಿ ಮಂಡಿಸಲಾಯಿತು. ಅದರಂತೆ ಈ ರೋಗದ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಲು 1988ರಲ್ಲಿ ಮೊದಲ ಬಾರಿಗೆ ವಿಶ್ವ ಏಡ್ಸ್ ದಿನಾಚರಣೆಯನ್ನು ಆಚರಿಸಲಾಯಿತು. ಪ್ರತಿ ವರ್ಷದಂತೆ ಈ ವರ್ಷವೂ ಡಿಸೆಂಬರ್ 1, ಮಂಗಳವಾರದಂದು ವಿಶ್ವ ಏಡ್ಸ್ ದಿನಾಚರಣೆಯನ್ನು ಆಚರಿಸಲಾಗುತ್ತಿದ್ದು, ತನ್ನಿಮಿತ್ತ ಈ ಲೇಖನವನ್ನು ಪ್ರಸ್ತುತ ಪಡಿಸಲಾಗಿದೆ.

**"ಅಸಮಾನತೆಯನ್ನು ಕಡಿಮೆ ಮಾಡುವುದು, ಮಾನವ ಹಕ್ಕಗಳು, ಲಿಂಗ ಸಮಾನತೆ, ಸಾಮಾಜಿಕ ರಕ್ಷಣೆ ಮತ್ತು ಆರ್ಥಿಕ ಬೆಳವಣಿಗೆಯಂತಹ ನಿರ್ಣಾಯಕ ವಿಷಯಗಳೊಂದಿಗೆ ಆರೋಗ್ಯವು ಹೇಗೆ ಪರಸ್ಪರ ಸಂಬಂಧ ಹೊಂದಿದೆ ಎಂಬುದನ್ನು ಕೋವಿಡ್–19 ಮತ್ತೊಮ್ಮೆ ತೋರಿಸಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಈ ವರ್ಷ ವಿಶ್ವ ಏಡ್ಸ್ ದಿನದ ವಿಷಯವನ್ನು "ಜಾಗತಿಕ ಒಗ್ಗಟ್ಟು, ಜವಾಬ್ದಾರಿಗಳ ಹಂಚಿಕೆ" ಎಂದು ಘೋಷಿಸಲಾಗಿದೆ."**



ವಿಶ್ವ ಏಡ್ಸ್ ದಿನವು ಎಚ್‌ಐವಿ–ಏಡ್ಸ್‌ನಿಂದ ಬಳಲುತ್ತಿರುವ ರೋಗಿಗಳಿಗೆ ಒಗ್ಗಟ್ಟು, ಶಕ್ತಿ ಮತ್ತು ಬೆಂಬಲವನ್ನು ಪ್ರದರ್ಶಿಸುವುದರ ಜೊತೆಗೆ ರೋಗದಿಂದ ಪ್ರಾಣ ಕಳೆದುಕೊಂಡವರನ್ನು ನೆನಪಿಟ್ಟುಕೊಳ್ಳುವ ಒಂದು ವಿಶೇಷ ದಿನವಾಗಿದೆ. ಆರೋಗ್ಯ ವ್ಯವಸ್ಥೆಯನ್ನು ಬಲಪಡಿಸಲು ಪ್ರಾಥಮಿಕ ಆರೋಗ್ಯವನ್ನು ಬೇರುಗಳಿಂದ ಬಲಪಡಿಸುವ ಅಗತ್ಯವಿದೆ. ಆರೋಗ್ಯ ರಕ್ಷಣೆಯ ಮೂಲಭೂತ ಅಗತ್ಯಗಳನ್ನು ಪರಿಗಣಿಸದಿದ್ದರೆ ಎಚ್‌ಐವಿ–ಏಡ್ಸ್‌ನಂತಹ ಸಾಂಕ್ರಾಮಿಕ ರೋಗವನ್ನು ನಿಭಾಯಿಸುವುದು ಸಂಕೀರ್ಣವಾಗುತ್ತದೆ.

ವಿಶ್ವಏಡ್ಸ್ ದಿನಾಚರಣೆ 2020 ರ ಆಚರಣೆಯ ವಿಷಯ **"ಜಾಗತಿಕ ಒಗ್ಗಟ್ಟು, ಜವಾಬ್ದಾರಿಗಳ ಹಂಚಿಕೆ"** (Global solidarity, Shared responsibility)

ಎಚ್.ಐ.ವಿ ಪೀಡಿತ ಮತ್ತು ಎಚ್.ಐ.ವಿಯೊಂದಿಗೆ ಬದುಕುತ್ತಿರುವ ಜನರಿಗೆ ಬೆಂಬಲವನ್ನು ಸೂಚಿಸಲು ಮತ್ತು ಏಡ್ಸ್‌ನಿಂದ ಪ್ರಾಣ ಕಳೆದುಕೊಂಡವರನ್ನು ನೆನಪಿಟ್ಟುಕೊಳ್ಳಲು ವಿಶ್ವದಾದ್ಯಂತದ ಜನರು ಒಗ್ಗಟ್ಟಾಗುವುದರ ಮೂಲಕ ಜವಾಬ್ದಾರಿಗಳನ್ನೂ ಕೂಡ ಹಂಚಿಕೊಳ್ಳುವುದು ಅನಿವಾರ್ಯವಾಗಿದೆ.

### ಜಾಗತಿಕ ಒಗ್ಗಟ್ಟು, ಜವಾಬ್ದಾರಿಗಳ ಹಂಚಿಕೆ

2020ರಲ್ಲಿ ಕೋವಿಡ್–19 ಇಡೀ ವಿಶ್ವದ ಗಮನವನ್ನು ತನ್ನತ್ತ ಸೆಳೆದುದಲ್ಲದೇ, ಇಂತಹ ಸಾಂಕ್ರಾಮಿಕ ರೋಗಗಳು ಜನಜೀವನವನ್ನು ಹೇಗೆ ಅಸ್ತವ್ಯಸ್ತಗೊಳಿಸುತ್ತವೆ ಎಂಬುದನ್ನು ಸಾಬೀತು ಪಡಿಸಿದೆ. ಅಸಮಾನತೆಯನ್ನು ಕಡಿಮೆ ಮಾಡುವುದು, ಮಾನವ ಹಕ್ಕಗಳು, ಲಿಂಗ ಸಮಾನತೆ, ಸಾಮಾಜಿಕ ರಕ್ಷಣೆ ಮತ್ತು ಆರ್ಥಿಕ ಬೆಳವಣಿಗೆಯಂತಹ ನಿರ್ಣಾಯಕ ವಿಷಯಗಳೊಂದಿಗೆ ಆರೋಗ್ಯವು ಹೇಗೆ ಪರಸ್ಪರ ಸಂಬಂಧ ಹೊಂದಿದೆ ಎಂಬುದನ್ನು ಕೋವಿಡ್–19 ಮತ್ತೊಮ್ಮೆ ತೋರಿಸಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಈ ವರ್ಷ ವಿಶ್ವಏಡ್ಸ್ ದಿನದ ವಿಷಯವನ್ನು **"ಜಾಗತಿಕ ಒಗ್ಗಟ್ಟು, ಜವಾಬ್ದಾರಿಗಳ ಹಂಚಿಕೆ"** ಎಂದು ಘೋಷಿಸಲಾಗಿದೆ.

### ಅಂಕಿ–ಅಂಶಗಳು

2017ರ ಹೊತ್ತಿಗೆ ಏಡ್ಸ್‌ನಿಂದಾಗಿ ವಿಶ್ವದಾದ್ಯಂತ 41.5 ಮಿಲಿಯನ್ ಜನರು ಮೃತಪಟ್ಟಿದ್ದು, ಅಂದಾಜು 36.7 ಮಿಲಿಯನ್ ಜನರು ಎಚ್‌ಐವಿಯೊಂದಿಗೆ ಬದುಕುತ್ತಿದ್ದಾರೆ. ಆದರೆ ಆಂಟಿರೆಟ್ರೋವೈರಲ್ ಚಿಕಿತ್ಸೆಯಿಂದಾಗಿ ಏಡ್ಸ್‌ನಿಂದ ಸಂಭವಿಸುವ ಸಾವಿನ ಪ್ರಮಾಣವು 1.9 ಮಿಲಿಯನ್‌ನಿಂದ (2005ರಲ್ಲಿ) 1 ಮಿಲಿಯನ್‌ಗೆ (2016ರಲ್ಲಿ) ಇಳಿಕೆಯಾಗಿದ್ದು ನೆಮ್ಮದಿಯ ನಿಟ್ಟುಸಿರು ಬಿಡುವಂತಾಗಿದೆ.

### ಎಚ್‌ಐವಿ–ಏಡ್ಸ್ ಭಯ ಬೇಡ, ಎಚ್ಚರಿಕೆ ಇರಲಿ

ಏಡ್ಸ್ ಎಂದೊಡನೆ ಎಂಥವರೂ ಭಯ ಬೀಳುವುದು ಸಹಜ. ಏಡ್ಸ್ ರೋಗಿಗಳಲ್ಲಿ ಆತ್ಮ ಸ್ಥೈರ್ಯ ತುಂಬಿ, ಅವರಿಗೆ ಎಲ್ಲರಂತೆ ಸಾಮಾನ್ಯ ಜೀವನ ನಡೆಸಲು ಪ್ರೇರೇಪಿಸಲು ಆಪ್ತ ಸಮಾಲೋಚನೆ ನಡೆಸಿ ಅವರ ಜೀವನಶೈಲಿಯನ್ನು ಸುಧಾರಿಸುವಂತೆ ಮಾಡುವುದು ಹಾಗೂ ಅವರಿಗೂ ಸಾಮಾನ್ಯರಂತೆ ಯಾವುದೇ ಕಳಂಕವಿಲ್ಲದೇ ಬದುಕುವ ಹಕ್ಕನ್ನು ಕಲ್ಪಿಸಿಕೊಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಎಚ್‌ಐವಿ ಮತ್ತು ಏಡ್ಸ್ ಎರಡೂ ಶಬ್ದಗಳನ್ನು ಒಟ್ಟಿಗೆ ಬಳಸುವುದು ಸಾಮಾನ್ಯ. ಆದರೆ ಅವೆರಡೂ ನಿಜವಾದ ಅರ್ಥದಲ್ಲಿ ಬೇರೆ ಬೇರೆ





Downloaded From: www.kpscvaani.com

> ಸೋಂಕನ್ನು ಹೊಂದಿದ ನಂತರ ಎಚ್‌ಐವಿ ಪಾಸಿಟಿವ್ ಎಂದು ಗೊತ್ತಾಗಲು 6 ವಾರಗಳಿಂದ 6 ತಿಂಗಳು ತೆಗೆದುಕೊಳ್ಳುತ್ತದೆ. (ಸರಾಸರಿ 3 ತಿಂಗಳು). ಎಚ್‌ಐವಿ ಪರೀಕ್ಷೆ ಆದ ನಂತರ, ಈ ಅವಧಿಯಲ್ಲಿ, ಪರೀಕ್ಷೆ ನೆಗೆಟಿವ್ ಆಗಿದ್ದರೂ, ಆತ /ಆಕೆ ಸೋಂಕು ಹೊಂದಿರುವ ಸಾಧ್ಯತೆ ಇರುತ್ತದೆ ಮತ್ತು ಆ ವ್ಯಕ್ತಿ ಸೋಂಕನ್ನು ಇತರರಿಗೆ ಹರಡುವ ಸಾಧ್ಯತೆಗಳಿರುತ್ತವೆ. ಈ ಅವಧಿಯಲ್ಲಿ ವ್ಯಕ್ತಿಯಲ್ಲಿ ಟೆಸ್ಟ್ ಪಾಸಿಟಿವ್ ಆಗದಿರಬಹುದು. ಆದುದರಿಂದ ತನಗೆ ಎಚ್‌ಐವಿ ತಗುಲಿರಬಹುದೆಂಬ ಅನುಮಾನವಿದ್ದಲ್ಲಿ ಟೆಸ್ಟನ್ನು 3 ತಿಂಗಳ ನಂತರ ಪುನರಾವರ್ತನೆ ಮಾಡಬೇಕು

ವಿಷಯಗಳು. ಎಚ್‌ಐವಿಗೆ ಸೂಕ್ತ ಸಮಯದಲ್ಲಿ ಚಿಕಿತ್ಸೆ ನೀಡದಿದ್ದರೆ ಅದು ಏಡ್ಸ್ ಹಂತವನ್ನು ತಲುಪುತ್ತದೆ. ಏಡ್ಸ್ ಹಂತದಲ್ಲಿ ದೇಹವು ಅವಕಾಶವಾದಿ ಸೋಂಕುಗಳಿಗೆ ಒಳಗಾಗುತ್ತದೆ.

ಎಚ್‌ಐವಿ ಮುಖ್ಯವಾಗಿ ನಾಲ್ಕು ಮಾರ್ಗಗಳ ಮೂಲಕ ಹರಡುತ್ತದೆ. ಒಂದು: ಅಸುರಕ್ಷಿತ ಲೈಂಗಿಕ ಸಂಪರ್ಕದಿಂದ, ಎರಡು: ಎಚ್‌ಐವಿ ಸೋಂಕಿನಿಂದ ಕೂಡಿದ ರಕ್ತ ಅಥವಾ ರಕ್ತದ ಉತ್ಪನ್ನಗಳನ್ನು ಸ್ವೀಕರಿಸುವುದರಿಂದ, ಮೂರು: ಸಂಸ್ಕರಿಸದೇ ಇರುವ ಸೂಜಿ, ಸಿರಿಂಜುಗಳನ್ನು ಮತ್ತು ಹರಿತವಾದ ಸಲಕರಣೆಗಳನ್ನು ಉಪಯೋಗಿಸುವುದರಿಂದ ಹಾಗೂ ನಾಲ್ಕನೆಯದಾಗಿ ಎಚ್‌ಐವಿ ಸೋಂಕು ಹೆತ್ತವರಿಂದ ಮಗುವಿಗೆ ಬರುವ ಸಾಧ್ಯತೆ.

**ವ್ಯಕ್ತಿಯ ಶರೀರದಲ್ಲಿ ಎಚ್‌ಐವಿ ಸೇರಿದಾಗ ಏನಾಗುತ್ತದೆ?**

ನಮ್ಮ ದೇಹದಲ್ಲಿ ಸಿ.ಡಿ 4 ಎಂಬ ಒಂದು ರೀತಿಯ ಜೀವಕೋಶಗಳಿರುತ್ತವೆ. ಈ ರೀತಿಯ ಜೀವಕೋಶಗಳು ನಮ್ಮನ್ನು ವಿವಿಧ ಸೋಂಕುಗಳಿಂದ ಸಂರಕ್ಷಿಸುತ್ತವೆ. ಮತ್ತು ಸ್ವಾಭಾವಿಕವಾದ ಇಮ್ಯೂನಿಟಿ ಅಥವಾ ರೋಗನಿರೋಧಕ ಶಕ್ತಿಯನ್ನು ಕೊಡುತ್ತವೆ. ಯಾವಾಗ ಎಚ್‌ಐವಿ ನಮ್ಮ ದೇಹವನ್ನು ಪ್ರವೇಶಿಸುತ್ತದೆಯೋ, ಆಗ ಇದು ಸಿ.ಡಿ 4 ಜೀವಕೋಶಗಳನ್ನು ನಾಶಪಡಿಸಿ ನಮ್ಮನ್ನು ಬೇರೆ ಬೇರೆ ಸೋಂಕುಗಳಿಗೆ, ಅಪಾಯದ ಅಂಚಿಗೆ ಗುರಿ ಮಾಡುತ್ತದೆ.

**ಯಾವಾಗ ಎಚ್‌ಐವಿಯು ಏಡ್ಸ್ ಹಂತ ತಲುಪುತ್ತದೆ?**

ಅಕ್ವಾಯರ್ಡ ಇಮ್ಯೂನೋ ಡೆಫೀಸಿಯನ್ಸಿ ಸಿಂಡ್ರೋಮ್ (Acquired Immune Deficiency Syndrome) ನ ಸಂಕ್ಷಿಪ್ತ ರೂಪ ಏಡ್ಸ್. ಅಂದರೆ "ಅರ್ಜಿತ ರೋಗ ನಿರೋಧಕ ನ್ಯೂನತೆಯ ಲಕ್ಷಣಗಳ ಕೂಟ" ಎಂದರ್ಥ. ದೇಹವು ರೋಗಗಳ ವಿರುದ್ಧ ಹೋರಾಡುವ ಶಕ್ತಿಯನ್ನು ಕಳೆದುಕೊಂಡಾಗ, ಹಲವು ಸೋಂಕುಗಳಿಗೆ ತುತ್ತಾಗುವ ಹಂತವೇ ಏಡ್ಸ್. ಇತರ ಶಬ್ದಗಳಲ್ಲಿ ಹೇಳುವುದಾದರೆ, ವ್ಯಕ್ತಿಯ ರೋಗನಿರೋಧಕ ವ್ಯೂಹ ಹದಗೆಟ್ಟಿರುವ ಸ್ಥಿತಿ ತಲುಪಿದೆ ಎಂದರ್ಥ. ಇದರಿಂದಾಗಿ ವ್ಯಕ್ತಿ ಎಲ್ಲ ವಿಧದ ಸೋಂಕಿಗೆ ಒಳಗಾಗುತ್ತಾರೆ.

**ಎಚ್‌ಐವಿ–ಏಡ್ಸ್ ದೇಹದಲ್ಲಿ ಹರಡುವ ಹಂತಗಳು**

**ಆರಂಭದ ಹಂತ:** ಎಚ್‌ಐವಿ ಪ್ರವೇಶಿಸಿದ ಕೆಲವೇ ವಾರಗಳಲ್ಲಿ ಇಡೀ ದೇಹದಲ್ಲಿ ಹರಡುತ್ತದೆ. ಅನೇಕರಲ್ಲಿ ಹೊರಗಡೆಗೆ ರೋಗಲಕ್ಷಣಗಳು ಕಾಣದೇ ಇರಬಹುದು. ಆದರೆ ಕೆಲವು ವ್ಯಕ್ತಿಗಳಿಗೆ ಜ್ವರ, ತಲೆನೋವು, ದೇಹದಲ್ಲಿ ನೋವು, ಕೆಮ್ಮು, ಚರ್ಮದಲ್ಲಿ ಗೆಡ್ಡೆಗಳು, ರಾತ್ರಿಯ ವೇಳೆ ಬೆವರುವುದು, ಫ್ಲೂ ಜ್ವರ ದಂತಹ ಲಕ್ಷಣಗಳು ಕಾಣಿಸಿಕೊಳ್ಳಬಹುದು.

ಈ ಲಕ್ಷಣಗಳು 1 ರಿಂದ 2 ವಾರಗಳಿರುತ್ತವೆ. ಈ ಎಲ್ಲಾ ಲಕ್ಷಣಗಳು ಇದ್ದಲ್ಲಿ ಅದು ಎಚ್‌ಐವಿ ಸೋಂಕು ಎಂದು ಖಚಿತಪಡಿಸಲು ಆ ವ್ಯಕ್ತಿಯ ರಕ್ತ ಪರೀಕ್ಷೆಯಿಂದಲೇ ಸಾಧ್ಯ.

**ರೋಗ ಲಕ್ಷಣಗಳ ಹಂತ:** ಈ ಹಂತದಲ್ಲಿ ವೈರಸ್ ವಿರುದ್ಧ ಹೋರಾಡುವ ಶಕ್ತಿಯನ್ನು ನಮ್ಮ ದೇಹ ಕಳೆದುಕೊಳ್ಳುತ್ತದೆ. ಸಿ.ಡಿ 4 ಲಿಂಫೋಸೈಟ್‌ಗಳನ್ನು ವೈರಸ್ ನಾಶ ಮಾಡಿರುತ್ತದೆ. ಅದರಿಂದಾಗಿ ನಮ್ಮ ದೇಹದ ರೋಗ ನಿರೋಧಕ ಶಕ್ತಿ ಕ್ರಮೇಣ ಹದಗೆಡುತ್ತದೆ. ವ್ಯಕ್ತಿ ಸೋಂಕಿನಿಂದ ನರಳುತ್ತಾನೆ. ವಿವಿಧ ಸೋಂಕುಗಳಿಗೆ ಗುರಿಯಾಗುತ್ತಾನೆ. ವ್ಯಕ್ತಿ ನಿಶ್ಯಕ್ತಿಗೊಳಗಾಗುತ್ತಾನೆ. ದೀರ್ಘಕಾಲದ ಜ್ವರ, ದೇಹದ ತೂಕದಲ್ಲಿ ಇಳಿಕೆ, ಆಗಿಂದಾಗ್ಗೆ ಅತಿಸಾರ ಬೇಧಿ, ಆಯಾಸ, ಹಸಿವು ಇಲ್ಲದಿರುವುದು, ಒಣ ಕೆಮ್ಮು ಅಥವಾ ಉಸಿರಾಟದಲ್ಲಿ ತೊಂದರೆ, ಬಾಯಲ್ಲಿ ಬಿಳಿ ಕಲೆಗಳು/ಹುಣ್ಣು, ಲೈಂಗಿಕ ಸೋಂಕು ಲಕ್ಷಣಗಳು ಕಂಡು ಬಂದರೆ, ವ್ಯಕ್ತಿಯ ಸ್ಥಿತಿ ಮತ್ತಷ್ಟು ಹದಗೆಡುತ್ತದೆ.

**ವಿಂಡೋ ಪೀರಿಯಡ್:** ಸೋಂಕನ್ನು ಹೊಂದಿದ ನಂತರ ಎಚ್‌ಐವಿ ಪಾಸಿಟಿವ್ ಎಂದು ಗೊತ್ತಾಗಲು 6 ವಾರಗಳಿಂದ 6 ತಿಂಗಳು ತೆಗೆದುಕೊಳ್ಳುತ್ತದೆ. (ಸರಾಸರಿ 3 ತಿಂಗಳು). ಎಚ್‌ಐವಿ ಪರೀಕ್ಷೆ ಆದ ನಂತರ, ಈ ಅವಧಿಯಲ್ಲಿ, ಪರೀಕ್ಷೆ ನೆಗೆಟಿವ್ ಆಗಿದ್ದರೂ, ಆತ /ಆಕೆ ಸೋಂಕು ಹೊಂದಿರುವ ಸಾಧ್ಯತೆ ಇರುತ್ತದೆ. ಮತ್ತು ಆ ವ್ಯಕ್ತಿ ಸೋಂಕನ್ನು ಇತರರಿಗೆ ಹರಡುವ ಸಾಧ್ಯತೆಗಳಿರುತ್ತವೆ. ಈ ಅವಧಿಯಲ್ಲಿ ವ್ಯಕ್ತಿಯಲ್ಲಿ ಟೆಸ್ಟ್ ಪಾಸಿಟಿವ್ ಆಗದಿರಬಹುದು. ಆದುದರಿಂದ ತನಗೆ ಎಚ್‌ಐವಿ ತಗುಲಿರಬಹುದೆಂಬ ಅನುಮಾನವಿದ್ದಲ್ಲಿ ಟೆಸ್ಟನ್ನು 3 ತಿಂಗಳ ನಂತರ ಪುನರಾವರ್ತನೆ ಮಾಡಬೇಕು ಹಾಗೂ ಈ ಅವಧಿಯಲ್ಲಿ ಅಪಾಯಕಾರಿ ನಡವಳಿಕೆಗಳಿಂದ ದೂರವಿರಬೇಕಾಗುತ್ತದೆ.

**ಎಸ್.ಟಿ.ಐ**

ಎಸ್.ಟಿ.ಐ ಎಂದರೆ ಲೈಂಗಿಕ ಸಂಪರ್ಕದ ಸೋಂಕುಗಳು ಅಥವಾ ಗುಪ್ತರೋಗ. ಇದು ವಿವಿಧ ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳಿಂದ ಉಂಟಾಗುತ್ತದೆ. ಮುಖ್ಯವಾಗಿ ಲೈಂಗಿಕ ಸಂಪರ್ಕದ ಮಾರ್ಗಗಳಾದ ಯೋನಿ, ಗುದ ಮತ್ತು ಬಾಯಿ ಸಂಭೋಗದ ಮೂಲಕ ಹರಡುತ್ತದೆ. ಉದಾಹರಣೆಗೆ: ಸಿಫಿಲಿಸ್, ಗೋನೋರಿಯಾ, ಹರ್ಪಿಸ್ ಇತ್ಯಾದಿ.

**ಎಸ್.ಟಿ.ಐ ಮತ್ತು ಎಚ್‌ಐವಿ ನಡುವಿನ ಸಂಬಂಧ ಏನು?**

ಎಚ್‌ಐವಿ ಕೂಡ ಒಂದು ಬಗೆಯ ಎಸ್.ಟಿ.ಐ ಆಗಿರುತ್ತದೆ. ಎಸ್.ಟಿ.ಐ ತಗುಲಿದರೆ ಎಚ್‌ಐವಿ ಯ ಅಪಾಯಕ್ಕೆ ತುತ್ತಾಗುವ ಸಾಧ್ಯತೆ ಹೆಚ್ಚು. ಎಚ್‌ಐವಿ ಯೊಂದಿಗೆ ಬದುಕುತ್ತಿರುವವರಿಗೆ ಆಗಾಗ ಎಸ್.ಟಿ.ಐ ತಗುಲಿದರೆ ಅವರ ದೇಹದಲ್ಲಿ ವೈರಸ್ ಸಂಖ್ಯೆ ಹೆಚ್ಚಾಗುತ್ತದೆ. ಇದರಿಂದಾಗಿ ಬೇಗನೆ ಏಡ್ಸ್ ಹಂತ ತಲುಪುವ ಸಾಧ್ಯತೆ ಇದೆ.

**ಎಚ್‌ಐವಿ ತಡೆಗಟ್ಟಲು ಸುಲಭ ಉಪಾಯಗಳು**

- ಅಪರಿಚಿತರೊಂದಿಗೆ ಲೈಂಗಿಕ ಸಂಪರ್ಕ ವರ್ಜಿಸುವುದು. ಸಂಯಮ ಹೊಂದುವುದು. ನಿಮ್ಮ ಸಂಗಾತಿಗೆ ನಿಷ್ಠೆಯಿಂದ ಇರುವುದು.
- ಲೈಂಗಿಕ ಕ್ರಿಯೆಯಲ್ಲಿ ಕಾಂಡೋಮ್‌ಗಳನ್ನು ಉಪಯೋಗಿಸುವುದು.
- ಕ್ಷಣಿಕ ಸುಖ ಸಂತೋಷಕ್ಕಾಗಿ ಅಸುರಕ್ಷಿತ ಲೈಂಗಿಕತೆಯಿಂದ ಜೀವನದಲ್ಲಿ ಗಂಡಾಂತರವನ್ನು ತಂದುಕೊಳ್ಳಬೇಡಿ.
- ನಿಮಗೆ ಅಥವಾ ನಿಮ್ಮ ಕುಟುಂಬದ ಸದಸ್ಯರಿಗೆ ರಕ್ತದ ಅಗತ್ಯವಿದ್ದರೆ ಯಾವಾಗಲೂ ಲೈಸೆನ್ಸ್ ಹೊಂದಿರುವ ರಕ್ತ ಭಂಡಾರದಿಂದಲೇ ರಕ್ತವನ್ನು ಪಡೆಯುವುದು.
- ರಕ್ತ ಪರೀಕ್ಷೆ ಅಥವಾ ಚಿಕಿತ್ಸೆಯ ಅವಧಿಯಲ್ಲಿ ಯಾವಾಗಲೂ ಉಪಯೋಗಿಸಿ ಬಿಸಾಡುವ (ಡಿಸ್ಪೋಸೇಬಲ್) / ಸಂಸ್ಕರಿಸಿದ (ಸ್ಟೆರಿಲೈಸ್ಡ್) ಸೂಜಿಗಳನ್ನು ಮತ್ತು ಸಿರಿಂಜುಗಳನ್ನು ಮಾತ್ರ ಉಪಯೋಗಿಸುವಂತೆ ಒತ್ತಾಯ ಮಾಡಿರಿ.
- ಇಂಜೆಕ್ಷನ್ ಮೂಲಕ ಮಾದಕ ವಸ್ತುಗಳನ್ನು ತೆಗೆದುಕೊಳ್ಳುವುದನ್ನು ತಡೆಗಟ್ಟಿರಿ ಮತ್ತು ಸೂಜಿಗಳನ್ನು ಮತ್ತು ಸಿರಿಂಜುಗಳನ್ನು ಇತರರೊಂದಿಗೆ ಹಂಚಿಕೊಳ್ಳಬೇಡಿ.
- ನೀವು ನಿಮ್ಮ ಮಗುವಿಗೆ ಎಚ್‌ಐವಿ ಸೋಂಕು ಹರಡುವುದನ್ನು ತಡೆಗಟ್ಟಬಹುದು. ಗರ್ಭಿಣಿ ಆಗಿದ್ದಾಗ ಎಚ್‌ಐವಿ ಇದೆಯೋ, ಇಲ್ಲವೋ ಎಂಬುದನ್ನು ಪರೀಕ್ಷೆ ಮಾಡಿಸಿಕೊಳ್ಳಿರಿ. ಉಚಿತ ರಕ್ತ ಪರೀಕ್ಷೆಗಾಗಿ ಸಮೀಪದ ಸಾರ್ವಜನಿಕ ಸೌಲಭ್ಯವಿರುವ ಐ.ಸಿ.ಟಿ.ಸಿ ಕೇಂದ್ರಕ್ಕೆ ಭೇಟಿ ನೀಡಿರಿ.
- ನಿಮ್ಮ ವೈದ್ಯರ ಸಲಹೆಯಂತೆ, ಎಚ್‌ಐವಿ ಸೋಂಕಿತ ತಾಯಿಯಿಂದ ಮಗುವಿಗೆ ಹರಡುವುದನ್ನು ತಡೆಗಟ್ಟಲು ಸಕಾಲದಲ್ಲಿ ಔಷಧಿಯನ್ನು ತಾಯಿ ಮತ್ತು ಮಗು ಸೇವಿಸುವುದರ ಬಗ್ಗೆ ತಿಳಿದುಕೊಳ್ಳಿ.

**ನೆನಪಿಡಿ: ಎಚ್.ಐ.ವಿ ಮತ್ತು ಏಡ್ಸ್ ಈ ಕೆಳಕಂಡವುಗಳ ಮುಖಾಂತರ ಹರಡುವುದಿಲ್ಲ.**

- ಕೈಗಳನ್ನು ಕುಲುಕುವುದು ಅಥವಾ ಹಿಡಿದುಕೊಳ್ಳುವುದರಿಂದ.
- ಒಂದೇ ಶೌಚಾಲಯವನ್ನು ಉಪಯೋಗಿಸುವುದರಿಂದ.
- ಊಟವನ್ನು ಹಂಚಿಕೊಳ್ಳುವುದರಿಂದ, ತಟ್ಟೆಗಳನ್ನು ಹಂಚಿಕೊಳ್ಳುವುದರಿಂದ.
- ಸೊಳ್ಳೆ ಕಚ್ಚುವುದರಿಂದ.
- ಬಟ್ಟೆಗಳನ್ನು ಹಂಚಿಕೊಳ್ಳುವುದರಿಂದ.
- ಒಂದೇ ಕೋಣೆಯಲ್ಲಿ ಕುಳಿತುಕೊಳ್ಳುವುದರಿಂದ ಅಥವಾ ಮಲಗುವುದರಿಂದ.
- ಸಾರ್ವಜನಿಕ ದೂರವಾಣಿ ಉಪಯೋಗಿಸುವುದರಿಂದ.
- ಕೆಮ್ಮುವಾಗ ಮತ್ತು ಸೀನುವಾಗ
- ಚುಂಬಿಸುವುದರಿಂದ ಮತ್ತು ಸ್ಪರ್ಶಿಸುವುದರಿಂದ.
- ಸಾರ್ವಜನಿಕ ಸ್ನಾನಗೃಹಗಳನ್ನು ಉಪಯೋಗಿಸುವುದರಿಂದ.
- ಜೊಲ್ಲು (ಸಲೈವ), ಸಿಂಬಳ, ಕಿವಿಯ ಸುರಿತ, ಕಣ್ಣೀರಿನಿಂದ, ಬೆವರಿನಿಂದ, ಮಲ ಅಥವಾ ಮೂತ್ರದಿಂದ

**ಸೋಂಕು ತಗುಲಿರುವವರಿಗೆ ಲಭ್ಯವಿರುವ ಸೇವೆಗಳು**

**ಐ.ಸಿ.ಟಿ.ಸಿ ಸೇವೆಗಳು :** ಐ.ಸಿ.ಟಿ.ಸಿ ಎಂದರೆ ಸಮಗ್ರ ಆಪ್ತ ಸಮಾಲೋಚನೆ ಮತ್ತು ಪರೀಕ್ಷಾ ಕೇಂದ್ರ, ವ್ಯಕ್ತಿಯೊಬ್ಬರಿಗೆ ಎಚ್‌ಐವಿ ಸೋಂಕು ಇದಯೇ ಇಲ್ಲವೇ ಎಂಬುದನ್ನು ತಿಳಿಯುವ ಪರೀಕ್ಷೆಯನ್ನು ಇಲ್ಲಿ ಮಾಡಲಾಗುತ್ತದೆ. ಈ ಕೇಂದ್ರಗಳಲ್ಲಿ ಎಚ್‌ಐವಿ ಸೋಂಕಿಗೆ ಸಂಬಂಧಿಸಿದ ಮಾಹಿತಿ, ಆಪ್ತ ಸಮಾಲೋಚನೆ ಮತ್ತು ಪರೀಕ್ಷಾ ಸೌಲಭ್ಯಗಳು ದೊರೆಯುತ್ತವೆ. ಇಲ್ಲಿ ಸ್ನೇಹಪರ ಆಪ್ತ ಸಮಾಲೋಚಕರಿರುತ್ತಾರೆ ಹಾಗೂ ಹಂಚಿಕೊಳ್ಳುವ ಎಲ್ಲಾ ಮಾಹಿತಿಗಳನ್ನು ಗೌಪ್ಯವಾಗಿರಿಸಲಾಗುತ್ತದೆ. ಈ ಸೌಲಭ್ಯವು ಸಂಪೂರ್ಣ ಉಚಿತವಾಗಿರುತ್ತದೆ.

**ಈ ಸೌಲಭ್ಯಗಳು ಎಲ್ಲಿದೊರೆಯುತ್ತವೆ?**

ಎಲ್ಲಾ ಜಿಲ್ಲಾ ಮತ್ತು ತಾಲೂಕು ಆಸ್ಪತ್ರೆಗಳಲ್ಲಿ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ, ಆಯ್ದ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮತ್ತು ಕೆಲವು ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಈ ಸೌಲಭ್ಯಗಳು ದೊರೆಯುತ್ತದೆ.

**ಪರೀಕ್ಷಾ ಫಲಿತಾಂಶಗಳ ವ್ಯಾಖ್ಯಾನ**

- ಪಾಸಿಟಿವ್ ಅಥವಾ ರಿಯಾಕ್ಟಿವ್ ಫಲಿತಾಂಶ ಎಂದರೆ ಎಚ್‌ಐವಿ ಸೋಂಕು ಇದೆ ಎಂದು ಅರ್ಥ.
- ನೆಗೆಟಿವ್ ಅಥವಾ ನಾನ್ ರಿಯಾಕ್ಟಿವ್ ಫಲಿತಾಂಶ ಎಂದರೆ ಪರೀಕ್ಷೆಯ ಸಂದರ್ಭದಲ್ಲಿ ನಿಮ್ಮ ರಕ್ತದಲ್ಲಿ ಎಚ್‌ಐವಿ ವೈರಾಣು ಪತ್ತೆಯಾಗಿಲ್ಲ ಎಂದು ಅರ್ಥ. ಆದರೆ ಈ ಸೋಂಕಿನ ಸಂಶಯ ಬಲವಾಗಿದ್ದಲ್ಲಿ ಅಥವಾ ವಿಂಡೋ ಅವಧಿಯಲ್ಲಿರುವ ಸಾಧ್ಯತೆ ಇರುವುದರಿಂದ ಮೂರು/ಆರು ತಿಂಗಳ ನಂತರ ಇನ್ನೊಮ್ಮೆ ಪರೀಕ್ಷೆ ಮಾಡಿಸುವುದು ಅಗತ್ಯ.

**ಕಡ್ಡಾಯವಾಗಿ ಪಾಲಿಸಲಾಗುವ ಮೂರು ಮುಖ್ಯ ವಿಷಯಗಳು**

- ತಿಳುವಳಿಕೆಯಿದ್ದು ನೀಡುವ ಒಪ್ಪಿಗೆ: ಪರೀಕ್ಷಾ ಪೂರ್ವ ಆಪ್ತ ಸಮಾಲೋಚನೆಯ ಮೂಲಕ ಪರೀಕ್ಷೆಗೊಳಪಡಿಸುವ ವ್ಯಕ್ತಿಗೆ ಅರ್ಥವಾಗುವ ಭಾಷೆಯಲ್ಲಿ ಪರೀಕ್ಷೆಯ ಪರಿಣಾಮಗಳ ಬಗ್ಗೆ ವಿವರಿಸಿ, ಆತನ / ಆಕೆಯ ಒಪ್ಪಿಗೆಯನ್ನು ಪಡೆದಿರಬೇಕಾಗುತ್ತದೆ. ವ್ಯಕ್ತಿಯ ಅನುಮತಿ ಇಲ್ಲದೆ ಯಾವ





Downloaded From: www.kpscvaani.com



ವ್ಯಕ್ತಿಯನ್ನೂ ಪರೀಕ್ಷೆಗೆ ಒಳಪಡಿಸುವಂತಿಲ್ಲ.

- ಫಲಿತಾಂಶವನ್ನು ಸಂಪೂರ್ಣವಾಗಿ ಗೌಪ್ಯವಾಗಿಡಲಾಗುತ್ತದೆ.
- ಪರೀಕ್ಷಾ ಪೂರ್ವ ಮತ್ತು ಪರೀಕ್ಷಾ ನಂತರದ ಆಪ್ತಸಮಾಲೋಚನೆ ಪರೀಕ್ಷಾ ಭಾಗವೇ ಆಗಿರುತ್ತದೆ.

**ಪಿ.ಪಿ.ಟಿ.ಸಿ.ಟಿ ಸೇವೆಗಳು**

ಪಿ.ಪಿ.ಟಿ.ಸಿ.ಟಿ (ಪ್ರಿವೆನ್ಷನ್ ಆಫ್ ಪೇರೆಂಟ್ ಟು ಚೈಲ್ಡ್ ಟ್ರಾನ್ಸ್‌ಮಿಷನ್) ಹೆತ್ತವರಿಂದ ಮಕ್ಕಳಿಗೆ ಸೋಂಕು ಹರಡುವುದನ್ನು ತಡೆಯುವುದು. ಸೋಂಕಿತ ತಾಯಿಯಿಂದ ಮಗುವಿಗೆ ಸೋಂಕು ಹರಡುವ ಅಪಾಯ ಶೇ. 30ರಷ್ಟಿದೆ. ಇದರಲ್ಲಿ ಶೇ. 5 ರಷ್ಟು ಗರ್ಭಧಾರಣೆಯ ಸಂದರ್ಭದಲ್ಲಿ, ಇನ್ನು ಶೇ, 15ರಷ್ಟು ಹೆರಿಗೆಯ ಸಂದರ್ಭದಲ್ಲಿ, ಮತ್ತು ಶೇ. 10 ರಷ್ಟು ಎದೆಹಾಲು ಸೇವನೆಯ ಮೂಲಕ ಸೋಂಕಿನ ವರ್ಗಾವಣೆಯಾಗುತ್ತದೆ. ಈ ಸೋಂಕು ಮಗುವಿಗೆ ಹರಡುವ ಅಪಾಯವನ್ನು ಕಡಿಮೆಗೊಳಿಸಲು ತಾಯಿಗೆ ಹೆರಿಗೆ ನೋವು ಪ್ರಾರಂಭವಾದಾಗ ನೆವಿರೆಪಿನ್ (200 ಮಿ.ಗ್ರಾಂ) ನೀಡಲಾಗುತ್ತದೆ. ಹೆರಿಗೆಯಾದ ತಕ್ಷಣ ಅಥವಾ ಹೆರಿಗೆಯಾದ 72 ಗಂಟೆಯೊಳಗೆ ಮಗುವಿಗೆ ನೆವಿರೆಪಿನ್ ದ್ರಾವಣವನ್ನು (ಸೈರಪ್) ನೀಡಲಾಗುತ್ತದೆ. ಈ ಸೌಲಭ್ಯವು ಜಿಲ್ಲೆಯ ಎಲ್ಲ ಐ.ಸಿ.ಟಿ.ಸಿ ಮತ್ತು ಪಿ.ಪಿ.ಟಿ.ಸಿ.ಟಿ ಕೇಂದ್ರಗಳಲ್ಲಿ ದೊರೆಯುತ್ತದೆ.

**ಎ.ಆರ್.ಟಿ ಚಿಕಿತ್ಸೆ ಎಂದರೇನು?**

ಎ.ಆರ್.ಟಿ ಚಿಕಿತ್ಸೆಯು ಎಚ್ಐವಿ ಅಥವಾ ಏಡ್ಸ್‌ಗೆ ಇರುವ ಮುಖ್ಯ ಚಿಕಿತ್ಸೆ. ಎ.ಆರ್.ಟಿ ಔಷಧವು ಎಚ್ಐವಿಯನ್ನು ಗುಣಪಡಿಸುವುದಿಲ್ಲ. ಆದರೆ ವೈರಸ್‌ನ ಬೆಳವಣಿಗೆಯನ್ನು ಕುಂಠಿತಗೊಳಿಸಿ ರೋಗನಿರೋಧಕ ಶಕ್ತಿಯನ್ನು ವೃದ್ಧಿಸಿ ಜೀವನದ ಗುಣಮಟ್ಟವನ್ನು ಹೆಚ್ಚಿಸುತ್ತದೆ.

**ಈ ಚಿಕಿತ್ಸೆಯನ್ನು ಯಾವಾಗ ಆರಂಭಿಸಬೇಕು?**

ಎ.ಆರ್.ಟಿ ಚಿಕಿತ್ಸೆ ಯಾವಾಗ ಪ್ರಾರಂಭಿಸಬೇಕು ಎನ್ನುವುದು ಹಲವು ವಿಷಯಗಳ ಮೇಲೆ ಅವಲಂಬಿತವಾಗಿದೆ. ಸಾಮಾನ್ಯವಾಗಿ ಬಾಧಿಸುತ್ತಿರುವ ಅವಕಾಶವಾದಿ ಸೋಂಕುಗಳು ಮತ್ತು ಸಿ.ಡಿ 4 ಜೀವಕೋಶಗಳ ಸಂಖ್ಯೆ 200 ಅಥವಾ ಕಡಿಮೆ ಇದ್ದಲ್ಲಿ ಎ.ಆರ್.ಟಿ ಚಿಕಿತ್ಸೆ ಪ್ರಾರಂಭಿಸಬೇಕೆಂದು ಈ ಮೊದಲಿನ ಮಾರ್ಗಸೂಚಿಗಳಲ್ಲಿ ಸೂಚಿಸಲಾಗಿತ್ತು. ಆದರೆ ಇತ್ತೀಚಿನ ಪರಿಷ್ಕೃತ ಮಾರ್ಗಸೂಚಿಗಳ ಪ್ರಕಾರ ಎಚ್ಐವಿ ಪಾಸಿಟಿವ್ ಇರುವ ಎಲ್ಲ ಸೋಂಕಿತರಿಗೂ ಎ ಆರ್ ಟಿ ಚಿಕಿತ್ಸೆಯನ್ನು ಆರಂಭಿಸುವುದು ಕಡ್ಡಾಯವಾಗಿದೆ.

**ಎ.ಆರ್.ಟಿ ಚಿಕಿತ್ಸೆಗೆ ಸಂಪೂರ್ಣ ನಿಷ್ಠರಾಗಿರುವುದು ಅತ್ಯಂತ ಅಗತ್ಯವೇ?**

ಔಷಧಿಗಳನ್ನು ಅತ್ಯಂತ ಸಮರ್ಪಕವಾಗಿ ತೆಗೆದುಕೊಳ್ಳುವುದು ಮತ್ತು ಅದನ್ನು ವೈದ್ಯರ ಸೂಚನೆಯ ಪ್ರಕಾರವೇ ತೆಗೆದುಕೊಳ್ಳುವುದು ಬಹಳ ಮುಖ್ಯ. ಒಮ್ಮೆ ಎ.ಆರ್.ಟಿ ಚಿಕಿತ್ಸೆಯನ್ನು ತೆಗೆದುಕೊಳ್ಳಲು ಪ್ರಾರಂಭಿಸಿದರೆ ಜೀವನ ಪರ್ಯಂತ ತೆಗೆದುಕೊಳ್ಳಬೇಕು. ಎ.ಆರ್.ಟಿ ಚಿಕಿತ್ಸೆ ತೆಗೆದುಕೊಳ್ಳುತ್ತಿರುವಾಗಲೂ ದೇಹ ಎಚ್ಐವಿ ಸೋಂಕಿತವಾಗಿರುತ್ತದೆ. ಆದ್ದರಿಂದ ಲೈಂಗಿಕ ಸಂಪರ್ಕದಲ್ಲಿ ಕಾಂಡೋಮ್ ಬಳಕೆ ಕಡ್ಡಾಯ. ಎ.ಆರ್.ಟಿ ಚಿಕಿತ್ಸೆಯು ಎಲ್ಲಾ ಸರಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಲಭ್ಯವಿರುತ್ತದೆ.

**ಈ ಚಿಕಿತ್ಸೆಯ ಬಗ್ಗೆ ತಿಳಿದುಕೊಳ್ಳಬೇಕಾದ ಅಂಶಗಳು**

ಔಷಧಿ ತೆಗೆದುಕೊಳ್ಳುವವರು ಚಿಕಿತ್ಸೆಯ ಹೆಸರು, ತೆಗೆದುಕೊಳ್ಳಬೇಕಾದ ಮಾತ್ರೆಗಳ ಸಂಖ್ಯೆ ಮತ್ತು ಮಾತ್ರೆಗಳನ್ನು ತೆಗೆದುಕೊಳ್ಳಬೇಕಾದ ನಡುವಿನ ಅಂತರ, ಊಟದ ಮೊದಲೇ ಅಥವಾ ನಂತರವೇ, ಮಾತ್ರೆಗಳನ್ನು ಸಂಗ್ರಹಿಸಿ ಇರಿಸುವ ವಿಧಾನ ಮತ್ತು ಅದರಿಂದ ಉಂಟಾಗುವ ಅಡ್ಡ ಪರಿಣಾಮಗಳ ಬಗ್ಗೆ ವೈದ್ಯರಿಂದ ಸ್ಪಷ್ಟವಾಗಿ ತಿಳಿದುಕೊಂಡಿರಬೇಕು.

ಒಟ್ಟಾರೆ ಹೇಳಬೇಕೆಂದರೆ ಎಚ್ಐವಿ–ಏಡ್ಸ್ ಎಂದಾಕ್ಷಣ ಎದೆಗುಂದದೇ, ಅದನ್ನು ಒಂದು ಸವಾಲಾಗಿ ಸ್ವೀಕರಿಸಿ. ಎ.ಆರ್.ಟಿ ಚಿಕಿತ್ಸೆಯನ್ನು ತಪ್ಪದೇ ತೆಗೆದುಕೊಳ್ಳುವುದರ ಜೊತೆಗೆ ಅತ್ಯುತ್ತಮ ಜೀವನಶೈಲಿಯನ್ನು ಅನುಸರಣೆ ಮಾಡಿದರೆ ಎಚ್ಐವಿ–ಏಡ್ಸ್ ಬಾಧಿತರು ಕೂಡ ಆರೋಗ್ಯವಂತ ಜೀವನವನ್ನು ನಡೆಸಬಹುದು. ■






## ವಿಶ್ವದ ಮೊಟ್ಟ ಮೊದಲ

# ಕರಡಿ ಧಾಮ

ಡಾ.ಕರವೀರಪ್ರಭು ಕ್ಯಾಲಕೊಂಡ

**ರಾಮಾಯಣದಲ್ಲಿ ಬರುವ ವಾಲಿ ಸುಗ್ರೀವರು ರಾಜ್ಯವಾಳುತ್ತಿದ್ದ ಪ್ರದೇಶವೇ ಕಿಷ್ಕಿಂದ. ಅಲ್ಲಿ ಶ್ರೀರಾಮ ಕಪಿಗಳ ಸೈನ್ಯ ಕಟ್ಟಿದ. ಸೈನ್ಯದಲ್ಲಿ ಒಂದೇ ಒಂದು ಕರಡಿಯಿತ್ತು. ಅದರ ಹೆಸರೇ ಜಾಂಬವಂತ. ಈ ಜಾಂಬವಂತನ ವಂಶಸ್ಥರು ವಾಸಿಸುವ ತಾಣವೇ ಇಂದಿನ ದರೋಜಿ ಕರಡಿ ಧಾಮ.**




**ಭಾ**ರತ ದೇಶವನ್ನು ಜಂಬೂದ್ವೀಪವೆಂದು ಕರೆಯುತ್ತಾರೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ಸಮೀಪದ ಹಂಪಿ, ಪ್ರಖ್ಯಾತ ವಿಶ್ವ ಪರಂಪರೆಯ ಕೇಂದ್ರ. ಅದರ ಸಮೀಪದಲ್ಲಿ ಇರುವುದೇ ಉತ್ತರ ಕರ್ನಾಟಕದ ಏಕೈಕ ಅನನ್ಯವಾದ ಕರಡಿ ಅಭಯಾರಣ್ಯವಾಗಿದೆ.

ಬಳ್ಳಾರಿ ಜಿಲ್ಲೆಯ ಸೊಂಡೂರು ತಾಲೂಕಿನ ದರೋಜಿ ಗ್ರಾಮದಿಂದ ಹಿಡಿದು ಹೊಸಪೇಟೆ ತಾಲೂಕಿನ ರಾಮಸಾಗರದವರೆಗೆ ಹರಡಿ ನಿಂತಿರುವ ಕಲ್ಲು ಬಂಡೆಗಳ ಬೆಟ್ಟ ಗುಡ್ಡಗಳು. ಬಿಳಿ ಕಂದು ಬಣ್ಣದ ಬಂಡೆಗಳು, ಸ್ವಲ್ಪ



Downloaded From: www.kpscvaani.com



## ಧಾಮಕ್ಕೆ ತಲುಪುವುದು ಹೇಗೆ?

ಜಿಂದಾಲ್ ವಿಜಯನಗರ ವಿಮಾನ ನಿಲ್ದಾಣ ದರೋಜಿಯಿಂದ 38 ಕಿ.ಮೀ. ಬೆಂಗಳೂರು ಮತ್ತು ಹೈದರಾಬಾದ್ ನಡುವೆ ಯು.ಡಿ.ಎ.ಎನ್ ಯೋಜನೆ ಅಡಿ ದೈನಂದಿನ ವಿಮಾನಗಳು ಇವೆ. ದರೋಜಿಯಿಂದ 150 ಕಿ.ಮೀ. ದೂರದಲ್ಲಿರುವ ಹುಬ್ಬಳ್ಳಿ ನಿಲ್ದಾಣಕ್ಕೆ ವಿಮಾನಗಳು ಲಭ್ಯ. ಹೊಸಪೇಟೆ ಮತ್ತು ತೋರಣಗಲ್ಲು ಧಾಮಕ್ಕೆ ಹತ್ತಿರದ ರೈಲು ನಿಲ್ದಾಣಗಳು. ಇವು ದರೋಜಿಯಿಂದ 20ಕಿ.ಮೀ ದೂರದಲ್ಲಿವೆ. ಹುಬ್ಬಳ್ಳಿ ಮತ್ತು ಗುಂತಕಲ್ ಜಂಕ್ಷನ್‌ನಿಂದ ಹೊಸಪೇಟೆ/ತೋರಣಗಲ್ಲುವರೆಗೆ ದೈನಂದಿನ ರೈಲುಗಳು ಅಡ್ಡಾಡುತ್ತವೆ. ಅಲ್ಲದೆ ರಾಜ್ಯ ಹೆದ್ದಾರಿ ಮತ್ತು ರಾಷ್ಟ್ರೀಯ ಹೆದ್ದಾರಿಯ ಮೂಲಕ ಕರ್ನಾಟಕ ರಾಜ್ಯದ ಎಲ್ಲ ಪ್ರಮುಖ ನಗರಗಳಿಗೆ ಬಳ್ಳಾರಿ/ಹೊಸಪೇಟೆಯಿಂದ ಬಸ್ಸುಗಳಿವೆ.

ಸ್ವಲ್ಪ ಹಸಿರು ಅಲ್ಲಿ ಇಲ್ಲಿ ಚಿಮುಕಿಸಿದಂತೆ, ಕುರುಚಲು ಕಂಟಿಗಳ ಪೊದೆಗಳು "ಬಿಳಿಕಲ್ಲು ಕಾಯ್ದಿಟ್ಟ ಅರಣ್ಯ" ವೆಂದು ಹೆಸರು ಗಳಿಸಿತ್ತು. ಇದು ಅನಾದಿ ಕಾಲದಿಂದಲೂ ಕರಡಿಗಳ ನೆಲೆಯಾಗಿತ್ತು. ತುಂಗಭದ್ರಾ ಅಣೆಕಟ್ಟು ಬಂದು ಬರಡು ಭೂಮಿಯೆಲ್ಲಾ ಹಸುರಾಗಿತ್ತು.

ಇಲ್ಲಿನ ಗದ್ದೆಗಳಲ್ಲಿ ಬೆಳೆಯುತ್ತಿದ್ದ ಕಬ್ಬು, ಬಾಳೆಯ ಸೆಳೆತದಿಂದ ಕರಡಿಗಳು ದಾಳಿ ಇಡಲಾರಂಭಿಸಿದವು. ಇದಕ್ಕೆ ಪ್ರತಿಯಾಗಿ ಗ್ರಾಮಸ್ಥರು ಕರಡಿಗಳನ್ನು ಕೊಂದು ಹಾಕುತ್ತಿದ್ದರು. ಮಾನವ ಕರಡಿಗಳ ಸಂಘರ್ಷದ ದೂರುಗಳು ದಿನೇ ದಿನೇ ಹೆಚ್ಚಾಗತೊಡಗಿದವು. ಖ್ಯಾತ ವನ್ಯಜೀವಿ ಛಾಯಾಗ್ರಾಹಕರೂ, ಮಾಜಿ ಸಚಿವರೂ ಆದ ಎಂ.ವೈ. ಘೋರ್ಪಡೆಯವರಿಗೆ ಈ ವಿಷಯ ತಿಳಿಯುತ್ತಲೇ, ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡು ಹಿಡಿಯಬೇಕೆಂದು ನಿರ್ಧರಿಸಿದರು.

ಹಾಗಾಗಿ ಅವರು ಕರಡಿಗಳನ್ನು ರಕ್ಷಿಸಲು ಒಂದು ಪ್ರತ್ಯೇಕ ವನ್ಯಧಾಮ ರಚಿಸುವ ಅವಶ್ಯಕತೆಯನ್ನು ಪ್ರತಿಪಾದಿಸಿದರು. ಎಲ್ಲಾ ವಿಧದಲ್ಲೂ ಕರಡಿಗಳ ವಾಸಕ್ಕೆ ಅತ್ಯಂತ ಪ್ರಶಸ್ತವಾದ ಈ ಸ್ಥಳದಲ್ಲಿ "ಕರಡಿ ಧಾಮ" ರಚಿಸಲು ಅವಿರತವಾಗಿ ಶ್ರಮಿಸಿದರು. ಇದರ ಫಲಸ್ಕೃತಿಯಾಗಿ ಕರ್ನಾಟಕ ಸರ್ಕಾರವು ಅಕ್ಟೋಬರ್ 17, 1994 ರಲ್ಲಿ ಅಧಿಸೂಚನೆ ಹೊರಡಿಸಿತು. ಸುಮಾರು 5587.30 ಹೆಕ್ಟರ್ ಬಿಳಿಕಲ್ಲು ಕಾಯ್ದಿಟ್ಟ ಅರಣ್ಯವನ್ನು "ದರೋಜಿ ಕರಡಿ ಧಾಮ" ಎಂದು ಘೋಷಿಸಿತು. ಎಂ.ವೈ. ಘೋರ್ಪಡೆಯವರ "ಕನಸಿನ ಕೂಸಾದ" ದರೋಜಿ ಕರಡಿ ಧಾಮ ವಿಶ್ವದಲ್ಲಿ ಆರಂಭವಾದ ಮೊಟ್ಟ ಮೊದಲ ಕರಡಿ ಧಾಮ. ಬಳ್ಳಾರಿ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳಲ್ಲಿ ಇದೂ ಒಂದು. ಮುಂದೆ ಕರ್ನಾಟಕ ಸರ್ಕಾರ 2009 ರಲ್ಲಿ ಬುಕ್ಕಸಾಗರ ಕಾಯ್ದಿಟ್ಟ ಪ್ರದೇಶದ 2685.50



ಹೆಕ್ಟೇರನ್ನು ಮಂಜೂರ ಮಾಡಿತು. ಹೀಗಾಗಿ ಒಟ್ಟು 8272.80 ಹೆಕ್ಟರ್ ಪ್ರದೇಶದಲ್ಲಿ "ದರೋಜಿ ಕರಡಿ ಧಾಮ" ನಿರ್ಮಾಣವಾಗಿದೆ.

ಬಳ್ಳಾರಿ ಜಿಲ್ಲೆ ಎಂದಾಕ್ಷಣ ನಮ್ಮ ಕಣ್ಮುಂದೆ ಬರುವುದು ಹಂಪೆಯ ಕಲಾವೈಭವ, ವಿಜಯನಗರ ಸಾಮ್ರಾಜ್ಯದ ಪಳಿಯುಳಿಕೆ, ಗಣಿಗಾರಿಕೆಯ ಧೂಳು, ಉರಿಬಿಸಿಲು. ಆದರೆ ಇವುಗಳ ಜೊತೆಗೆ ಎಷ್ಟೋ ಅಗಾದ ಪ್ರಾಕೃತಿಕ ಸಂಪತ್ತನ್ನು ತನ್ನ ಒಡಲಲ್ಲಿ ಅಡಗಿಸಿಕೊಂಡಿದೆ.

ಕರಡಿ ಧಾಮದ ಆರಂಭದಲ್ಲಿ ಅಲ್ಲಿದ್ದುದು ಬರೀ ಕಲ್ಲು ಬಂಡೆಗಳು, ಮುಳ್ಳು ಪೊದೆಗಳು ಹಾಗೂ ಕಡಿದ ಮರಗಳ ಬೊಡ್ಡೆಗಳು ಮಾತ್ರ. ಅರಣ್ಯ ಇಲಾಖೆಯ ಸಿಬ್ಬಂದಿಗಳ ಅವಿರತ ಶ್ರಮದಿಂದ ಇಂದು ಹೆಸರಿನಿಂದ ನಳನಳಿಸುತ್ತಿದೆ. ನಾಮದ 55 ಚ.ಕಿ.ಮೀ. ವ್ಯಾಪ್ತಿಯಲ್ಲಿ ಕನಿಷ್ಠ 120 ಕರಡಿಗಳಿವೆ. ಮುದ್ದು ಮರಿಗಳು ತಮ್ಮ ತಾಯಿಯ ಬೆನ್ನ ಮೇಲೆ (ಪಿಗ್ಗಿ ಬ್ಯಾಕ್) ಕುಳಿತುಕೊಂಡು ಬರುವ ದೃಶ್ಯ ನಯನ ಮನೋಹರ! ಸವಿಯಲು ಎರಡು ಕಣ್ಣು ಸಾಲವು.

ಅಲ್ಲಿ ಬರೀ ಕರಡಿಗಳಿಲ್ಲ, ನೀರುನಾಯಿ, ಚಿರತೆ, ನರಿ, ತೋಳ, ಕತ್ತೆಕಿರುಬ, ಕಾಡು ಹಂದಿ, ಮುಳ್ಳು ಹಂದಿ, ಉಡ, ಪೆಂಗೊಲಿಯನ್, ಮುಂಗಲಿ, ನಕ್ಷತ್ರ ಆಮೆ, ಮಂಗ, ಹಾವು, ನವಿಲು, ಕೌಜುಗ, ಹಳದಿ ಟಿಟ್ಟಬ ಹಕ್ಕಿಗಳು ಮುಂತಾದ ವನ್ಯಜೀವಿಗಳ ಸಂತತಿ ಇಲ್ಲಿ ವೃದ್ಧಿಸಿವೆ. 90ಕ್ಕೂ ಹೆಚ್ಚು ಜಾತಿಯ ಪಕ್ಷಿಗಳು, 27ಕ್ಕೂ ಹೆಚ್ಚು ಪ್ರಕಾರದ ಪತಂಗಗಳು, ನೂರಾರು ಜಾತಿಯ ಸಸ್ಯಗಳು ಈ ಧಾಮದಲ್ಲಿವೆ ಎನ್ನುತ್ತಾರೆ, ಭಾರತೀಯ ವಿಜ್ಞಾನ ಮಂದಿರದ ವಿಜ್ಞಾನಿ ಹರೀಶ್ ಭಟ್.

ಕರಡಿಗಳಿಗೆ ಬೇಕಾದ ಆಹಾರ ಧಾಮದೊಳಗೇ ದೊರೆಯುವಂತೆ ಮಾಡಲಾಗಿದೆ. ಅವು ತಿನ್ನುವ ಹಣ್ಣುಗಳಾದ ಕಾರೆ, ಕವಳಿ, ಬೋರೆ, ನೇರಳೆ ಮುಂತಾದ ಕಾಡು ಹಣ್ಣಿನ ಗಿಡಗಳು ಇಲ್ಲಿ ಹೇರಳವಾಗಿದೆ. ಗಡ್ಡೆ ಗೆಣಸು ಸಾಕಷ್ಟಿವೆ. ಇತ್ತೀಚೆಗೆ ಸೀತಾಫಲ, ಮೆಕ್ಕೆ ಜೋಳ, ಮಾವು, ಪೇರಲ ಹಾಗೂ ಬಾಳೆಯ ನೆಡುತೋಪುಗಳನ್ನು ಬೆಳೆಯಲಾಗಿದೆ. ನೀರಿನ ತೊಟ್ಟಿಗಳು, ಚೆಕ್ ಡ್ಯಾಂ ಮತ್ತು ಪುಟ್ಟ ಪುಟ್ಟ ಕೆರೆಗಳನ್ನು ನಿರ್ಮಿಸಲಾಗಿದೆ. ಕರಡಿಗೆ ಪ್ರಿಯವಾದ ಗೆದ್ದಲು ಹಾಗೂ ಜೇನು ಸ್ವಾಭಾವಿಕವಾಗಿ ಇಲ್ಲಿ ಲಭ್ಯ. ಇಷ್ಟೆಲ್ಲಾ ಸವಲತ್ತುಗಳಿದ್ದ ಮೇಲೆ ಅವು ಹೊಲಗದ್ದೆಗಳಿಗೆ ಲಗ್ಗೆ ಹಾಕುವುದು ಅಪರೂಪ. ಅಕಸ್ಮಾತ್ ಲಗ್ಗೆ ಮಾಡಿ ಬೆಳೆಯನ್ನು ನಾಶ ಮಾಡಿದರೆ, ಸರ್ಕಾರವು ಮಾರುಕಟ್ಟೆಯ ಬೆಲೆಗಿಂತಲೂ ಹೆಚ್ಚಿನ ಬೆಲೆಯನ್ನು ಪರಿಹಾರವಾಗಿ ನೀಡುತ್ತಿದೆ. ಆದರೆ ಕರಡಿ ಧಾಮವಾದ ನಂತರದಲ್ಲಿ ಮನುಷ್ಯರ ಮೇಲೆ ಕರಡಿಗಳು ಧಾಳಿ ಮಾಡಿ ಸಾಯಿಸಿದ ಒಂದು ಘಟನೆಯೂ ನಡೆದಿರುವುದಿಲ್ಲ.

**ಸಂದರ್ಶನದ ಸಮಯ:**

ದರೋಜಿ ಕರಡಿ ಧಾಮಕ್ಕೆ ಭೇಟಿ ನೀಡಿ, ಜಾಂಬವಂತನ ದರ್ಶನ ಪಡೆಯಲು ಎಲ್ಲಾ ದಿನಗಳಲ್ಲಿ ಬೆಳಿಗ್ಗೆ 6 ರಿಂದ ಸಂಜೆ 6 ಗಂಟೆಯವರೆಗೆ ಅವಕಾಶ ಕಲ್ಪಿಸಲಾಗಿದೆ. ಈ ಅವಧಿಯೊಳಗೆ ವೀಕ್ಷಣಾ ಗೋಪುರದಲ್ಲಿ ಸದ್ದು ಗದ್ದಲ ಮಾಡದೇ ಕುಳಿತು ಕರಡಿಗಳನ್ನು ವೀಕ್ಷಿಸಬಹುದು. ಕರಡಿ ಧಾಮಕ್ಕೆ ಹೋಗುವ ಸಂದರ್ಭದಲ್ಲಿ ಬಿಳಿ ಬಟ್ಟೆ ಬದಲಾಗಿ ಹಸಿರು, ಕಂದು, ಖಾಕಿಯಂತಹ ಸಹಜ ವರ್ಣದ ವಸ್ತ್ರ ಧರಿಸಿದರೆ ಒಳ್ಳೆಯದು. ಎದುರಿಗಿರುವ ಕರಡಿಗುಡ್ಡದ ಮೇಲಿಂದ ಕರಡಿಗಳು ಇಳಿದು ಬರುವುದನ್ನು ಬೈನಾಕ್ಯುಲರ್ ನಲ್ಲಿ ನೋಡಿ ಆನಂದಿಸಬಹುದು. ಆದರೆ ಯಾವುದೇ ಕಾರಣಕ್ಕೂ ಕಾಡಿನಲ್ಲಿ ಓಡಾಡುವ ದುಸ್ಸಾಹಸವನ್ನು ಮಾಡಬೇಡಿ. ತಿಂಡಿ ತಿನಿಸುಗಳನ್ನು, ಪ್ಲಾಸ್ಟಿಕ್ ಚೀಲಗಳನ್ನು ಧಾಮದೊಳಗೆ ಕೊಂಡೊಯ್ಯಬೇಡಿ.

ಭಾರತೀಯ ವನ್ಯಜೀವಿ ಕಾಯ್ದೆಯ 1972 ರ 1 (31 ಸಿ) ಅಡಿಯಲ್ಲಿ ಕರಡಿಯನ್ನು ಸುರಕ್ಷಿತ ಸಸ್ತಿನಿ ಎಂದು ವರ್ಗೀಕರಿಸಲಾಗಿದೆ. ಅಳಿವಿನ ಅಂಚಿನಲಿರುವ ಕರಡಿ ಹಾಗೂ ವೈಶಿಷ್ಟ್ಯತೆಯನ್ನು ಹೊಂದಿರುವ ದರೋಜಿ ಕರಡಿ ಧಾಮದ ರಕ್ಷಣೆಗೆ ನಿಲ್ಲುವುದು ಸ್ಥಳೀಯ ಜನರ ಜವಾಬ್ದಾರಿ. ದರೋಜಿ ಕರಡಿ ಧಾಮದ ಸುತ್ತ ಮುತ್ತಲಿನ ಗ್ರಾಮಸ್ಥರು ಹಾಗೂ ಪರಿಸರ ಪ್ರೇಮಿಗಳ ಸಹಕಾರದಿಂದ ಅರಣ್ಯ ಇಲಾಖೆಯ ಸಿಬ್ಬಂದಿ ಹಗಲಿರುಳು ಶ್ರಮಿಸಿ ಕಲ್ಲು ಬಂಡೆಗಳ ನಡುವೇ ಹಸಿರು ವನರಾಶಿಯನ್ನು ಅರಳಿಸಿದ್ದಾರೆ. ಇದು ಅರಣ್ಯದ ನೈಸರ್ಗಿಕ ಪುನರುತ್ಪತ್ತಿಯ ಉದಾಹರಣೆಯಾಗಿದೆ. ತಮ್ಮದೇ ಆದ ಪರಿಸರಲ್ಲಿ ಜೀವಿಸುವುದು ಎಲ್ಲಾ ಪ್ರಾಣಿಗಳ ಜನ್ಮಸಿದ್ಧ ಹಕ್ಕು. ಅಂತೆಯೇ ದರೋಜಿ ಕರಡಿ ಧಾಮದಲ್ಲಿ ಕರಡಿಗಳು ಸ್ವಚ್ಛಂದವಾಗಿ ಓಡಾಡಿಕೊಂಡಿರುವುದನ್ನು ಕಂಡರೆ ಮನಸ್ಸು ಹಿರಿ ಹಿರಿ ಹಿಗ್ಗುತ್ತದೆ.

ದರೋಜಿ ಕರಡಿಧಾಮವನ್ನು ಸರ್ಕಾರವು ಪರಿಸರ ಸೂಕ್ಷ್ಮವಲಯವೆಂದು ಘೋಷಿಸಿದೆ. ಹಾಗಾಗಿ ಧಾಮದ ಏಳು ಕಿ.ಮೀ. ಪ್ರದೇಶದ ಸುತ್ತಮುತ್ತ ಕಲ್ಲು, ಕ್ವಾರಿ, ಗಣಿಗಾರಿಕೆ, ಹಾನಿಕಾರಕ ರಾಸಾಯನಿಕ ತಯಾರಿಕೆ ಕೈಗಾರಿಕೆಗಳನ್ನು ಸ್ಥಾಪಿಸುವಂತಿಲ್ಲ. ಇದರಿಂದಾಗಿ ಕರಡಿ ಧಾಮ ಮಾತ್ರವಲ್ಲ, ಸುತ್ತ ಮುತ್ತಲಿನ ಗ್ರಾಮಸ್ಥರಿಗೆ ಮತ್ತು ವನ್ಯ ಜೀವಿಗಳಿಗೆ ಹೆಚ್ಚಿನ ಸುರಕ್ಷತೆ ಮತ್ತು ಉತ್ತಮ ಪರಿಸರ ದೊರಕಿದೆ.





Downloaded From: www.kpscvaani.com



# ಅ'ಗಣಿತ' ಮೇಧಾವಿ

# ಶ್ರೀನಿವಾಸ್ ರಾಮಾನುಜನ್

**ಗಣಿತ ವಿಷಯದಲ್ಲಿ ಅಭೂತಪೂರ್ವ ಸಾಧನೆ ಮಾಡಿದ ರಾಮಾನುಜನ್ ಅವರ ಜನ್ಮದಿನವಾದ ಡಿಸೆಂಬರ್ 22 ನ್ನು ಪ್ರತಿ ವರ್ಷ 'ರಾಷ್ಟ್ರೀಯ ಗಣಿತ' ದಿನವಾಗಿ ಆಚರಿಸಲಾಗುತ್ತದೆ.**

ಪ್ರಿಯಾಂಕ ವಿ.ಹೆಚ್

ಜವಾಹರ ಲಾಲ್ ನೆಹರುರವರು ತಮ್ಮ ಡಿಸ್ಕವರಿ ಆಫ್ ಇಂಡಿಯಾ ಪುಸ್ತಕದಲ್ಲಿ "ಭಾರತದಲ್ಲಿ ಗಣಿತ ವಿಷಯದಲ್ಲಿ ಇತ್ತೀಚಿನ ಒಬ್ಬ ಅಸಾಧಾರಣ ವ್ಯಕ್ತಿಯನ್ನು ಯೋಚಿಸುವುದು ಅನಿವಾರ್ಯವಾಗುವಂತೆ ಮಾಡುತ್ತದೆ" ಎಂದು ಉಲ್ಲೇಖಿಸಿದ್ದಾರೆ. ನೆಹರೂರವರು ಈ ರೀತಿ ಪ್ರಶಂಸೆ ಮಾಡಿದ ವ್ಯಕ್ತಿ ಯಾರು ಗೊತ್ತೇ? ಅವರೇ ವಿಶ್ವದ ಶ್ರೇಷ್ಠ ಗಣಿತಜ್ಞ ಎಂದು ಪ್ರಖ್ಯಾತರಾಗಿರುವ ಶ್ರೀನಿವಾಸ ರಾಮಾನುಜನ್ ಅಯ್ಯಂಗಾರ್.

ಶ್ರೀನಿವಾಸ ರಾಮಾನುಜನ್‌ರವರು ಶುದ್ಧ ಗಣಿತದಲ್ಲಿ ಔಪಚಾರಿಕ ತರಬೇತಿಯನ್ನು ಹೊಂದಿರದಿದ್ದರೂ ಗಣಿತದ ವಿಶ್ಲೇಷಣೆ, ಸಂಖ್ಯೆ ಸಿದ್ಧಾಂತಕ್ಕೆ ಗಣನೀಯ ಕೊಡುಗೆಗಳನ್ನು ನೀಡಿದ್ದಾರೆ. 'ಪ್ರತೀ ಧನ ಪೂರ್ಣಾಂಶವೂ ರಾಮಾನುಜನ್ನರ ವೈಯುಕ್ತಿಕ ಮಿತ್ರರುಗಳಲ್ಲೊಂದು' ಎಂಬುದು ಇವರ ಅಪಾರ ಗಣಿತ ಪ್ರೇಮದ ಬಗ್ಗೆ ಹೇಳಿರುವ ಲೋಕ ವಿಖ್ಯಾತ ನುಡಿ. ಅವರಿಗೆ ಸಂಖ್ಯೆಗಳ ವಿಶೇಷ ಲಕ್ಷಣಗಳನ್ನು ನಂಬಲಸಾಧ್ಯವಾಗುವಂತಹ ರೀತಿಯಲ್ಲಿ ನೆನಪಿಡುವ ಅಪೂರ್ವ ಸಾಮರ್ಥ್ಯವಿತ್ತು.

ಜೇಮ್ಸ್ ಆರ್ ನ್ಯೂಮನ್ನರ 'ದಿ ವರ್ಲ್ಡ್ ಆಫ್ ಮ್ಯಾಥಮೆಟಿಕ್ಸ್' ಎಂಬ ನಾಲ್ಕು ಸಂಪುಟಗಳ ಉದ್ಗ್ರಂಥದಲ್ಲಿ 'ಶ್ರೀನಿವಾಸ್ ರಾಮಾನುಜನ್‌ರವರ ಜೀವನ ಒಂದು ಯುಗಾರಂಭವನ್ನು ಸೂಚಿಸುತ್ತದೆ. ಭಾರತದಲ್ಲಿ ವಿವಿಧ ಕಾಲಘಟ್ಟಗಳಲ್ಲಿ ಉನ್ನತ ಪ್ರತಿಭೆಯ ಗಣಿತಜ್ಞರಿದ್ದರು. ಕಾಲಾನುಕ್ರಮದಲ್ಲಿ ಅಂಥವರನ್ನು ಕೊನೆಯ ಗ್ರೀಕ್ ಕಾಲದವರೆಗೆ ಗುರುತಿಸಬಹುದು. ಆದರೆ ಉತ್ತುಂಗತೆಯ ನಿರಪೇಕ್ಷಮಾನದಿಂದ ಅಳೆದಾಗ ಪೌರಾತ್ಯ ಗಣಿತಜ್ಞರಲ್ಲೆಲ್ಲಾ ರಾಮಾನುಜನ್ನರ ಜೀನಿಯಸ್ ಅತ್ಯುಚ್ಚವೆಂದೆನಿಸುತ್ತದೆ" ಎಂದು ಅವರ ಮೇಧಾವಿತನದ ಕುರಿತು ಹೇಳಿದ್ದಾರೆ.

'ರಾಮಾನುಜನ್' (ಹೆಸರನ್ನು ಅಕ್ಷರಶಃ ಅರ್ಥೈಸಿ ಹೇಳುವುದಾದರೆ ಹಿಂದೂ ದೇವತೆ ರಾಮನ ಕಿರಿಯ ಸಹೋದರ)ರವರು 1887 ರ ಡಿಸೆಂಬರ್ 22 ರಂದು ತಮಿಳುನಾಡಿನ ಈರೋಡ್‌ನ ತಾತನ ಮನೆಯಲ್ಲಿ ಜನಿಸಿದರು. ಇವರದ್ದು ತಮಿಳು ಬ್ರಾಹ್ಮಣ ಅಯ್ಯಂಗಾರ್ ಕುಟುಂಬ. ಇವರ ತಂದೆ ಕುಪ್ಪುಸ್ವಾಮಿ ಶ್ರೀನಿವಾಸ ಅಯ್ಯಂಗಾರ್ ಮೂಲತಃ ತಂಜಾವೂರು ಜಿಲ್ಲೆಯವರಾಗಿದ್ದು, ಸೀರೆ ಅಂಗಡಿಯಲ್ಲಿ ಗುಮಾಸ್ತರಾಗಿ ಕೆಲಸ ಮಾಡುತ್ತಿದ್ದರು. ತಾಯಿ ಕೋಮಲತಮ್ಮಲ್ ಗೃಹಣಿಯಾಗಿದ್ದರು. ಇವರ ಕುಟುಂಬದವರಿದ್ದ ಈ ಮನೆ ಈಗ ವಸ್ತು ಸಂಗ್ರಹಾಲಯವಾಗಿದೆ.

ಬಾಲ್ಯದಲ್ಲಿ ರಾಮಾನುಜನ್ನರು ಶಾಂತ ಹಾಗೂ ಆಲೋಚನಾಯುಕ್ತ ಸ್ವಭಾವದವರಾಗಿದ್ದರು.ತನ್ನ ತಾಯಿಯಿಂದ ದೇವರನಾಮ ಮತ್ತು ಭಕ್ತಿಗೀತೆಗಳನ್ನು ಕಲಿತ ಅವರು ಆಧ್ಯಾತ್ಮಿಕ ವಿಚಾರಗಳಲ್ಲಿ ಆಸಕ್ತಿಯನ್ನು ಹೊಂದಿದ್ದರು. ಬೆಳೆಯುತ್ತಾ ಹೋದಂತೆ ಧಾರ್ಮಿಕ ಗ್ರಂಥಗಳನ್ನು ಮತ್ತು ಭಕ್ತಿ ಸಾಹಿತ್ಯವನ್ನು ಓದಿ ಅದರಲ್ಲಿ ಹೆಚ್ಚಿನದನ್ನು ಕಂಠಪಾಠ ಮಾಡಿದ್ದರು. ವೇದ ಉಪನಿಷತ್ತು ತಿರುಕ್ಕುರುಳ್ ಮುಂತಾದ ಶಾಸ್ತ್ರಗಳಿಂದ ಶ್ಲೋಕಗಳನ್ನೂ ಹಾಗೆಯೇ ಸಂತರ ಹಾಗೂ ಜ್ಞಾನಿಗಳ ನುಡಿಗಳನ್ನು ತಮಿಳು ಕೃತಿಗಳಿಂದ ನಿರರ್ಗಳವಾಗಿ ಹೇಳಬಲ್ಲವರಾಗಿದ್ದರು.

ಐದನೆಯ ವಯಸ್ಸಿಗೆ ಶಾಲೆಗೆ ಸೇರಿದ ಅವರಿಗೆ ಪ್ರತಿಯೊಂದರಲ್ಲೂ ಕಲಿಕೆಯ ಕುತೂಹಲವಿತ್ತು. ರಾಮಾನುಜನ್ ಅವರಿಗೆ ಯಾರೂ ಸ್ನೇಹಿತರಿರಲಿಲ್ಲ. ಇತರರು ಆಟವಾಡುತ್ತಿದ್ದರೆ ಇವರು ಕಠಿಣ ಲೆಕ್ಕವನ್ನು ಬಿಡಿಸುವುದರಲ್ಲಿ ಮಗ್ನರಾಗಿರುತ್ತಿದ್ದರು. ಅವರಿಗೆ 15 ವರ್ಷ ವಯಸ್ಸಿನಲ್ಲಿದ್ದಾಗ ಪಡೆದಿದ್ದ ಜಾರ್ಜ್ ಶೂಬ್ರಿಡ್ಜ್ ಕಾರ್ ಅವರ " ಸಿನಾಪ್ಸಿಸ್ ಆಫ್ ಎಲಿಮೆಂಟರ್ಯ್ ರಿಸಲ್ಟ್ ಇನ್ ಪ್ಯೂರ್ ಅಂಡ್ ಆಪ್ಲೈಡ್ ಮ್ಯಾಥಮಿಟಿಕ್ಸ್" ರಾಮಾನುಜನ್ ಪ್ರತಿಭೆಯನ್ನು ಪ್ರಚೋದಿಸಿದ ಪುಸ್ತಕ. 1903 ಯಲ್ಲಿ ಅವರು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದರು.

ರಾಮಾನುಜನ್ ಅವರು ಫೆಲೊ ಆಫ್ ಆರ್ಟ್ ತರಗತಿಗಳಿಗೆ ಸೇರಿದಾಗ ಅವರಿಗೆ ಗಣಿತದ ಹೊರತಾಗಿ ಇನ್ಯಾವುದೇ ವಿಷಯಗಳ ಕುರಿತಾಗಿ ಕಿಂಚಿತ್ತೂ ಆಸಕ್ತಿ ಹುಟ್ಟಲಿಲ್ಲ. ಈ ನಿರಾಸಕ್ತಿ ಹಾಗೂ ಎಡಬಿಡದೆ ಒಡನಾಡಿಯಾಗಿ ಕಾಡುತ್ತಿದ್ದ ಅನಾರೋಗ್ಯವು ಅವರ ಓದನ್ನು ಅಲ್ಲಿಗೇ ಮೊಟಕುಗೊಳಿಸಿಬಿಟ್ಟವು. ಪದವಿ ಗಳಿಸದೆ ಕಾಲೇಜನ್ನು ತೊರೆದು ಗಣಿತ ಶಾಸ್ತ್ರದಲ್ಲಿ ಸ್ವತಂತ್ರ ಸಂಶೋಧನೆ ಮುಂದುವರೆಸಿದರು. ಹಣವಿಲ್ಲದೆ ಕಡು ಬಡತನದಲ್ಲಿ ಬೇಯುತ್ತಿದ್ದ ಅವರ ಬದುಕು ಅತ್ಯಂತ ಹೀನಾಯ ಸ್ಥಿತಿಯಲ್ಲಿತ್ತು. ಅವರ ಬಾಳಿನ ದಾರಿ ಬದಲಾಗಲಿ ಎಂದು ಮನೆಯವರು ಮದುವೆ ಏರ್ಪಡಿಸಿದರು. ತಾಯಿ ಆಯ್ಕೆ ಮಾಡಿದ ಹುಡುಗಿ ಜಾನಕಿಯನ್ನು 14 ಜುಲೈ 1909ರಂದು ರಾಮಾನುಜನ್ ಮದುವೆಯಾದರು.

ಇನ್ನು ಮುಂದೆ ಹೆತ್ತವರಿಗೆ ಹೊರೆಯಾಗಬಾರದೆಂದು ನಿರ್ಧರಿಸಿದ ರಾಮಾನುಜನ್ ಶಾಶ್ವತ ಉದ್ಯೋಗಕ್ಕಾಗಿ ಹುಡುಕಾಟ ಆರಂಭಿಸಿದರು. ಹಿರಿಯರೊಬ್ಬರ ಶಿಫಾರಸ್ಸಿನ ಮೇರೆಗೆ ಮದ್ರಾಸ್‌ನಲ್ಲಿ ಅಕೌಂಟೆಂಟ್ ಜನರಲ್ ಕಚೇರಿಯಲ್ಲಿ ಕೆಲಸ ಸಿಕ್ಕಿತಾದರೂ ಅದು ಕೇವಲ ಎರಡು ತಿಂಗಳಿನ ಮಟ್ಟಿಗೆ ಮಾತ್ರ ಇತ್ತು. ಬಡತನ ಹಾಗೂ ಅನಾರೋಗ್ಯ ಅವರನ್ನು ಎಡಬಿಡದೆ ಕಾಡಲಾರಂಭಿಸಿದವು. ಹಣ ಸಂಪಾದಿಸಲು ಕೆಲ ಕಾಲ ಅವರು ವಿದ್ಯಾರ್ಥಿಗಳಿಗೆ ಮನೆಪಾಠ ಹೇಳಿಕೊಟ್ಟರು. ಇದೆಲ್ಲದರ ನಡುವೆಯೂ ಗಣಿತದ ಕುರಿತಾದ ತಮ್ಮ ಆಲೋಚನೆಗಳನ್ನು ನೋಟ್ ಬುಕ್ಕಿನಲ್ಲಿ ದಾಖಲಿಸುವ ಕೆಲಸವನ್ನು ಮಾತ್ರ ಬಿಡಲಿಲ್ಲ.

1910 ರಲ್ಲಿ ಅವರು ದಿವಾನ್ ಬಹಾದ್ದೂರರನ್ನು ಭೇಟಿಯಾಗಿದ್ದಾಗ, ಬಹಾದ್ದೂರರು "ನಿಮಗೇನು ಬೇಕು" ಎಂದು ಕೇಳಿದರಂತೆ. ಆಗ ರಾಮಾನುಜನ್ 'ಸಂಶೋಧನೆಯನ್ನು ಮುಂದುವರೆಸಿಕೊಂಡು ಹೋಗುವ ಮಟ್ಟಿಗೆ ಬದುಕಿರಲು ಸಾಕಾಗುವಷ್ಟು ಅನ್ನ" ಎಂದರಂತೆ. ಬಹದ್ದೂರರು ತಾವೆ ಸ್ವತಃ 25 ರೂಪಾಯಿಗಳ ಮಾಸಿಕ ಧನ ಸಹಾಯ ಮಾಡಲಾರಂಭಿಸಿದರು. ಆದರೆ ರಾಮಾನುಜನ್‌ರವರಿಗೆ ಹಣವನ್ನು ಹೀಗೆ ದಾನವಾಗಿ ಪಡೆಯುವ ಮನಸ್ಸಿರಲಿಲ್ಲ. ಮತ್ತೆ ಹಿರಿಯರೊಬ್ಬರ ಶಿಫಾರಸ್ಸಿನ ಮೇರೆಗೆ ಅವರು ಮದ್ರಾಸಿನ ಪೋರ್ಟ್ ಟ್ರಸ್ಟ್ ಕಚೇರಿಯಲ್ಲಿ ಗುಮಾಸ್ತರಾಗಿ ನೇಮಕಗೊಂಡರು ಮತ್ತು ಬಿಡುವಿನ ಸಮಯದಲ್ಲಿ ತಮ್ಮ ಗಣಿತದ ಸಂಶೋಧನೆಯನ್ನು ಮುಂದುವರೆಸಿದರು. ರಾಮಾನುಜನ್ ಅವರ ಬಾಸ್ ಆಗಿದ್ದ ಸರ್ ಫ್ರಾನ್ಸಿಸ್ ಸ್ಪ್ರಿಂಗ್ ಮತ್ತು ಸಹದ್ಯೋಗಿಯೂ, ಇಂಡಿಯನ್ ಮ್ಯಾಥಮೆಟಿಕಲ್ ಸೊಸೈಟಿಯ ಖಜಾಂಜಿಯೂ ಆಗಿದ್ದ ಎಸ್. ನಾರಾಯಣ್ ಅಯ್ಯರ್‌ರವರು ರಾಮಾನುಜನ್‌ರವರ ಗಣಿತ ಸಂಶೋಧನೆಗೆ ಬೆಂಬಲವನ್ನು ನೀಡಿದರು.

ಈ ಅವಧಿಯಲ್ಲಿ ರಾಮಾನುಜನ್‌ರವರು ಬರ್ನೌಲ್ಲಿ ಸಂಖ್ಯೆಗಳ ಕುರಿತು ಬರೆದ 17 ಪುಟಗಳ ಕೃತಿಯು 'ಜರ್ನಲ್ ಆಫ್ ದಿ ಇಂಡಿಯನ್ ಮ್ಯಾಥಮೆಟಿಕಲ್ ಸೊಸೈಟಿ'ಯಲ್ಲಿ ಪ್ರಕಟವಾಯಿತು. ಆದರೂ ರಾಮಾನುಜನ್‌ರವರ ನಿಜವಾದ ಪ್ರತಿಭೆ ಇನ್ನೂ ಯಾರಿಗೂ ತಿಳಿದಿರಲಿಲ್ಲ. ಸ್ನೇಹಿತರ ಪ್ರೋತ್ಸಾಹದಿಂದ ಅವರು ತಮ್ಮ ಗಣಿತೀಯ ಶೋಧನೆಗಳ ಕುರಿತು ಕೇಂಬ್ರಿಡ್ಜ್ ಗಣಿತಜ್ಞರಿಗೆ ಎರಡು ಬಾರಿ ಪತ್ರ ಬರೆದರೂ ಯಾವುದೇ ಪ್ರತಿಕ್ರಿಯೆ ಬರಲಿಲ್ಲ. ನಂತರದ ಪ್ರಯತ್ನದಲ್ಲಿ ಅವರು ಪ್ರೊ.ಹಾರ್ಡಿಯವರೊಂದಿಗೆ ನಡೆಸಿದ ಪತ್ರ ವ್ಯವಹಾರ, ಅವರ ಜೀವನದ ಗತಿಯನ್ನೇ ಬದಲಾಯಿಸಿತು. ರಾಮಾನುಜನ್‌ರವರ ಸ್ಥಾನಮಾನ ಸುಧಾರಿಸಿತು. ಹಾಗೂ ಅವರನ್ನು ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿದ್ವಾಂಸರೆಂದು ನೇಮಕಮಾಡಲಾಯಿತು.

ರಾಮಾನುಜನ್‌ರವರು ಗಣಿತದ ಕುರಿತು ಬರೆದು ಕಳಿಸಿದ ಪತ್ರಗಳು ಕೇಂಬ್ರಿಡ್ಜ್‌ನಲ್ಲಿ ಹೊಸ ಸಂಚಲನವನ್ನು ಹುಟ್ಟುಹಾಕಿದವು. ಧಾರ್ಮಿಕ ಆಕ್ಷೇಪಣೆಗಳನ್ನು ನಿವಾರಿಸಿಕೊಂಡು ಅವರು 1914 ರಲ್ಲಿ ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸಿದರು. ಅಲ್ಲಿ ಪ್ರೋ.ಹಾರ್ಡಿಯವರು ಶಿಕ್ಷಕರಾಗಿ, ಕೆಲವು ಸಂಶೋಧನೆಗಳಲ್ಲಿ ಇವರ ಜೊತೆಗೂಡಿ ಸಹಕರಿಸಿದರು.

ಇಂಗ್ಲೆಂಡ್ ನಲ್ಲಿದ್ದಾಗ ಅನಾರೋಗ್ಯದಿಂದ ಆಸ್ಪತ್ರೆ ಸೇರಿದ್ದಾ ರಾಮಾನುಜನ್ ಅವರನ್ನು ಭೇಟಿ ಮಾಡಲು ಪ್ರೊ. ಹಾರ್ಡಿ ಬಂದರಂತೆ. ಹಾರ್ಡಿಯವರು ತಾವು ತೆಗೆದುಕೊಂಡು ಬಂದಿದ್ದ ಟ್ಯಾಕ್ಸಿಕ್ಯಾಬ್ ಸಂಖ್ಯೆ 1729, ಇದು ಬಹಳ ನೀರಸವಾದ ಸಂಖ್ಯೆ' ಎಂದರಂತೆ. ಆಗ ರಾಮಾನುಜನ್ "ಇಲ್ಲ ಇದು ಬಹಳ ಆಸಕ್ತಿದಾಯಕವಾದ ಸಂಖ್ಯೆ. ಎರಡು ಘನಗಳ ಮೊತ್ತವಾಗಿ ಎರಡು ವಿಭಿನ್ನ ರೀತಿಯಲ್ಲಿ ವ್ಯಕ್ತಪಡಿಸಬಹುದಾದ ಚಿಕ್ಕಸಂಖ್ಯೆ (ಅಂದರೆ 13 +123 = 93+103)" ಎಂದುತ್ತರಿಸಿದರಂತೆ. ಈ ಸಂಖ್ಯೆ(1729) ಯನ್ನು ಈಗ "ಹಾರ್ಡಿ –ರಾಮಾನುಜನ್ ಸಂಖ್ಯೆ" ಎಂದು ಕರೆಯಲಾಗುತ್ತದೆ.


ರಾಮಾನುಜನ್‌ರವರ ಗಣಿತ ಜ್ಞಾನ (ಅದರಲ್ಲಿ ಹೆಚ್ಚಿನವು ಸ್ವಂತಃ ಅವರೇ ಕೆಲಸ ಮಾಡಿದ್ದವು)ಚಕಿತಗೊಳಿಸುವಂತಿತ್ತು. ಗಣಿತ ಶಾಸ್ತ್ರಗಳ ಆಧುನಿಕ ಬೆಳವಣಿಗೆ ಬಗ್ಗೆ ಅವರಿಗೆ ಸಂಪೂರ್ಣ ತಿಳಿದಿದ್ದಿಲ್ಲವಾಗಿದ್ದರೂ ಭಿನ್ನರಾಶಿಗಳ ಬಗ್ಗೆ ಅವರಿಗಿದ್ದ ಪಾಂಡಿತ್ಯವು ಯಾವುದೇ ಬದುಕಿರುವ ಗಣಿತಜ್ಞರಿಗಿಂತ ಅಪಾರವಾಗಿತ್ತು. ಕೇಂಬ್ರಿಡ್ಜ್ ವಿಶ್ವವಿದ್ಯಾಲಯವು ರಾಮಾನುಜನ್‌ರವರ ಸಂಶೋಧನೆಗಾಗಿ 1916 ರಲ್ಲಿ 'ಬ್ಯಾಚುಲರ್ ಆಫ್ ಸೈನ್ಸ್' ಪದವಿ ನೀಡಿತು. ಅಂದಿನ ಬ್ರಿಟಿಷ್ ಸಾಮ್ರಾಜ್ಯದ ವಿಜ್ಞಾನ ಜಗತ್ತಿನಲ್ಲಿ ಅತ್ಯುನ್ನತ ಗೌರವವಾದ 'ರಾಯಲ್ ಸೊಸೈಟಿಯ ಫೆಲೋ' ಆಗಿ ಶ್ರೀನಿವಾಸ್ ರಾಮಾನುಜನ್ 1918 ರಲ್ಲಿ ಚುನಾಯಿತರಾದರು.

ಕೇಂಬ್ರಿಡ್ಜ್‌ನಲ್ಲಿ ಮಹತ್ತರ ಸಂಶೋಧನೆ ನಡೆಸಿ ತಮ್ಮ ಅಗಾಧ ಪ್ರತಿಭೆಯನ್ನು ಅನಾವರಣಗೊಳಿಸಿದ ರಾಮಾನುಜನ್ ಐದು ವರ್ಷಗಳ ನಂತರ ಭಾರತಕ್ಕೆ ಹಿಂದಿರುಗಿದರು. ಮರಳಿ ಬಂದಾಗ ಇಲ್ಲಿನ ವಿದ್ವಾಂಸರಿಂದ ಅಭೂತಪೂರ್ವ ಸ್ವಾಗತ ಹಾಗೂ ಮೆಚ್ಚಿಗೆ ದೊರಕಿತು. ಆದರೆ ಅವರ ಆರೋಗ್ಯ ಕ್ಷೀಣಿಸುತ್ತ ಹೋಯಿತು. ಉತ್ತಮ ಔಷದೋಪಚಾರ ದೊರೆತರೂ ಸಹ 1920 ರ ಏಪ್ರಿಲ್ 26 ರಂದು ಅಂದರೆ 32 ವರ್ಷ 4 ತಿಂಗಳು 4 ದಿವಸಗಳ ತಾರುಣ್ಯದಲ್ಲೇ ರಾಮಾನುಜನ್, ಕುಂಬಕೋಣಂನಲ್ಲಿ ಇಹಲೋಕ ತ್ಯಜಿಸಿದರು. ಭರತ ಖಂಡ ಮಾತ್ರವಲ್ಲದೇ ಇಡೀ ಜಗತ್ತು ಅಂದಿನವರೆಗೂ ಕಂಡಿರದಂತಹ ಮಹಾನ್ ಗಣಿತಜ್ಞನನ್ನು ಕಳೆದುಕೊಂಡಿತು.


ರಾಮಾನುಜನ್ ತಾವು ಗಣಿತದ ಬಗ್ಗೆ ಸಂಶೋಧಿಸಿ ಬರೆದಿಟ್ಟ ಅಪ್ರಕಟಿತ ನೋಟ್ ಬುಕ್ಕುಗಳನ್ನು (ಲಾಸ್ಟ್ ನೋಟ್ ಬುಕ್ಸ್) ಬಿಟ್ಟು ಹೋಗಿದ್ದಾರೆ. ಇವುಗಳು ಗಣಿತಜ್ಞರಿಗೆ ಹೆಚ್ಚಿನ ಅಧ್ಯಯನದ ವಸ್ತುವಾಗಿದೆ.



Downloaded From: www.kpscvaani.com




Downloaded From: www.kpscvaani.com



# ಜಾನುವಾರುಗಳಿಗೂ ಬಂತು ವಿಶಿಷ್ಟ ಗುರುತಿನ ಸಂಖ್ಯೆ

ಕಿಶನರಾವ್ ಕುಲಕರ್ಣಿ

**ದೇಶದ ಜನರಿಗೆ ಆಧಾರ್ ಗುರುತಿನ ಸಂಖ್ಯೆ ನೀಡಿರುವ ಮಾದರಿಯಲ್ಲಿ ಜಾನುವಾರುಗಳಿಗೂ ವಿಶಿಷ್ಟ ಗುರುತಿನ ಸಂಖ್ಯೆಯನ್ನು ತಿಳಿಸುವ ಹಳದಿ ಬಣ್ಣದ ಕಿವಿಯೋಲೆಯನ್ನು ಹಾಕಲಾಗುತ್ತಿದೆ.**



**ದೇ**ಶದ ಜನರಿಗೆ ಆಧಾರ್ ಗುರುತಿನ ಸಂಖ್ಯೆ ನೀಡಿರುವ ಮಾದರಿಯಲ್ಲಿಯೇ ದೇಶದಲ್ಲಿರುವ ಎಲ್ಲಾ ರಾಸುಗಳಿಗೆ 12 ಅಂಕಿಗಳನ್ನು ಒಳಗೊಂಡಿರುವ ಏಕರೂಪದ ವಿಶಿಷ್ಟ ಗುರುತಿನ ಸಂಖ್ಯೆಯನ್ನು ನೀಡಲು ಕೇಂದ್ರ ಸರ್ಕಾರವು ಆರಂಭಿಸಿದೆ.

ಕೊರಳಲ್ಲಿ ಗಂಟೆ, ಗೆಜ್ಜೆಸರ ಕಟ್ಟಿಕೊಂಡು ಘಲ್... ಘಲ್ ಸದ್ದು ಮಾಡುತ್ತ ರೈತರಿಗೆ ತಾವಿರುವ ಸ್ಥಳದ ಕುರುಹು ನೀಡುತ್ತಿದ್ದ ಜಾನುವಾರುಗಳಿಗೀಗ ಕೇಂದ್ರ ಸರ್ಕಾರದ ನೆರವಿನಿಂದಾಗಿ ಕಿವಿಯೋಲೆಯ ಭಾಗ್ಯ ದೊರಕಿದೆ. ಹಾಗಾಗಿ ಕರುಗಳು ಸೇರಿದಂತೆ ಎಲ್ಲ ಬಗೆಯ ಜಾನುವಾರುಗಳ ಕಿವಿಯಲ್ಲಿ ಹಳದಿ ಬಣ್ಣದ ಓಲೆ ಕಾಣಿಸುತ್ತಿದೆ.

ಈ ಕಾರಣವಾಗಿ ಎಲ್ಲ ಜಾನುವಾರುಗಳ ಕಿವಿಯಲ್ಲೀಗ ಫೈಬರ್ ಓಲೆ ಲೋಲಾಡುತ್ತಿದೆ. ಪ್ರಾಣಿಗಳ ಆರೋಗ್ಯ ಮತ್ತು ಉತ್ಪಾದನೆ ಮಾಹಿತಿ ಜಾಲ (Information network for animal productivity and health ) ಸಹಯೋಗದಲ್ಲಿ, ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿ (National Dairy Development Board) ರೂಪಿಸಿರುವ ಈ

> ವಿಶಿಷ್ಟವಾಗಿ ಸಿದ್ಧಪಡಿಸಿರುವ ಹಳದಿ ಬಣ್ಣದ ಮತ್ತು ಬಾರ್‌ಕೋಡ್ ಸಹಿತ ಫೈಬರ್ ಟ್ಯಾಗ್ ಮೇಲೆ ಹನ್ನೆರಡು ಸಂಖ್ಯೆಗಳನ್ನು ನಮೂದಿಸಲಾಗಿದೆ. ಅದನ್ನು ರಾಸುಗಳ ಕಿವಿಗಳ ಒಳ ಭಾಗದಲ್ಲಿ ಅಳವಡಿಸಲಾಗುತ್ತದೆ. ಸಾಕಷ್ಟು ಗಟ್ಟಿಮುಟ್ಟಾಗಿರುವ ಇದು ತೆಗೆಯಲು ಬರುವುದಿಲ್ಲ. ಮುರಿಯುವುದೂ ಇಲ್ಲ. ಗುರುತಿನ ಸಂಖ್ಯೆ ದೇಶದಲ್ಲಿ ಏಕರೂಪದ್ದಾಗಿರುವುದರಿಂದ ಈ ಜಾನುವಾರುಗಳು ಎಲ್ಲಿಯೇ ಹೋದರೂ ಸುಲಭವಾಗಿ ಪತ್ತೆಹಚ್ಚಲು ಇದು ಸಾಧ್ಯವಾಗುತ್ತದೆ



ಕಾರ್ಯಕ್ರಮವನ್ನು ಪಶುಪಾಲನೆ ಮತ್ತು ಪಶುವೈದ್ಯ ಇಲಾಖೆಯಿಂದ ದೇಶದ ಎಲ್ಲ ಭಾಗಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಈ ಓಲೆಯ ಮೂಲಕ ರಾಸುಗಳ ಆರೋಗ್ಯ ಮತ್ತು ಅವುಗಳ ಮಾಲೀಕರಿಗೆ ಸಂಬಂಧಿಸಿದ ಪ್ರತಿಯೊಂದು ವಿವರಗಳನ್ನು ನಿಗದಿತ ವೆಬ್‌ಸೈಟ್‌ದಲ್ಲಿ ದಾಖಲಿಸಿ ನಿರ್ವಹಿಸಲಾಗುತ್ತಿದೆ. ಈ ಕಾರ್ಯಕ್ರಮ ಪೂರ್ಣಗೊಂಡರೆ ಪ್ರತಿಯೊಂದು ಜಾನುವಾರುಗಳ ವೈಯಕ್ತಿಕ ಸಮಗ್ರ ವಿವರಗಳನ್ನು ಒಳಗೊಂಡ ಮಾಹಿತಿಯು ದೇಶದ ಯಾವುದೇ ಪ್ರದೇಶದಲ್ಲಿದ್ದರೂ ಬೆರಳ ತುದಿಯಲ್ಲಿ ಲಭ್ಯವಾಗುತ್ತದೆ.

**ಬಾರ್‌ಕೋಡ್ ಟ್ಯಾಗ್**

ವಿಶಿಷ್ಟವಾಗಿ ಸಿದ್ಧಪಡಿಸಿರುವ ಹಳದಿ ಬಣ್ಣದ ಮತ್ತು ಬಾರ್‌ಕೋಡ್ ಸಹಿತ ಫೈಬರ್ ಟ್ಯಾಗ್ ಮೇಲೆ ಹನ್ನೆರಡು ಸಂಖ್ಯೆಗಳನ್ನು ನಮೂದಿಸಲಾಗಿದೆ. ಅದನ್ನು ರಾಸುಗಳ ಕಿವಿಗಳ ಒಳ ಭಾಗದಲ್ಲಿ ಅಳವಡಿಸಲಾಗುತ್ತದೆ. ಸಾಕಷ್ಟು ಗಟ್ಟಿಮುಟ್ಟಾಗಿರುವ ಇದು ತೆಗೆಯಲು ಬರುವುದಿಲ್ಲ. ಮುರಿಯುವುದೂ ಇಲ್ಲ. ಗುರುತಿನ ಸಂಖ್ಯೆ ದೇಶದಲ್ಲಿ ಏಕರೂಪದ್ದಾಗಿರುವುದರಿಂದ ಈ ಜಾನುವಾರುಗಳು ಎಲ್ಲಿಯೇ ಹೋದರೂ ಸುಲಭವಾಗಿ ಪತ್ತೆಹಚ್ಚಲು ಇದು ಸಾಧ್ಯವಾಗುತ್ತದೆ ಎಂದು ಹಿರಿಯ ಪಶುವೈದ್ಯ ಅಧಿಕಾರಿ ಡಾ.ಸಿದ್ಧಲಿಂಗಯ್ಯ ಶೆಂಕೀನ ಮಾಹಿತಿ ನೀಡುತ್ತಾರೆ.

**ಆಧಾರ್ ಲಿಂಕ್**

ಇನಾಫ್ ತಂತ್ರಾಂಶದಲ್ಲಿ ರೂಪಿಸಲಾಗಿರುವ ವೆಬ್‌ಸೈಟ್‌ನಲ್ಲಿ ಟ್ಯಾಗ್ ಸಂಖ್ಯೆ, ರಾಸು, ಅವುಗಳ ಮಾಲೀಕರ ವಿವರಗಳನ್ನೂ ನೀಡಲಾಗಿರುತ್ತದೆ. ಅಷ್ಟೇ ಅಲ್ಲ ಮಾಲೀಕರ ಆಧಾರ್ ಗುರುತಿನ ಚೀಟಿ ಮತ್ತು ಮೊಬೈಲ್ ಸಂಖ್ಯೆಯನ್ನೂ ಲಿಂಕ್ ಮಾಡಲಾಗುತ್ತದೆ. ಒಂದೊಮ್ಮೆ ರಾಸು ಕಳೆದುಹೋಗಿ ಎಲ್ಲಿಯಾದರೂ ಪತ್ತೆಯಾದರೆ ಅದರ ಟ್ಯಾಗ್‌ದಲ್ಲಿರುವ ಸಂಖ್ಯೆಯ ಮೂಲಕ ಅದರ ಮಾಲೀಕರ ಹೆಸರು, ವಿಳಾಸ ಮತ್ತು ಮೊಬೈಲ್ ಸಂಖ್ಯೆಯ ಮೂಲಕ ವಿವರ ತಿಳಿಯಲು ಹಾಗೂ ಮಾಲೀಕರಿಗೆ ಮಾಹಿತಿ ತಿಳಿಸಲೂ ಸಾಧ್ಯವಾಗುತ್ತದೆ.

**ಇದರ ಉದ್ದೇಶ:**


ವಿಶಿಷ್ಟ ಗುರುತಿನ ಸಂಖ್ಯೆ ನೀಡುವುದರ ಹಿಂದೆ ಮಹತ್ವವಾದ ಉದ್ದೇಶವೂ ಇದೆ. ಸಂಬಂಧಿಸಿದ ರಾಸುಗಳ ಆರೋಗ್ಯದ ಮಾಹಿತಿ, ಹಿಂದೆ ಯಾವ ಯಾವ ಲಸಿಕೆ, ಚುಚ್ಚುಮದ್ದು ನೀಡಲಾಗಿದೆ. ಹಸು/ಎಮ್ಮೆ ಆಗಿದ್ದರೆ ಅದು ನೀಡುವ ಹಾಲು ಎಷ್ಟು, ಯಾವ ವರ್ಷದಲ್ಲಿ ಬೆದೆಗೆ ಬಂದಿದ್ದು ಮತ್ತು ಕರು ಹಾಕಿದ ದಿನ, ಕೃತಕ ಗರ್ಭಧಾರಣೆ ಮಾಡಿಸಿದ್ದು, ವಿಮೆ ವಿವರ... ಹೀಗೆ ಹತ್ತಾರು ವಿವರಗಳನ್ನು ವೆಬ್‌ಸೈಟ್‌ನಲ್ಲಿ ಪರಿಶೀಲಿಸುವುದಕ್ಕೆ ಪಶುವೈದ್ಯರಿಗೆ ಮತ್ತು ಮಾಲೀಕರಿಗೆ ಈ ಓಲೆಯ ಮೇಲಿರುವ ಬಾರ್‌ಕೋಡ್ ನೆರವಾಗುತ್ತದೆ.

ಅಲ್ಲದೆ ಒಬ್ಬ ಮಾಲೀಕ ಹೊಂದಿದ ರಾಸುಗಳ ಸಂಖ್ಯೆ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಪಡೆದ ವಿವಿಧ ಯೋಜನೆಗಳ ವಿವರವೂ ಬೆರಳ ತುದಿಯಲ್ಲಿ ದೊರೆಯುತ್ತದೆ. ಅಷ್ಟೇ ಅಲ್ಲದೆ ಪಶುಸಂಗೋಪನೆಗೆ ಸಂಬಂಧಿಸಿದಂತೆ ಯೋಜನೆ ರೂಪಿಸುವುದಕ್ಕೂ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಇದು ಪೂರಕವಾಗಲಿದೆ.

ಜಾನುವಾರುಗಳಿಗೆ ಈ ಹಿಂದೆಯೂ ಇಯರ್ ಟ್ಯಾಗ್ ಅಳವಡಿಸಲಾಗಿತ್ತಾದರೂ ಅದು ಕೇವಲ ಹಾಲು ಕೊಡುವ ಹಸು ಮತ್ತು ಎಮ್ಮೆಗಳಿಗೆ ಮಾತ್ರ ಸೀಮಿತವಾಗಿತ್ತು. ಆದರೆ ಕಾಲುಬಾಯಿ ಲಸಿಕೆಯನ್ನು ಎಲ್ಲಾ ಜಾನುವಾರುಗಳಿಗೆ ನೀಡಬೇಕಾಗಿರುವುದರಿಂದ ಹಸು, ಎಮ್ಮೆಗಳ ಜತೆಗೆ ಕೋಣ ಮತ್ತು ಎತ್ತುಗಳಿಗೂ ಇಯರ್ ಟ್ಯಾಗ್ ಅಳವಡಿಸಲು ಸೂಚಿಸಲಾಗಿದೆ. ಇಯರ್ ಟ್ಯಾಗ್ ಇಲ್ಲದ ಜಾನುವಾರುಗಳ ಮಾಹಿತಿಯನ್ನು ಇನಾಫ್‌ನಲ್ಲಿ ಅಪ್‌ಲೋಡ್ ಮಾಡದಿದ್ದಲ್ಲಿ ಅವುಗಳಿಗೆ ಕಾಲುಬಾಯಿ ಲಸಿಕೆ ಪೂರೈಸುವುದಿಲ್ಲ ಎಂದು ಕೇಂದ್ರ ಸರಕಾರ ಸ್ಪಷ್ಟವಾಗಿ ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ವತಿಯಿಂದ ರಾಜ್ಯದಲ್ಲಿ ಕಿವಿ ಓಲೆ ಅಭಿಯಾನವನ್ನು ಆರಂಭಿಸಲಾಗಿದೆ. ■



Downloaded From: www.kpscvaani.com





# ಕಲೆಯ ಬಲೆಯೊಳಡಗಿರುವ ಚರ್ಚ್


ಸುಭಾಸ ಯಾದವಾಡ,

> ಅತ್ಯಂತ ಪ್ರಾಚೀನ ಹಾಗೂ ಕಲಾಸೌಂದರ್ಯದಿಂದ ಮೇಳೈಸುತ್ತಿರುವ ಚರ್ಚ್ ಒಂದು ವಿಜಯಪುರದಲ್ಲಿದ್ದು, ಬೇಸಿಗೆಯ ರಣ ರಣ ಬಿಸಿಲಿನಲ್ಲೂ ಚರ್ಚಿನ ಒಳಾಂಗಣ ತಂಪಾಗಿರುತ್ತದೆ. ಇದು ಚರ್ಚ್ ವಿನ್ಯಾಸದ ವೈಶಿಷ್ಟ್ಯಗಳಲ್ಲೊಂದು.

ನಾಲ್ಕುನೂರು ವರ್ಷಗಳಷ್ಟು ಹಳೆಯದಾದ ಚರ್ಚ್ ತನ್ನ ಕಲಾವೈಭವದಿಂದ ಇಂದಿಗೂ ಜನಮಾನಸವನ್ನು ಸೆರೆಹಿಡಿಯುತ್ತಿದೆ. ಆದರೆ ಸುರಕ್ಷೆಯ ದೃಷ್ಟಿಯಿಂದ ಗಗನ್ ಮಹಲ್ ಹಿಂದಿರುವ ಈ ಚರ್ಚ್ ಸಾರ್ವಜನಿಕರಿಗೆ ಮುಕ್ತವಾಗಿಲ್ಲ. ಏಕೆಂದರೆ ಅದು ವಾರದಲ್ಲಿ ಒಂದು ದಿನ, ಅದೂ ಕೇವಲ ಎರಡು ಗಂಟೆ ಮಾತ್ರ ತೆರೆದಿರುತ್ತದೆ. ಭಾನುವಾರ ಸಂಜೆ 6 ರಿಂದ 8 ಗಂಟೆಯವರೆಗೆ ಮಾತ್ರ ಅಲ್ಲಿಗೆ ಹೋಗಬಹುದು. ಅದು ಯಾವಾಗ ತೆರೆದಿರುತ್ತದೆ ಎಂಬ ಬಗೆಗೆ ಮಾಹಿತಿ ಕೊಡುವ ಯಾವ ಫಲಕವೂ ಅಲ್ಲಿಲ್ಲ. ಚರ್ಚ್ ಬಾಗಿಲು ತೆರೆಯುವುದೇ ಇಲ್ಲ ಎಂಬ ಭಾವನೆ ಅನೇಕ ಜನರಲ್ಲಿದೆ. ಹೀಗಾಗಿ ವಾರದ 2 ಗಂಟೆಯ ಆ ಸ್ವಲ್ಪ ಸಮಯದ ಅವಧಿಯಲ್ಲಿ, ಅಲ್ಲಿಗೆ ಭೇಟಿ ಕೊಡುವ ಜನರ ಸಂಖ್ಯೆ ತೀರ ಕಡಿಮೆ.

ಬಹಳ ಹಳೆಯದಾದ ಈ ಚರ್ಚಿನ ಕೆಲವು ಭಾಗಗಳು ಶಿಥಿಲಾವಸ್ಥೆಯನ್ನು ತಲುಪಿವೆ. ಮುಟ್ಟಿದರೆ ಸಾಕು ಗೋಡೆಯ ಗಿಲಾಯಿ-ಬಣ್ಣ ಉದುರುತ್ತದೆ. ಹಾಗೆಂದು ಈ ಚರ್ಚಿನ ಆಯುಷ್ಯ ಮುಗಿಯಲು ಬಂದಿದೆ ಎಂದು ತೀರ್ಮಾನಿಸುವ ಅವಶ್ಯಕತೆ ಇಲ್ಲ. ಅದರ ನವಿರಾದ ಕೆತ್ತನೆ, ಅದಕ್ಕೆ ಲೇಪಿಸಿದ ಬಣ್ಣದ ತಾಜಾತನ ಇನ್ನೂ ಮಾಸಿಲ್ಲ. ಅದನ್ನು ಜನರ





ವೀಕ್ಷಣೆಗೆ ಮುಕ್ತವಾಗಿಟ್ಟರೆ ಎಲ್ಲಿ ಹಾಳಾಗಿ ಹೋಗುವುದೋ ಎಂಬ ಭಯ. ಆ ಚರ್ಚಿನ ಪಾದ್ರಿ ರೆವೆರಂಡ್ ಬಾಲರಾಜ ಸುಚಿತ್‌ಕುಮಾರ ಅವರಿಗಿದೆ. 'ನಮಗಂತೂ ಇಂಥದೊಂದು ಕಲಾತ್ಮಕ ಚರ್ಚ್ ನಿರ್ಮಿಸಲು ಸಾಧ್ಯವಿಲ್ಲ. ಅದರ ಸಂರಕ್ಷಣೆ ಮಾಡುವುದು ನಮ್ಮ ಕರ್ತವ್ಯ' ಎನ್ನುತ್ತಾರೆ. ಚರ್ಚಿನ ಕಲಾವೈಭವ ಹಾಳೂ ಆಗಬಾರದು... ಸಾರ್ವಜನಿಕರ ವೀಕ್ಷಣೆಗೆ ಲಭ್ಯವೂ ಆಗಬೇಕು... ಹಾಗೇನಾದರೂ ಮಾಡಿ ಎಂದರೆ, 'ಅದಕ್ಕೂ ನಾವು ಪ್ರಯತ್ನಿಸುತ್ತಿದ್ದೇವೆ. ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿ ಈ ಕಲಾಸಿರಿಯನ್ನು ಕಾಪಾಡಿಕೊಳ್ಳಲು ಹೇಗೆ ಸಾಧ್ಯ ಎಂದು ಚಿಂತಿಸುತ್ತಿದ್ದೇವೆ' ಎನ್ನುತ್ತಾರೆ ಬಾಲರಾಜ ಅವರು.

ಚರ್ಚ್ ದ್ವಾರದ ಮೇಲಿನ ಕಮಾನಿನಲ್ಲಿ 'ಸಿಎಸ್‌ಐ–ಆಲ್ ಸೇಂಟ್ಸ್ ಚರ್ಚ್' ಎಂದು ಆಂಗ್ಲ ಭಾಷೆಯಲ್ಲಿ ಬರೆಯಲಾಗಿದೆ. ಆ ಚರ್ಚಿಗೆ 'ಆಂಗ್ಲಿಕನ್ ಚರ್ಚ್' ಎಂಬ ಇನ್ನೊಂದು ಅಡ್ಡ ಹೆಸರೂ ಇದೆ. ಆಗಿನ ಕಾಲದಲ್ಲಿ ಆಂಗ್ಲ ಭಾಷೆಯಲ್ಲಿ ಪ್ರಾರ್ಥನೆ ಸಲ್ಲಿಸಲು, ಉನ್ನತ ಅಧಿಕಾರಿಗಳು ಆ ಚರ್ಚಿಗೆ ಬರುತಿದ್ದರಂತೆ. ಅಷ್ಟೇ ಅಲ್ಲ, ಅದು ಉನ್ನತ ಅಧಿಕಾರಿಗಳಿಗೆ ಮಾತ್ರ ಮೀಸಲಾಗಿತ್ತಂತೆ. ಜನಸಾಮಾನ್ಯರಿಗೆ ಅಲ್ಲಿ ಪ್ರವೇಶ ಇರಲಿಲ್ಲ. ದೊಡ್ಡ ಹುದ್ದೆಯಲ್ಲಿರುವ ಅಧಿಕಾರಿಗಳು ಎಲ್ಲೆಂದರಲ್ಲಿ ಹೋಗುವಂತೆ ಇರಲಿಲ್ಲ. ಹಾಗೆ ಹೋಗುವುದು ಅವರ ಸುರಕ್ಷತೆಯ ದೃಷ್ಟಿಯಿಂದ ಅಪಾಯಕಾರಿಯಾಗಿತ್ತು. ಹಾಗಾಗಿ ಗಣ್ಯವಕ್ತಿಗಳಿಗೆ ಮಾತ್ರ ಸೀಮಿತವಾಗಿತ್ತು.

ಈ ಚರ್ಚ್ ಪ್ರವೇಶ ದ್ವಾರದಲ್ಲಿ ಒಂದು ಬಹುಭಾರವಾದ ಕಲಾಕೃತಿ ಇದೆ. ಅದನ್ನು ನಿರ್ಮಿಸಲು ಯಾವ ಲೋಹವನ್ನು ಬಳಸಿದ್ದಾರೆ ಎಂಬುದು ಗೊತ್ತಿಲ್ಲ. ಅದನ್ನು ಸುಂದರವಾದ ಕಟ್ಟಿಗೆಯ ಚೌಕಟ್ಟಿನಲ್ಲಿ ಭದ್ರವಾಗಿ ಬಂಧಿಸಿಡಲಾಗಿದೆ. ಅದು ಪ್ರವೇಶದ್ವಾರಕ್ಕೆ ಪರದೆಯಂತೆ ನಿಂತುಕೊಂಡಿದೆ. ಅದನ್ನು ಕಟ್ಟಿಗೆಯ ಬಂಧನದಿಂದ ಬಿಡಿಸಿ, ನೇತುಹಾಕಿ ಬಾರಿಸಿದರೆ ಮನಮೋಹಕ ಧ್ವನಿ ಹೊರಡುತ್ತದೆ ಎಂದು ಹೇಳಲಾಗುತ್ತಿದೆ. ಅಲುಗಿಸಲೂ ಆಗದಷ್ಟು ಭಾರವಿರುವ ಅದನ್ನು ನೇತುಹಾಕುವುದು ಆಗದ ಮಾತು. ಈಗಂತೂ ಅದರ ಧ್ವನಿಯನ್ನು ಕೇಳಿದವರು ಯಾರೂ ಇಲ್ಲ. ಈ ಕಲಾಕೃತಿಯನ್ನು ತಮ್ಮ ದೇಶಕ್ಕೆ ಕೊಂಡೊಯ್ಯುವ ಹಲವು ವಿಫಲ ಪ್ರಯತ್ನಗಳನ್ನು ಬ್ರಿಟೀಷರು ಮಾಡಿದ್ದರಂತೆ ಎನ್ನುತ್ತಾರೆ ಬಾಲರಾಜ.

ಎರಡು ಅಂತಸ್ತಿನ ಈ ಕಟ್ಟಡದ ಕೆಳ ಅಂತಸ್ತಿನಲ್ಲಿ ಸುಂದರವಾದ ವರ್ಣರಂಜಿತ ಪ್ರಾರ್ಥನಾ ಮಂದಿರವಿದೆ. ಜನ ಕುಳಿತುಕೊಳ್ಳಲು ಭಾರವಾದ ಹಾಗು ಮಜಬೂತಾದ ಸಾಗವಾಣಿ ಕಟ್ಟಿಗೆಯ 6 ಆಸನಗಳಿವೆ. ಒಂದೊಂದು ಆಸನದಲ್ಲೂ 5 ಜನರಂತೆ 30 ಜನ ಆರಾಮಾಗಿ ಕುಳಿತುಕೊಳ್ಳಬಹುದು. ಅವುಗಳ ಎದುರಿಗಿರುವ ಡೆಸ್ಕುಗಳಲ್ಲಿ ಬೈಬಲ್ ಗ್ರಂಥಗಳಿವೆ. ಫಾದರ್, ಬಿಷಪ್ ಸೇರಿ 35 ಜನ ಏಕಕಾಲದಲ್ಲಿ ಪ್ರಾರ್ಥನೆ ಸಲ್ಲಿಸಬಹುದು. ಈ ಆಂಗ್ಲಿಕನ್ ಚರ್ಚಿನಲ್ಲಿ ಈಗ ಕನ್ನಡದಲ್ಲೂ ಪ್ರಾರ್ಥಿಸುವ ಅವಕಾಶವಿದೆ.

ಮೇಲಂತಸ್ತಿನಲ್ಲಿ ಅಧಿಕಾರಿಗಳ ವಿಶ್ರಾಮಕ್ಕಾಗಿ ನಿರ್ಮಿಸಿದ ಕೆಲವು ಕೋಣೆಗಳಿವೆ. ಅಲ್ಲಿರುವ ಛಾವಣಿ, ಗೋಡೆ, ಕಂಬಗಳಲ್ಲೂ ನವಿರಾದ ಕೆತ್ತನೆಯ ಕಲಾಕುಸುರಿ ಇದೆ. ಅದೆಲ್ಲ ಕೆನೆಬಣ್ಣದಲ್ಲಿದ್ದು ತುಂಬ ಆಕರ್ಷಕವಾಗಿದೆ. ಈಗ ಆ ಕೋಣೆಗಳನ್ನು ಯಾರೂ ಬಳಸುತ್ತಿಲ್ಲ. ಅವು ಅನುಪಯುಕ್ತ ವಸ್ತುಗಳ ಸಂಗ್ರಹಾಗಾರವಾಗಿ ಬಳಕೆಯಾಗುತ್ತಿವೆ.

ಈ ಚರ್ಚ್ ಕಟ್ಟಡದ ವಿನ್ಯಾಸವೇ ವಿಶಿಷ್ಟವಾಗಿದೆ. ಬಿರುಬಿಸಿಲಿನ ವಿಜಯಪುರದ ಬೇಸಿಗೆಯಲ್ಲೂ ಈ ಚರ್ಚ್‌ನ ಒಳಾಂಗಣ ತಂಪಾಗಿರುತ್ತದೆ. ಎತ್ತರದ ಛಾವಣಿ, ಕಿಟಕಿಗಳ ವೈಜ್ಞಾನಿಕ ವಿನ್ಯಾಸವೇ ಅಲ್ಲಿರುವ ತಣ್ಣಗಿನ ವಾತಾವರಣಕ್ಕೆ ಕಾರಣ ಎಂದು ಹೇಳಲಾಗುತ್ತಿದೆ.

ಕ್ರಿಶ್ಚಿಯನ್ ಅಧಿಕಾರಿಗಳ ಪ್ರಾರ್ಥನೆಗಾಗಿ, ಆಗಿನ ಮುಸ್ಲಿಂ ದೊರೆಯಾದ ಆದಿಲ್‌ಶಹನು ಈ ಚರ್ಚ್‌ನ್ನು ಕೊಡುಗೆಯಾಗಿ ನೀಡಿದನೆಂದು ಹೇಳಲಾಗುತ್ತದೆ. ಆದರೆ ಈ ಕುರಿತು ಸಂಶೋಧನೆಯಾಗಬೇಕಿದೆ. ಐತಿಹಾಸಿಕ ಸಂಶೋಧನೆಗಳಿಂದ ಕಟ್ಟಡಗಳ ಮೆರುಗು ಹೆಚ್ಚಲಿವೆ. ■





## ಕೃಷಿಯಲ್ಲಿ ಸಾಧನೆ ಮಾಡಿದ
# ಸ್ವಸಹಾಯ ಸಂಘದ ನಾರಿಯರು

ಬಾಳೇಪುಣಿ

**ಬಹುಪಾಲು ಸ್ವಸಹಾಯ ಸಂಘದ ಮಹಿಳೆಯರು ಗುಡಿ ಕೈಗಾರಿಕೆಯನ್ನೋ ಹೈನುಗಾರಿಕೆಯನ್ನೋ ಮಾಡಿದರೆ, ದಕ್ಷಿಣ ಕನ್ನಡ ಜಿಲ್ಲೆಯ ಬೆಳಾಲು ಗ್ರಾಮದ ಏಳು ಮಹಿಳೆಯರು ತೋಟಗಾರಿಕೆ ಮತ್ತು ಕೃಷಿಯಲ್ಲಿ ಸಾಧನೆ ಮಾಡಿದ್ದಾರೆ.**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳಷ್ಟು ಸ್ವಸಹಾಯ ಸಂಘಗಳಿವೆ. ಹಳ್ಳಿಯ ಯಾವುದೇ ಮೂಲೆಗೆ ಹೋದರೂ ಅಲ್ಲೊಂದು ಸರಕಾರಿ ಅಥವಾ ಖಾಸಗಿ ಸಂಸ್ಥೆಗಳ ಪ್ರವರ್ತನೆಯ ಸ್ವಸಹಾಯ ಸಂಘ ಇದ್ದೇ ಇರುತ್ತದೆ. ಆದರೆ ಸಾಧನೆಯ ಮೂಲಕ ಗಮನ ಸೆಳೆದ ಸಂಘಗಳು ಬಹಳ ಕಡಿಮೆಯೇ ಸರಿ. ಆದರೆ ಇಲ್ಲೊಂದು ಸ್ವಸಹಾಯ ಸಂಘ ಹುಟ್ಟಿದ ಒಂದೂವರೆ ವರ್ಷದಲ್ಲಿಯೇ ಗಣನೀಯ ಸಾಧನೆಯ ಮೂಲಕ ಸಾರ್ವತ್ರಿಕ ಪ್ರಶಂಸೆಗೆ ಪಾತ್ರವಾಗಿದೆ.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ (ಎನ್‌ಆರ್‌ಎಲ್‌ಎಂ) ಅಡಿಯಲ್ಲಿ ರಚನೆಯಾದ ಏಳು ಹೆಮ್ಮಕ್ಕಳ ಈ ಸ್ವಸಹಾಯ ಸಂಘ ಅಚ್ಚರಿಯನ್ನು ಸೃಷ್ಟಿಸಿದೆ. ಎನ್‌ಆರ್‌ಎಲ್‌ಎಂ ಗುಂಪುಗಳ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯ ಸಾರ್ವಜನಿಕ ವಲಯದಲ್ಲಿ ಒಂದು ರೀತಿಯ ಅಸಡ್ಡೆ ಇದೆ. ಅಸಡ್ಡೆ ವ್ಯಕ್ತ ಪಡಿಸುವ ಮಂದಿಗೆ ಬೆಳಾಲು ಗ್ರಾಮದ ಸ್ವಸಹಾಯ ಸಂಘ ಸಮರ್ಪಕ ಉತ್ತರವಾಗಿ ಮೂಡಿ ಬಂದಿದೆ.



Downloaded From: www.kpscvaani.com



ಬೆಳಾಲು ಬೆಳ್ತಂಗಡಿ ತಾಲೂಕಿನ ಒಂದು ಕಂದಾಯ ಗ್ರಾಮ. ಆ ಗ್ರಾಮದ ದೊಂಪದ ಪಲ್ಕೆ ಎಂಬಲ್ಲಿ ಆಸುಪಾಸಿನ ಸಪ್ತ ಹೆಣ್ಮಕ್ಕಳು ರಚಿಸಿದ ಸ್ವಸಹಾಯ ಸಂಘವಿದೆ. ಅದಕ್ಕೆ ಇಟ್ಟಿರುವ ಹೆಸರು 'ಕಸ್ತೂರ್ಬಾ ಸಂಜೀವಿನಿ' ಮಹಿಳಾ ಸ್ವಸಹಾಯ ಸಂಘ. ಮಧುರಾ ಎಂಬವರು ಈ ಸಂಘಕ್ಕೆ ಅಧ್ಯಕ್ಷರು. ಅಂತೆಯೇ ಇವರು ಬೆಳಾಲು ಗ್ರಾಮ ಪಂಚಾಯತ್ ಮಟ್ಟದ ಸ್ವಸಹಾಯ ಸಂಘಗಳ ಒಕ್ಕೂಟಕ್ಕೂ ಅಧ್ಯಕ್ಷರು.

ಹರಿಣಾಕ್ಷಿ ಸ್ವಸಹಾಯ ಸಂಘಕ್ಕೆ ಕಾರ್ಯದರ್ಶಿಯಾಗಿದ್ದಾರೆ. ಭವ್ಯಾ, ಯಶೋಧಾ, ವನಿತಾ, ಸೀತಾಲಕ್ಷ್ಮಿ ಮತ್ತು ಕಮಲಾ ಸಂಘದ ಇತರ ಸದಸ್ಯರು. ರವೀಂದ್ರ ಗೌಡ (ಮಧುರಾ ಅವರ ಪತಿ) ಈ ಮಹಿಳೆಯರಿಗೆ ಸಹಕಾರ, ಮಾರ್ಗದರ್ಶನ ನೀಡುತ್ತಿದ್ದಾರೆ.

ಸಪ್ತ ಮಹಿಳೆಯರು ಮಾಡಿದ ಸಾಧನೆಯನ್ನು (ಅದೂ ಒಂದೂವರೆ ವರ್ಷದ ಸಣ್ಣ ಅವಧಿಯಲ್ಲಿ)ನೋಡಿಯೇ ಅನುಭವಿಸಬೇಕು. ಅವರ ಸಾಧನೆಯನ್ನು ಅಕ್ಷರಗಳಲ್ಲಿ ಕಟ್ಟಿಕೊಡುವುದು ಕಷ್ಟ. ಅದನ್ನು ನೋಡಿಯೇ ನಂಬಬೇಕು ಮತ್ತು ಅನುಭವಿಸಬೇಕು.

### ಲೀಸ್‌ಗೆ ಜಮೀನು

ಈ ಸ್ವಸಹಾಯ ಗುಂಪಿನ ಸದಸ್ಯರಲ್ಲಿ ಒಬ್ಬರಾಗಿರುವ ಕಮಲಾ ಅವರಿಂದ ವರ್ಷಕ್ಕೆ ರೂ.20 ಸಾವಿರ ಬಾಡಿಗೆಗೆ ಎರಡು ವರ್ಷದ ಅವಧಿಗೆ ಎರಡೂವರೆ ಎಕರೆ ಜಮೀನನ್ನು ಸಂಘದ ಸದಸ್ಯರು ಲೀಸ್‌ಗೆ ಪಡೆದಿದ್ದಾರೆ. ಲೀಸ್‌ಗೆ ಪಡೆದ ಬಳಿಕ ಜಮೀನನ್ನು ಹದ ಮಾಡಿ ಬಾಳೆ ತೋಟ ಮಾಡಿದ್ದಾರೆ. ಎಷ್ಟು ಬಾಳೆ ಗೊತ್ತೇ, ಎರಡೂವರೆ ಎಕರೆಯಲ್ಲಿ ಅಂಗಾಂಶ ಕೃಷಿಯ ಒಂದೂವರೆ ಸಾವಿರ ಗಿಡಗಳನ್ನು ನೆಟ್ಟಿದ್ದಾರೆ. ಸಸಿಯೊಂದಕ್ಕೆ ರೂ.38ರಂತೆ ಅಂಗಾಂಶ ಕೃಷಿ ಗಿಡಗಳನ್ನು ಬೆಂಗಳೂರಿನ ಖಾಸಗಿ ನರ್ಸರಿಯಿಂದ ತರಿಸಿಕೊಂಡಿದ್ದಾರೆ. ಹಾಗೆ ತರಿಸಿಕೊಂಡ ಗಿಡಗಳನ್ನು ಒಂದೂವರೆ ತಿಂಗಳು ಜೋಪಾನ ಮಾಡಿದ ಬಳಿಕ ನಾಟಿ ಮಾಡಿದ್ದಾರೆ. ಈಗ ನಾಟಿ ಮಾಡಿ ಏಳು ತಿಂಗಳು ದಾಟಿದೆ. ಪ್ರಸ್ತುತ ಕ್ಯಾವಂಡೀಷ್ ತಳಿಯ ಸಾವಿರ ಬಾಳೆಗಳು ಗೊನೆ ಬಿಟ್ಟು ನಳನಳಿಸುತ್ತಿದೆ. ನೇಂದ್ರ ತಳಿಯ ಬಾಳೆಗಳು ಗರ್ಭ ತಳೆದು ಪ್ರಸವಕ್ಕೆ ಹತ್ತಿರವಾಗಿವೆ. 'ಕಸ್ತೂರ್ಬಾ ಸಂಜೀವಿನಿ' ಸ್ವಸಹಾಯ ಸಂಘದ ಸಪ್ತ ಸ್ತ್ರೀಯರು ಬಾಳೆ ತೋಟಕ್ಕೆ ಮಾತೃಪ್ರೀತಿಯನ್ನು ಉಣಿಸಿ ಪೋಷಿಸಿದ್ದಾರೆ.

ಅನ್ನ ಕೊಡುವ ಮಣ್ಣಿಗೆ ವಿಷ ಬೆರೆಸದಿರಲು ಅವರು ನಿರ್ಧರಿಸಿದ್ದಾರೆ. 'ನಾವು ತೋಟಕ್ಕೆ ರಸಗೊಬ್ಬರ, ರಾಸಾಯನಿಕವನ್ನು ಬಳಸಿಲ್ಲ' ಎಂಬುದನ್ನು ಇವರು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಬಾಳೆ ತೋಟಕ್ಕೆ ಕೋಳಿ ಗೊಬ್ಬರ ಹಾಕಿದ್ದಾರೆ. ಜೊತೆಗೆ ಜೀವಾಮೃತ ಸಿಂಪಡಿಸುತ್ತಾರೆ. ಕಾಯಿಗಳು ಉತ್ತಮ ಗಾತ್ರ ಹೊಂದಲು ಹೂವು ಕಿತ್ತು ಅಲ್ಲಿಗೆ ಜೀವಾಮೃತವನ್ನು ಕಟ್ಟುತ್ತಾರೆ. ಕಡ್ಲೆ ಹಿಟ್ಟು, ಬೆಲ್ಲ, ಗೋಮಯ, ಗೋಮೂತ್ರ ಬಳಸಿ ಜೀವಾಮೃತ ಸಿದ್ಧ ಪಡಿಸುವುದರಲ್ಲೂ ಈ ಸ್ವಸಹಾಯ ಸಂಘದ ಸದಸ್ಯರು ನಿಷ್ಣಾತರಾಗಿದ್ದಾರೆ.

**ನಮ್ಮ ಸ್ವಸಹಾಯ ಸಂಘದ ಆಲೋಚನೆಯ ಬಗ್ಗೆ ಪತಿಯಲ್ಲಿ ಚರ್ಚಿಸಿದಾಗ ಅವರು ಬೆಂಬಲಿಸಿದರು. ಕೃಷಿ ಕಾರ್ಯವನ್ನು ಕೈಗೆತ್ತಿಕೊಂಡರೆ ಸಂಘ, ಊರು ಮತ್ತು ಗ್ರಾಮಕ್ಕೆ ಹೆಸರು ಬರಲಿದೆ ಎಂದು ಪ್ರೋತ್ಸಾಹಿಸಿದರು. ತೋಟ ಮಾಡುವುದಕ್ಕೂ ಮಾರ್ಗದರ್ಶನ ಮಾಡಿದರು.**

– –ಮಧುರಾ, ಕಸ್ತೂರ್ಬಾ ಸಂಜೀವಿನಿ ಮಹಿಳಾ ಸ್ವಸಹಾಯ ಸಂಘದ ಅಧ್ಯಕ್ಷೆ



**ಕೋವಿಡ್ ಲಾಕ್‌ಡೌನ್ ಅವಧಿಯಲ್ಲಿ ಊರುಗಳು ಸ್ತಬ್ಧವಾಗಿದ್ದವು. ಬಹುತೇಕರಿಗೆ ಜೀವನ ನಿರ್ವಹಣೆ ಕಷ್ಟಕರವಾಗಿತ್ತು. ಅಂತಹ ಸಂದರ್ಭದಲ್ಲಿ ಇದೇ ಹೆಮ್ಮಕ್ಕಳು ಬಾಳೆ ತೋಟದ ಮಧ್ಯೆ ಇರುವ ಜಾಗದಲ್ಲಿ ಅಲಸಂದೆ ಬೆಳೆದಿದ್ದಾರೆ. ಅಲಸಂದೆಯಿಂದ ರೂ.50,000ದಷ್ಟು ಆದಾಯ ಬಂದಿದೆ. ಊರು ಮತ್ತು ಅಕ್ಕಪಕ್ಕದ ಊರುಗಳಲ್ಲಿ ಮನೆ ಮನೆಗೆ ತೆರಳಿ ಅಲಸಂದೆ ಮಾರಾಟ ಮಾಡಿದ್ದಾರೆ.**



ಗೊನೆಗಳನ್ನು ಮಾರಾಟ ಮಾಡಲು ಈಗಾಗಲೇ ಉಜಿರೆಯ ಸಗಟು ವ್ಯಾಪಾರಿಯೊಬ್ಬರನ್ನು ಸಂಘದ ಸದಸ್ಯರು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ತನ್ನದೇ ವಾಹನದಲ್ಲಿ ಮಂಗಳೂರಿಗೆ ಸಾಗಾಟ ಮಾಡಿ ಸಗಟು ವ್ಯಾಪಾರಿಗಳಿಗೆ ಮಾರಾಟಕ್ಕೆ ವ್ಯವಸ್ಥೆ ಮಾಡುವುದಾಗಿ ಭರವಸೆ ನೀಡಿದ್ದಾರೆ ಎಂದು ಸಂಘದ ಕಾರ್ಯದರ್ಶಿ ಹರಿಣಾಕ್ಷಿ  ತಿಳಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ.ಸೆಲ್ವಮಣಿ ಆರ್ ಅವರು ತೋಟಕ್ಕೆ ಭೇಟಿ ನೀಡಿ ಪ್ರೋತ್ಸಾಹ ನೀಡಿದ್ದಾರೆ. ಕೃಷಿ ವಿಜ್ಞಾನಿಯಾಗಿರುವ ಅವರು ಮಹಿಳಾ ತಂಡಕ್ಕೆ ಮಾರ್ಗದರ್ಶನ ಮಾಡಿದ್ದಾರೆ. ಬಾಳೆಯ ಎಲೆ, ದಿಂಡು ಮತ್ತು ಹೂವನ್ನು ಮಾರಾಟ ಮಾಡುವ ಮೂಲಕ ಇನ್ನಷ್ಟು ಸಂಪಾದನೆ ಮಾಡುವಂತೆ ಸಲಹೆ ನೀಡಿದ್ದಾರೆ. ಹಾಪ್‌ಕಾಮ್ಸ್ ಅಧಿಕಾರಿಗಳ ಜೊತೆಯಲ್ಲಿ ಮಾತುಕತೆ ನಡೆಸಿ ಮಾರಾಟಕ್ಕೆ ಅನುಕೂಲ ಮಾಡಿ ಕೊಡುವುದಾಗಿ ಹೇಳಿದ್ದಾರೆ. ಡಿಸೆಂಬರ್ ತಿಂಗಳಲ್ಲಿ ಕ್ಯಾವಂಡೀಷ್ ಬಾಳೆ ಕೊಯ್ಲಿಗೆ ಬರಲಿದೆ.

**ಬೆಳಾಲು ಗ್ರಾಮ ಪಂಚಾಯತ್‌ನ ಸಂಜೀವಿನಿ ಸ್ವಸಹಾಯ ಸಂಘಗಳ 'ನಾಗಾಂಬಿಕ' ಒಕ್ಕೂಟ ದಕ್ಷಿಣ ಕನ್ನಡ ಜಿಲ್ಲೆಗೆ ಮಾದರಿಯಾಗಿದೆ. ತರಬೇತಿ, ಮೂಲಭೂತ ಸೌಕರ್ಯ ಮೊದಲಾದ ಉದ್ದೇಶಗಳಿಗಾಗಿ ಈ ಒಕ್ಕೂಟಕ್ಕೆ ರೂ.9.6 ಲಕ್ಷ ವಿಶೇಷ ಅನುದಾನ ಮಂಜೂರಾಗಿದೆ. ರಾಜ್ಯದ ಆರು ಒಕ್ಕೂಟಗಳಿಗೆ ಮಾತ್ರ ವಿಶೇಷ ಅನುದಾನ ಮಂಜೂರಾಗಿದೆ.**

**ಹರಿಪ್ರಸಾದ್ ಗೌಡ**
ಎನ್‌ಆರ್‌ಎಲ್‌ಎಂ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು

### ತೋಟಕ್ಕೆ ಸೋಲಾರ್ ಬೇಲಿ

ಕೃಷಿ ಎಂದ ಮೇಲೆ ಒಂದಿಲ್ಲೊಂದು ಕಾಟ ಇದ್ದೇ ಇರುತ್ತದೆ. ದೊಂಪದ ಪಲ್ಕೆಯಲ್ಲಿ ಬಾಳೆ ತೋಟಕ್ಕೆ ಮಂಗಗಳ ಕಾಟ ಇದೆ. ಅದರಿಂದ ಬೆಳೆಯನ್ನು ರಕ್ಷಿಸಲು ಸುಮಾರು ರೂ.50,000 ಖರ್ಚು ಮಾಡಿ ಸೋಲಾರ್ ಬೇಲಿಯನ್ನು ಅಳವಡಿಸಲಾಗಿದೆ. ನಮಗೆಲ್ಲಾ ಗೊತ್ತು ಕೋವಿಡ್ ಲಾಕ್‌ಡೌನ್ ಅವಧಿಯಲ್ಲಿ ಊರುಗಳು ಸ್ತಬ್ಧವಾಗಿದ್ದವು. ಬಹುತೇಕರಿಗೆ ಜೀವನ ನಿರ್ವಹಣೆ ಕಷ್ಟಕರವಾಗಿತ್ತು. ಅಂತಹ ಸಂದರ್ಭದಲ್ಲಿ ಇದೇ ಹೆಮ್ಮಕ್ಕಳು ಬಾಳೆ ತೋಟದ ಮಧ್ಯೆ ಇರುವ ಜಾಗದಲ್ಲಿ ಅಲಸಂದೆ ಬೆಳೆದಿದ್ದಾರೆ. ಅಲಸಂದೆಯಿಂದ ರೂ.50,000ದಷ್ಟು ಆದಾಯ ಬಂದಿದೆ. ಊರು ಮತ್ತು ಅಕ್ಕಪಕ್ಕದ ಊರುಗಳಲ್ಲಿ ಮನೆ ಮನೆಗೆ ತೆರಳಿ ಅಲಸಂದೆ ಮಾರಾಟ ಮಾಡಿದ್ದಾರೆ.

ಸ್ವಸಹಾಯ ಸಂಘ ಆರಂಭಿಸಿದ ಸ್ವಲ್ಪದರಲ್ಲಿಯೇ ಏನಾದರೂ ಒಂದು ಸಾಧನೆ ಮಾಡಬೇಕು ಎಂದು ಒಮ್ಮತದಿಂದ ನಿರ್ಧರಿಸಿದೆವು. ಹಾಗಾಗಿ ತೋಟ ಮಾಡಬೇಕೆಂಬ ನಮ್ಮ ಆಲೋಚನೆಯನ್ನು ನನ್ನ ಪತಿಯವರಲ್ಲಿ ಹಂಚಿಕೊಂಡೆ. ಅವರು ನಮ್ಮ ಆಲೋಚನೆಯನ್ನು ಮೆಚ್ಚಿಕೊಂಡರು. 'ನಿಮ್ಮ ಈ ಪ್ರಯತ್ನ ಕಾರ್ಯರೂಪಕ್ಕೆ ಬಂದರೆ ನಿಮಗೆ, ಸಂಘಕ್ಕೆ ಮತ್ತು ಗ್ರಾಮಕ್ಕೆ ಹೆಸರು ಬರುತ್ತದೆ' ಎಂದು ಪ್ರೋತ್ಸಾಹ ನೀಡಿದರು. ಅಷ್ಟೇ ಅಲ್ಲದೆ ತೋಟ ಮಾಡುವುದಕ್ಕೆ ನಮಗೆ ಮಾರ್ಗದರ್ಶನ ಮಾಡಿದರು. ಈಗಲೂ ತೋಟದ ಕೆಲಸದಲ್ಲಿ ನಮ್ಮೊಂದಿಗೆ ಸಹಕರಿಸುತ್ತಾರೆ ಎಂದು ಅಧ್ಯಕ್ಷೆ ಮಧುರಾ ತೋಟ ಸೃಷ್ಟಿಯಾದ ಬಗ್ಗೆ ವಿವರಿಸುತ್ತಾರೆ.

'ಈಗ ಕಂದುಗಳು ಬಂದಿವೆ. ಮೊದಲ ಕಟಾವಿನ ಬಳಿಕ ಮತ್ತೆ ಕಂದುಗಳನ್ನು ಪೋಷಿಸುತ್ತೇವೆ. ಜೊತೆಗೆ ಮತ್ತಷ್ಟು ಜಮೀನು ಬಾಡಿಗೆಗೆ ಗೊತ್ತು ಪಡಿಸಿದ್ದೇವೆ. ಅದರಲ್ಲಿ ಪಪ್ಪಾಯಿ ಮತ್ತು ಕದಳಿ ಬಾಳೆ ಹಾಕುವ ಯೋಚನೆ ಇದೆ' ಎಂದು ಸದಸ್ಯರು ಅನಿಸಿಕೆ ವ್ಯಕ್ತ ಪಡಿಸುತ್ತಾರೆ.

ಈ ತಂಡದ ಸದಸ್ಯರಲ್ಲಿ ಇನ್ನೂ ಒಂದು ವಿಶೇಷವಿದೆ. ಇವರು ಬಾಳೆ ಕೃಷಿ ಮಾಡಿರುವುದು  ಒಂದು ವಿಶೇಷ ಹೌದು, ಇದಲ್ಲದೆ ತಮ್ಮ ಮನೆಗಳಲ್ಲಿ ಇತರ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಹೈನುಗಾರಿಕೆ, ಟೈಲರಿಂಗ್, ಎಂಬ್ರಾಯಿಡರಿ, ಜೇನು ಸಾಕಣೆ, ತರಕಾರಿ ಬೆಳೆಯುವಂತಹ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಮಧುರಾ ಅಣಬೆ ಕೃಷಿ ಮಾಡಿ ಮಾಸಿಕ ರೂ.20,000 ದಷ್ಟು ಆದಾಯ ಪಡೆಯುತ್ತಿದ್ದಾರೆ. ಅಣಬೆ ಸೀಡ್ಸ್ ಅನ್ನು ಆನ್‌ಲೈನ್ ಮೂಲಕ ಬೆಂಗಳೂರಿನಿಂದ ತರಿಸುತ್ತಾರೆ. ಒಂದು ರೀತಿಯಲ್ಲಿ ಈ ಸಪ್ತ ಸಹೋದರಿಯರು ಸಶಕ್ತ ಮಹಿಳೆಯರೇ ಸರಿ. ಇದೇ ಅಲ್ಲವೇ ಸುಸ್ಥಿರ ಆರ್ಥಿಕತೆ? 'ಕಸ್ತೂರ್ಬಾ ಸಂಜೀವಿನಿ' ಯ ಈ ಸಾಧಕ ಸಹೋದರಿಯರಿಗೆ ಅಭಿನಂದನೆ ಹೇಳೋಣ.



Downloaded From: www.kpscvaani.com



# ಸಂಬಾರ ಬೆಳೆಗಳ ಉತ್ಪಾದನೆ ಹೆಚ್ಚಿಸಲು ಮಾರ್ಗೋಪಾಯಗಳು

**ಸಂಬಾರ ಬೆಳೆಗೆ ಹೆಚ್ಚು ಬೆಲೆ ಸಿಗುವುದರಿಂದ, ಸಂಬಾರ ಬೆಳೆಗಳು ರೈತರಿಗೆ ಚಿನ್ನದ ಬೆಳೆ ಎಂದೇ ಪರಿಗಣಿಸಲಾಗುತ್ತದೆ. ಅಂತಹ ಚಿನ್ನದ ಬೆಳೆಯನ್ನು ಸರಿಯಾದ ಮಾರ್ಗೋಪಾಯದಲ್ಲಿ ಬೆಳೆಯುವ ಮೂಲಕ ರೈತರು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಬಹುದು.**

ಡಾ. ಹರ್ಷವರ್ಧನ್.ಎಂ

ಅನಾದಿ ಕಾಲದಿಂದಲೂ ಭಾರತವು 'ಸಂಬಾರ ಪದಾರ್ಥಗಳ ತವರು' ಎಂದು ಪ್ರಖ್ಯಾತವಾಗಿದ್ದು, ಪ್ರಪಂಚದಲ್ಲಿ ಸಂಬಾರ ಪದಾರ್ಥಗಳ ಹಾಗೂ ಉತ್ಪನ್ನಗಳ ಉತ್ಪಾದಕ, ಗ್ರಾಹಕ ಆಗಿರುವುದರ ಜೊತೆಗೆ ಪರದೇಶಗಳಿಗೆ ರಫ್ತು ಮಾಡುವಲ್ಲಿಯೂ ಸಹ ಮುಂಚೂಣೆಯಲ್ಲಿದೆ. ಭಾರತದಲ್ಲಿ ವೈವಿಧ್ಯಮಯ ಮಣ್ಣು, ಹವಾಗುಣ ಮತ್ತು ಭೌಗೋಳಿಕ ಸ್ಥಿತಿಗಳು ಇರುವುದರಿಂದ ಬಹುತೇಕ ಎಲ್ಲಾ ಸಂಬಾರ ಬೆಳೆಗಳನ್ನು ಬೆಳೆಯಬಹುದು. ಇತ್ತೀಚಿನ ವರ್ಷಗಳಲ್ಲಿ ಅಂತರರಾಷ್ಟ್ರೀಯ ಮಾರಕಟ್ಟೆಗಳಲ್ಲಿ ಸಂಬಾರ ಬೆಳೆಗಳ ಮೌಲ್ಯವರ್ಧಿತ, ಸಂಸ್ಕರಿಸಿದ ಉತ್ಪನ್ನಗಳಿಗೆ ಹಾಗೂ ಸಾವಯವ ಸಂಬಾರ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಭಾರತವು ಅಂತರರಾಷ್ಟ್ರೀಯ ಗುಣಮಟ್ಟದ ಉತ್ಪನ್ನಗಳನ್ನು ಉತ್ಪಾದನೆ ಮಾಡಲು ಹಾಗೂ ಉತ್ಪಾದನೆ ಹೆಚ್ಚಿಸಲು ವಿಫುಲ ಅವಕಾಶಗಳಿವೆ.

ಆದರೆ ಭಾರತದಲ್ಲಿನ ಸಂಬಾರ ಬೆಳೆಗಳ ಇಳುವರಿಯು ಬೇರೆ ಸ್ಪರ್ಧಾತ್ಮಕ ದೇಶಗಳ ಇಳುವರಿಗಿಂತ ಕಡಿಮೆ ಇದೆ. ಭಾರತದಲ್ಲಿನ ಆಂತರಿಕ ಬೇಡಿಕೆ ಪೂರೈಸಲು ಮತ್ತು ಹೊರ ದೇಶಗಳಿಗೆ ರಫ್ತು ಮಾಡಲು ಸಂಬಾರ ಬೆಳೆಗಳ ಕ್ಷೇತ್ರವನ್ನು ಹೆಚ್ಚಿಸುವುದರ ಜೊತೆಗೆ ಎಕರೆವಾರು ಮತ್ತು ಒಟ್ಟು ಉತ್ಪಾದನೆಯನ್ನು ಹೆಚ್ಚಿಸಬೇಕಾಗಿದೆ. ಆದರೆ ಭಾರತದಲ್ಲಿ ಸಂಬಾರ ಬೆಳೆಗಳ ಸಾಗುವಳಿ ಕೈಗೊಳ್ಳುವಲ್ಲಿ ಮತ್ತು ಉತ್ಪಾದನೆಯಲ್ಲಿ ಕೆಲವು ಸಮಸ್ಯೆಗಳು (ಅಡಚಣೆಗಳು) ಇವೆ. ಈ ಸಮಸ್ಯೆಗಳನ್ನು ಬಗೆಹರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ಬೆಳೆಗಾರರು ಮುಂದಾಗ ಬೇಕಾಗಿದೆ. ಹೀಗಾಗಿ ಸಂಬಾರ ಬೆಳೆಗಳ ಉತ್ಪಾದನೆಯಲ್ಲಿನ ಸಮಸ್ಯೆ (ಅಡಚಣೆ) ಗಳನ್ನು ಹಾಗೂ ಸಂಬಾರ ಬೆಳೆಗಳ ಉತ್ಪಾದನೆ ಹೆಚ್ಚಿಸಲು ಕೆಲವು ಮಾರ್ಗೋಪಾಯಗಳನ್ನು ಈ ಲೇಖನದಲ್ಲಿ ನೀಡಲಾಗಿದೆ.

**ಸಂಬಾರ ಬೆಳೆಯ ಕಡಿಮೆ ಇಳುವರಿಗೆ ಈ ಕೆಳಕಂಡ ಸಮಸ್ಯೆಗಳೇ ಕಾರಣ.**

- ಅಧಿಕ ಇಳುವರಿ ನೀಡುವ ತಳಿಗಳ ಉತ್ತಮ ಗುಣಮಟ್ಟದ ಬೀಜಗಳು ಮತ್ತು ನಾಟಿ ಸಾಮಗ್ರಿಗಳು ಸಾಕಷ್ಟು ಪ್ರಮಾಣದಲ್ಲಿ ಲಭ್ಯವಾಗುತ್ತಿಲ್ಲ. ಕಡಿಮೆ ಇಳುವರಿ ಹಾಗೂ ಕಳಪೆ ಗುಣಮಟ್ಟದ ತಳಿಗಳನ್ನು ರೈತರು ಬೆಳೆಯುತ್ತಿದ್ದಾರೆ.
- ಬೆಳೆಗಳಿಗೆ ಬೇಕಾಗುವಷ್ಟು ಪ್ರಮಾಣದಲ್ಲಿ ಸಾವಯವ ಮತ್ತು ರಸಗೊಬ್ಬರಗಳನ್ನು ಹಾಕದೇ ಇರುವುದು, ಕಡಿಮೆ ಪ್ರಮಾಣಗಳಲ್ಲಿ ಉಪಯೋಗಿಸುವುದು ಹಾಗೂ ಸಮತೋಲನ ಪ್ರಮಾಣದಲ್ಲಿ ಉಪಯೋಗಿಸದೇ ಇರುವುದು ಇವೆಲ್ಲವೂ ಕಡಿಮೆ ಇಳುವರಿಗೆ ಕಾರಣವಾಗಿವೆ.
- ಸಂಬಾರ ಬೆಳೆಗಳನ್ನು ಬೆಳೆಯಲು ಯೋಗ್ಯವಲ್ಲದ ಅತಿಯಾದ ಕಪ್ಪು ಮಣ್ಣುಗಳಲ್ಲಿ ಅಥವಾ ಅತಿಯಾದ ಮರಳು ಮಣ್ಣುಗಳಲ್ಲಿ ಬೆಳೆಯಲಾಗುತ್ತಿದೆ.
- ಕೃಷಿ ವಿಶ್ವವಿದ್ಯಾನಿಲಯಗಳಿಂದ ಶಿಫಾರಸು ಮಾಡಿದ ಸುಧಾರಿತ ಬೇಸಾಯ ಕ್ರಮಗಳನ್ನು, ಮಣ್ಣು ಮತ್ತು ನೀರು ಹಾಗೂ ತೇವಾಂಶ ಸಂರಕ್ಷಣಾ ಕ್ರಮಗಳನ್ನು ಅನುಸರಿಸದೇ ಇರುವುದು.
- ಸಮಗ್ರ ಕೀಟ ಮತ್ತು ರೋಗಗಳ ನಿರ್ವಹಣಾ ಕ್ರಮಗಳನ್ನು ಅನುಸರಿಸದೇ ಇರುವುದು.
- ಉತ್ತಮ ಗುಣಮಟ್ಟದ ಉತ್ಪಾದನೆ ಮಾಡಲು ಇತ್ತೀಚಿನ ತಂತ್ರಜ್ಞಾನಗಳ ಮಾಹಿತಿಯು ರೈತರಿಗೆ ತಿಳಿಯದೇ ಇರುವುದು.
- ಸರಿಯಾದ ಕೊಯ್ಲೋತ್ತರ ತಂತ್ರ ಕೌಶಲ್ಯಗಳು ಲಭ್ಯವಿಲ್ಲ.
- ಸಂಬಾರ ಪದಾರ್ಥಗಳನ್ನು ಕೆಡದಂತೆ ಸುರಕ್ಷಿತವಾಗಿ ಸಂಗ್ರಹಿಸಿಡಲು (ಶೇಖರಣೆ ಮಾಡಲು) ಗೋದಾಮುಗಳ ಹಾಗೂ ಸಂಗ್ರಹಣ ಸೌಲಭ್ಯಗಳ ಕೊರತೆ.
- ಬೆಳೆಗಾರರು ಬೆಳೆದ ಪದಾರ್ಥಗಳ ಬೆಲೆಗಳಲ್ಲಿ ಪದೇ ಪದೇ ಏರಿಳಿತಗಳು ಹಾಗೂ ಬೆಳೆಗಾರರು ಬೆಳೆದ ಪದಾರ್ಥಗಳಿಗೆ ಸರಿಯಾದ ಬೆಂಬಲ ಹಾಗೂ ವೈಜ್ಞಾನಿಕ ಬೆಲೆ ದೊರೆಯದೇ ಇರುವುದು ಹಾಗೂ ಸರಿಯಾದ ಮಾರುಕಟ್ಟೆ ವ್ಯವಸ್ಥೆಯ ಕೊರತೆ.
- ಚಂಡ ಮಾರುತ, ಬಿರುಗಾಳಿ, ಆಲಿಕಲ್ಲು ಬೀಳುವುದು, ಅಕಾಲಿಕ ಮಳೆ ಮುಂತಾದ ಹವಾಮಾನ ವೈಪರೀತ್ಯ, ನೈಸರ್ಗಿಕ ವಿಕೋಪಗಳು ಹಾಗೂ ಅತಿಯಾದ ಕೀಟ ಮತ್ತು ರೋಗಗಳ ಬಾಧೆಗೆ ತುತ್ತಾಗಿ ನಷ್ಟವಾದಾಗ ಬೆಳೆಗಾರರಿಗೆ ವಿಮೆ ಸೌಲಭ್ಯವನ್ನು ನೀಡದೇ ಇರುವುದು.
- ತಂತ್ರಜ್ಞಾನದ ಮಾಹಿತಿಯನ್ನು ಪರಿಣಾಮಕಾರಿಯಾಗಿ ವರ್ಗಾವಣೆ ಮಾಡಲು ಸರಿಯಾದ ವ್ಯವಸ್ಥಿತ ವಿಸ್ತರಣಾ ಜಾಲದ ವ್ಯವಸ್ಥೆಯ ಕೊರತೆ.
- ಭಾರತದಲ್ಲಿ ಬೆಳೆಗಾರರು ಹೆಚ್ಚು ಇಳುವರಿ ಪಡೆಯಲು ಪ್ರಾಧಾನ್ಯತೆ ನೀಡುತ್ತಿರುವುದು ಹಾಗೂ ಪದಾರ್ಥಗಳ ಗುಣಮಟ್ಟದ ಉತ್ಪಾದನೆಗೆ ಮಾನ್ಯತೆ ನೀಡದೇ ಇರುವುದು.
- ಸಂಬಾರ ಬೆಳೆಗಳಿಗೆ ಅತಿಯಾಗಿ ಹಾಗೂ ವಿವೇಚನೆಯಿಲ್ಲದೇ ಹಾನಿಕಾರಕ ಸಸ್ಯ ಸಂರಕ್ಷಣಾ ರಾಸಾಯನಿಕ ವಸ್ತುಗಳ ಬಳಕೆಯಿಂದಾಗಿ ಪದಾರ್ಥಗಳಲ್ಲಿ ಕೀಟನಾಶಕಗಳ ವಿಷದ ಶೇಖರಣೆಯಾಗುವುದರಿಂದ ರಫ್ತು ಮಾಡುವಾಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಬಿಗಿಯಾದ ಹಾಗೂ ಕಟ್ಟುನಿಟ್ಟಾದ ಆಹಾರ ಕಾಯಿದೆಗಳಿಂದಾಗಿ ಭಾರತದ ಪದಾರ್ಥಗಳು ತ್ಯಜಿಸಲ್ಪಡುತ್ತವೆ.
- ಸಂಬಾರ ಪದಾರ್ಥಗಳ ಮೌಲ್ಯವರ್ಧನೆ ಮಾಡಲು ಮೂಲಭೂತ ಸೌಕರ್ಯಗಳ ಕೊರತೆ.

**ಸಂಬಾರ ಬೆಳೆಗಳ ಉತ್ಪಾದನೆ ಹೆಚ್ಚಿಸಲು ಮಾರ್ಗೋಪಾಯಗಳು**

- ಸಂಬಾರ ಬೆಳೆಗಳ ವಿವಿಧ ತಳಿಗಳ ಸಂಗ್ರಹಣೆ, ಮೌಲ್ಯಮಾಪನ ಮತ್ತು ಸಂರಕ್ಷಣೆ ಮಾಡಲು ಆದ್ಯತೆ ನೀಡಬೇಕು.
- ಬರ ನಿರೋಧಕ, ಉಪ್ಪು ಮತ್ತು ಉಷ್ಣಗಳಿಗೆ ಸಹಿಷ್ಣುತೆ ಹೊಂದಿರುವ ತಳಿಗಳ ಸಂವರ್ಧನೆ (ಉತ್ಪಾದನೆ) ಮಾಡಬೇಕು.
- ಉತ್ಕೃಷ್ಟ ಗುಣಮಟ್ಟದ ಬೀಜಗಳನ್ನು ಉತ್ಪಾದನೆ ಮಾಡುವುದರ ಜೊತೆಗೆ ಬೆಳೆಗಾರರಿಗೆ ಸಕಾಲದಲ್ಲಿ ವಿತರಣೆ ಮಾಡಬೇಕು.
- ಬೆಳೆಗಾರರಿಗೆ ಕಾಲಕಾಲಕ್ಕೆ ಪರಿಣಿತರಿಂದ ಸಲಹೆ, ಸೂಚನೆ ಮತ್ತು ಮಾರ್ಗದರ್ಶನ ತಲುಪಿಸಬೇಕು.
- ಸಾವಯವ ಸಂಬಾರ ಪದಾರ್ಥಗಳ ಉತ್ಪಾದನೆಗೆ ಆದ್ಯತೆ ನೀಡಬೇಕು.
- ಸಂಬಾರ ಪದಾರ್ಥಗಳ ಮೌಲ್ಯವರ್ಧನೆ ಮಾಡಲು ಕೊಯ್ಲೋತ್ತರ ತಂತ್ರಜ್ಞಾನಗಳನ್ನು ನಿರ್ದಿಷ್ಟ ಮಾಡಬೇಕು.
- ಪ್ರತಿಯೊಂದು ಬೆಳೆಗಳಿಗೆ ಪೂರ್ತಿಯಾಗಿ ಬೆಳೆ ಪರಿಪಕ್ವತೆ (ಮಾಗುವ) ಯಾಗುವ ಸಮಯದ ಮಾರ್ಗಸೂಚಿಕೆಗಳನ್ನು ನಿಗದಿ ಮಾಡಬೇಕು.
- ಕೀಟ ಮತ್ತು ರೋಗಗಳ ಹತೋಟಿ ಮಾಡಲು ನಿಯಂತ್ರಣ ಕ್ರಮಗಳ ವಿವರ ಪಟ್ಟಿ ತಯಾರು ಮಾಡಬೇಕು.
- ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಲು ಗ್ರಾಮ ಹಾಗೂ ತಾಲೂಕು ಮಟ್ಟಗಳಲ್ಲಿ ಸಹಕಾರ ಸಂಘಗಳನ್ನು ಸ್ಥಾಪಿಸಬೇಕು.
- ಗ್ರಾಮ ಮಟ್ಟದಲ್ಲಿ ಸಂಸ್ಕರಣ ಘಟಕಗಳನ್ನು ಸ್ಥಾಪಿಸಬೇಕು.


ಈ ಮೇಲೆ ತಿಳಿಸಿರುವ ಸಂಬಾರ ಬೆಳೆಗಳ ಸಾಗುವಳಿ (ಉತ್ಪಾದನೆ) ಯಲ್ಲಿನ ಸಮಸ್ಯೆ (ಅಡಚಣೆ) ಗಳನ್ನು ನಿವಾರಣೆ ಮಾಡುವ ದಿಸೆಯಲ್ಲಿ ಬೆಳೆಗಾರರು ಮತ್ತು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಇಚ್ಛಾಶಕ್ತಿ ವಹಿಸಿ ಕಾರ್ಯೋನ್ಮುಖರಾದಲ್ಲಿ ಭಾರತದಲ್ಲಿನ ಸಂಬಾರ ಬೆಳೆಗಳ ಕ್ಷೇತ್ರ ಹಾಗೂ ಎಕರೆವಾರು ಮತ್ತು ಒಟ್ಟು ಉತ್ಪಾದನೆಯನ್ನು ಹೆಚ್ಚಿಸಬಹುದು, ಜೊತೆಗೆ ಭಾರತದಲ್ಲಿನ ಸಂಬಾರ ಬೆಳೆಗಳ ಭವಿಷ್ಯ ಉಜ್ವಲವಾಗುತ್ತದೆ. ಎಲ್ಲರೂ ಒಟ್ಟುಗೂಡಿದರೆ ಅಸಾಧ್ಯವೆಂಬುದಿಲ್ಲ. ಬನ್ನಿ ಎಲ್ಲರೂ ಸೇರಿ ಸಂಬಾರ ಬೆಳೆಗಳ ಉತ್ಪಾದನೆ ಹೆಚ್ಚಿಸುವುದರ ಮೂಲಕ ಭಾರತಾಂಬೆಯ ಮುಡಿಗೆ ಮತ್ತೊಂದು ಹಿರಿಮೆ ಮತ್ತು ಕೀರ್ತಿಯ ಗರಿ ಮುಡಿಸೋಣಾ.





Downloaded From: www.kpscvaani.com

# ಪದಬಂಧ–13



ವಿದ್ಯಾ ವಿ. ಹಾಲಭಾವಿ

**ಎಡದಿಂದ ಬಲಕ್ಕೆ**

1. ಸುಗಂಧಯುಕ್ತ ನೀರು (3)
2. ಬೆಳೆದ ಬೆಳೆಯಿಂದ ಕಸಕಡ್ಡಿಗಳನ್ನು ಬೇರ್ಪಡಿಸು (2)
3. ಕಿಟಕಿ ಇಲ್ಲಿ ಕಾಣುತ್ತಿದೆ (4)
4. ಸಂಕೋಲೆ ಅಥವಾ ಸೆರೆಮನೆವಾಸ (3)
5. ಹಾಲಿನ ಸಾರವತ್ತಾದ ಭಾಗ (2)
7. ಇವರು ಹುಟ್ಟಿದ ದಿನವನ್ನು ರಾಷ್ಟ್ರೀಯ ಗಣಿತ ದಿನ ಎಂದು ಆಚರಿಸಲಾಗುತ್ತದೆ (9)
10. ಸುಮಧುರ ಪರಿಮಳ ಬೀರುತ್ತಿರುವ ಹೂ (2)
12. ನೂರರ ಮೊತ್ತ (3)
13. ಹಣವಿರುವ ಅಗಲವಾದ ತಟ್ಟೆ! (4)
14. ಭೂಲೋಕದ ಅಮೃತ! (2)
15. ಐತಿಹಾಸಿಕ ತಾಣ ಲಕ್ಕುಂಡಿ ಈ ಜಿಲ್ಲೆಯಲ್ಲಿದೆ (3)

**ಮೇಲಿಂದ ಕೆಳಕ್ಕೆ**

1. ಹೃದಯದಿಂದ ದೇಹದ ಇತರೆ ಭಾಗಕ್ಕೆ ರಕ್ತವನ್ನು ಸಾಗಿಸುವರಕ್ತನಾಳ (5)
2. ಓಬವ್ವನ ಆಯುಧ (3)
3. ಋಷಿ ಹಾಗೂ ಸಂಸ್ಕೃತ ಕವಿ, ರಾಮ ಚರಿತೆ ಕುರಿತು ರಚಿಸಿದ ಮಹಾಕಾವ್ಯವು ಕವಿಯ ಹೆಸರಿನೊಂದಿಗಿದೆ (7)
6. ಜೇನು ಹುಳುವಿನಿಂದಾಗುವ ಸಿಹಿ ರಸ (2)
8. ಸರಸ್ವತಿಯ ಇನ್ನೊಂದು ಹೆಸರು (2)
9. ನೀರಿನ ಅಲೆ ಎಂಬರ್ಥದ ವಾದ್ಯ (5)
11. ಭವ್ಯವಾದ ಸೌಧ (3)

**ಉತ್ತರ**

**ಮೇಲಿಂದ ಕೆಳಕ್ಕೆ**

1. ಅಪಧಮನಿ 2. ಒನಕೆ 3. ವಾಲ್ಮೀಕಿರಾಮಾಯಣ
6.ಜೇನು 8. ವಾಣಿ 9. ಜಲತರಂಗ 11. ಮಹಲು

**ಎಡದಿಂದ ಬಲಕ್ಕೆ**

1. ಅತ್ತರು 2. ಒಕ್ಕು 3. ವಾತಾಯನ 4. ಬಂಧನ
5. ಕೆನೆ 7.ಶ್ರೀನಿವಾಸ ರಾಮಾನುಜನ್ 10. ಸುಮ
12. ಶತಕ 13. ಹರಿವಾಣ 14. ಹಾಲು 15.ಗದಗ

**–: ಸೂಚನೆ :–**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ–ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.,, Dr Rajkumar Road, Rajajinagar, Bangalore - 560 010

Downloaded From: www.kpscvaani.com